ರಂಜನೆ ಬೋಧನೆ ಪ್ರಚೋದನೆ

# ಲಂಕೇಶ್


07 ಅಕ್ಟೋಬರ್ 2015 ಪುಟ 20 ರೂ. 15/-



ಇಗ್‌ನೊಬೆಲ್ ವಿಜ್ಞಾನಲೋಕದ ಸಂಗತಿಗಳು



## ಪ್ರವಾದಿ ಸಿನಿಮಾಗೆ ಫತ್ವಾ ಫಜೀತಿ




## ಸಂಪುಟದ ಪುನರ್ರಚನೆ ಅಂದರ್ ಬಾಹರ್ ಆಟ ಶುರು


### ಹುಬ್ಬಳ್ಳಿ
ಂಜುಮಾನ್‌ನಲ್ಲಿ
ಾಜಕೀಯ



### ದಕ್ಷಿಣ ಕನ್ನಡ
ಅಡ್ಡಕತ್ತರಿಯಲ್ಲಿ ದೇಶಪಾಂಡೆ




# ಲೇಖಕರು ಹೋರಾಟಗಾರರಲ್ಲವಾ? ಹೋರಾಟಗಾರರು ಲೇಖಕರಲ್ಲವಾ? ಇತ್ಯಾದಿ




ಇಂಗ್ಲಿಷಿನ ಆಕ್ಟಿವಿಸ್ಟ್ (activist) ಪದಕ್ಕೆ ಸಂವಾದಿಯಾದ ಸೂಕ್ತ ಕನ್ನಡದ ಪದ ನನಗೆ ಗೊತ್ತಿಲ್ಲ. ಸಾಮಾಜಿಕ ಕಾರ್ಯಕರ್ತ, ಹೋರಾಟಗಾರ ಇತ್ಯಾದಿ ಪದಗಳು ಬಳಕೆಯಲ್ಲಿವೆ. ಹೋರಾಟಗಾರರನ್ನು ಓರಾಟಗಾರರೆಂದು ಲೇವಡಿ ಮಾಡುವುದೂ ಇದೆ. ಅದೇನೇ ಇರಲಿ, ಈ ಲೇಖನದ ಮಟ್ಟಿಗೆ ಆಕ್ಟಿವಿಸ್ಟ್‌ಅನ್ನು ಹೋರಾಟಗಾರ ಎಂತಲೇ ಬಳಸಿದ್ದೇನೆ. ಆದರೆ ಹೋರಾಟಗಾರ ಯಾರು ಎಂಬುದು ಮಾತ್ರ ಸ್ಪಷ್ಟವಿಲ್ಲ. ಏಕೆಂದರೆ, ಕೆಲವರನ್ನು ಪರಿಚಯ ಮಾಡಿಕೊಡುವಾಗ 'ಇವರು ಹೋರಾಟಗಾರರು' ಎಂದು ಹೇಳುತ್ತಾರೆ. ಹಾಗೆ ಪರಿಚಯ ಮಾಡಿಕೊಡುತ್ತಿರುವವರೂ ಸಹ ಸಾಮಾಜಿಕ ಕಾಳಜಿ ಇಟ್ಟುಕೊಂಡು ಹೋರಾಟಗಳಲ್ಲಿ ಭಾಗಿಯಾಗುತ್ತಿರುತ್ತಾರೆ. ಆದರೆ, ತಮ್ಮ ಪರಿಚಯದಲ್ಲಿ ಹೋರಾಟ ಇರುವುದಿಲ್ಲ. ಬದಲಿಗೆ, 'ನಾನು ಮೇಷ್ಟ್ರು, ನಾನು ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇನೆ' ಇತ್ಯಾದಿ ಇರುತ್ತದೆ. ಹಾಗಾದರೆ, ಹೋರಾಟಗಾರರು ಎನ್ನುವವರು ಪ್ರತ್ಯೇಕ ಪ್ರಬೇಧವೇ? ವಿವಿಧ ಬಗೆಯ ವೃತ್ತಿನಿರತರು ಒಂದು ವೇಳೆ ಸಾಮಾಜಿಕ ಚಳವಳಿಗಳಲ್ಲಿ ಭಾಗಿಯಾಗುತ್ತಿರುವವರೂ ಆಗಿದ್ದರೆ, ಅವರು ಹೋರಾಟಗಾರರಲ್ಲವೇ ಎಂಬ ಪ್ರಶ್ನೆ ಆಗಾಗ ಏಳುತ್ತದೆ.

ಚಳವಳಿಗಳಲ್ಲಿ ಹಲವರು ಪೂರ್ಣಾವಧಿ ಕಾರ್ಯಕರ್ತರಾಗಿ ಇರುತ್ತಾರೆ. ಕೆಲವು ಸಂಘಟನೆಗಳಲ್ಲಿ (ಮುಖ್ಯವಾಗಿ ಎಡಪಂಥೀಯ ಸಂಘಟನೆಗಳಲ್ಲಿ) ಘೋಷಿತ ಪೂರ್ಣಾವಧಿ ಕಾರ್ಯಕರ್ತರಿರುತ್ತಾರೆ. ರೈತ ಚಳವಳಿ ಮತ್ತು ದಲಿತ ಚಳವಳಿಗಳಲ್ಲೂ ಸಾವಿರಾರು ಜನರು ಪೂರ್ಣಾವಧಿ ಚಳವಳಿಯ ಕೆಲಸದಲ್ಲಿ ತೊಡಗಿಕೊಂಡವರಿರುತ್ತಿದ್ದರು. ಅಂತಹವರು ಇಲ್ಲದೇ ಯಾವುದೇ ವಿಸ್ತಾರವಾದ ಚಳವಳಿ ಸಾಧ್ಯವಿಲ್ಲ. ಆದರೆ, ಆ ಚಳವಳಿಯ ಬಹುಸಂಖ್ಯಾತರು ಪೂರ್ಣಾವಧಿ ಆಗಿರುವುದಿಲ್ಲ. ಅವರೆಲ್ಲರೂ ಸೇರಿಯೇ ಹೋರಾಟಗಾರರಲ್ಲವೇ? ಹಾಗಿಲ್ಲದೇ ಎಂದಾದರೂ, ಎಲ್ಲಿಯಾದರೂ ಪೂರ್ಣಾವಧಿ ಹೋರಾಟಗಾರರು ಮಾತ್ರ ಭಾಗಿಯಾಗುವ ಚಳವಳಿ ಇರುವ ಸಾಧ್ಯತೆಯಿದೆಯೇ? ಇರಬಹುದು. ಆದರೆ, ಬಹುಶಃ ಅದನ್ನು ಚಳವಳಿ ಎಂದು ಕರೆಯಲಾಗದು.

ಚಳವಳಿಯನ್ನು ತಮ್ಮ ಬದುಕಿನ ಅವಿಭಾಜ್ಯ ಅಂಗವಾಗಿಸಿಕೊಂಡಿರುವ, ಸಾಮಾಜಿಕ ಬದಲಾವಣೆಯಲ್ಲಿ ನಿರತರಾಗಿರುವ ಎಲ್ಲರೂ ಹೋರಾಟಗಾರರೇ. ಇಂಗ್ಲಿಷಿನ ಆಕ್ಟಿವಿಸ್ಟ್‌ಅನ್ನು ಬಳಸಿದಾಗ, ಕೆಲವರಿಗೆ ಸಮಸ್ಯೆ ಇರುವುದಿಲ್ಲ. ಹೋರಾಟಗಾರ ಐಡೆಂಟಿಟಿ ಮಾತ್ರ ಹಿತವಾಗದೇ ಇರುವುದರಲ್ಲಿ ಪದದ ಸಮಸ್ಯೆ ಮಾತ್ರ ಇಲ್ಲ. ಇದುವರೆಗಿನ ಹೋರಾಟಗಾರರು ಮಾಡಿರುವ, ಮಾಡಿಕೊಂಡಿರುವ ಸಮಸ್ಯೆಗಳೂ ಅದಕ್ಕೆ ಕಾರಣ. ಜೊತೆಗೆ ಈ ಸಮಾಜದಲ್ಲಿ ಇಂತಹದೊಂದು ಸಾಮಾಜಿಕ ಕ್ರಿಯೆಯ ಕುರಿತು ಇರುವ ಅಭಿಪ್ರಾಯಗಳು, ಪೂರ್ವಗ್ರಹಗಳು, ಸಿನಿಕತನ ಮತ್ತು



ತಪ್ಪು ಅಭಿಪ್ರಾಯಗಳೂ ಕಾರಣವಾಗಿವೆ. ಈ ಎರಡೂ (ಹೋರಾಟಗಾರರಲ್ಲಿನ ಸಮಸ್ಯೆ ಮತ್ತು ಅದನ್ನು ನೋಡುತ್ತಿರುವ 'ಇತರರ'ಲ್ಲಿನ ಸಮಸ್ಯೆ) ಕಾರಣಗಳಿಲ್ಲದೇ ಇದ್ದಲ್ಲಿ, ತಾನು ಒಬ್ಬ ಹೋರಾಟಗಾರ ಎಂದು ಹೇಳಿಕೊಳ್ಳುವುದು ಅತ್ಯಂತ ಹೆಮ್ಮೆಯ ಸಂಗತಿ ಮಾತ್ರ ಆಗಿರಬೇಕಿತ್ತು.

ಸಂಘಟನೆಯೊಂದರ ಸಕ್ರಿಯ ಕಾರ್ಯಕರ್ತನಾಗಿರುವ ನನ್ನನ್ನು ಇತ್ತೀಚೆಗೆ ದೊಡ್ಡ ಪತ್ರಿಕೆಯೊಂದರ ವರದಿಗಾರರು 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ಕುರಿತು ಅಭಿಪ್ರಾಯ ಕೇಳಿದರು. ನನಗನ್ನಿಸಿದ್ದನ್ನು ಹೇಳಿದೆ. ಅದು ನಂತರ ಪತ್ರಿಕೆಯಲ್ಲಿ ಪ್ರಕಟವೂ ಆಯಿತು. ಆದರೆ, ಅದರಲ್ಲಿ ನನ್ನ ಹೆಸರಿನ ಜೊತೆಗೆ 'ಲೇಖಕ' ಎಂದು ಕಾಣಿಸಿದರು. ನನ್ನ ಪ್ರಧಾನ ಗುರುತು ಸಂಘಟನೆಯ ಕಾರ್ಯಕರ್ತನಾಗಿರುವುದೇ ಆಗಿದೆ ಎಂಬುದು ಆ ವರದಿಗಾರರಿಗೂ ಗೊತ್ತಿತ್ತು ಮತ್ತು ನಿಜಕ್ಕೂ ಜನಪರವಾದ ಕಾಳಜಿಗಳು ಮತ್ತು ಬದ್ಧತೆಯನ್ನು ಹೊಂದಿರುವ ಪತ್ರಕರ್ತರು ಅವರು. ಈ ಬದಲಾವಣೆಯನ್ನು ಮಾಡಿದ್ದು ಅವರೋ ಅಥವಾ ಅದು ಪತ್ರಿಕೆಯ ನೀತಿಯ ಭಾಗವೋ ಗೊತ್ತಿಲ್ಲ. ಆದರೆ ಒಂದು ಅಂಶವಂತೂ ನಿಜ. ಹೋರಾಟಗಾರರಿಗಿಂತ ಲೇಖಕರಿಗೆ ಹೆಚ್ಚು ಮಾನ್ಯತೆ ಇದೆ. ಇದೂ ಸಹ 'ಅಷ್ಟು ದೊಡ್ಡ ಚಳವಳಿಗಳು ಇಲ್ಲವೆಂದು ಹೇಳಲಾಗುತ್ತಿರುವ' ಈ ಕಾಲದ ಕಾಲಧರ್ಮ ಮಾತ್ರವಲ್ಲ. ಪ್ರತಿಯೊಬ್ಬರಿಗೂ ಅವರವರ ಬದುಕಿನ ಸಾಧನೆ ಹಾಗೂ ಮಹತ್ವಕ್ಕೆ ತಕ್ಕಂತ ಮಾನ್ಯತೆಯಷ್ಟೇ ಇರುತ್ತದೆ. ಬದ್ಧತೆಯುಳ್ಳ ಒಬ್ಬ ದೊಡ್ಡ ಹೋರಾಟಗಾರನಿಗೆ, ಅಥವಾ ಹೋರಾಟಗಾರ್ತಿಗೆ ಒಬ್ಬ ಸಾಧಾರಣ ಲೇಖಕರಿಗಿಂತ ಹೆಚ್ಚಿನ ಮಹತ್ವ ಸಿಗಲೂಬಹುದು. ಆದರೂ, ವಿಶೇಷ ಸಾಧನೆ ಮಾಡಿರುವ, ಸುದೀರ್ಘಕಾಲ ಸಾಮಾಜಿಕ ಚಳವಳಿಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡಿರುವ ಆಕ್ಟಿವಿಸ್ಟ್‌ಗಿಂತ ಬರಹಗಾರರಿಗೆ ಹೆಚ್ಚಿನ ಮಾನ್ಯತೆ ಇರುವುದು ವಾಸ್ತವ.

ಇದು ಈ ಬರಹ ಮಾಡುತ್ತಿರುವ ನನಗೆ ಆಗಿರುವ ಸಮಸ್ಯೆಯಲ್ಲ. ಇಂತಹ ಬರಹಗಳ ದೆಸೆಯಿಂದ 'ಬರಹಗಾರ'ನೆಂಬ ಹಣೆಪಟ್ಟಿಯನ್ನೂ ಹೊತ್ತಿರುವುದರಿಂದ ಡಬಲ್ ಅಡ್ವಾಂಟೇಜ್‌ಗಳನ್ನ ಪಡೆಯುತ್ತಿರುವ ನನಗೆ, ನನ್ನ ಜೊತೆಗಿರುವ ಇತರರಿಗೆ ಅದೇ ಬಗೆಯ ಮಾನ್ಯತೆ ಸಿಗುತ್ತಿಲ್ಲವೆಂಬುದು ಎದ್ದು ಕಾಣುತ್ತದೆ. ಬಹುಶಃ ಅದರ ಹಿಂದೆ ಇರುವಂಥದ್ದೇ ಕಾರಣ, ಸದರಿ ಪತ್ರಿಕೆಯಲ್ಲಿ ನನ್ನ ಗುರುತನ್ನು ಬದಲಿಸಿದ್ದಕ್ಕೂ ಇರಬಹುದು ಎನಿಸುತ್ತದೆ.

ಇವೆಲ್ಲವನ್ನೂ ಯಾರಾದರೂ ತನ್ನ ವೃತ್ತಿಯ ಬಗೆಗೆ ಇರುವ ಕೀಳರಿಮೆಯೆಂತಲೋ, ಇತರರ ಬಗೆಗೆ ಇರುವ ಅಸೂಯೆಯೆಂತಲೋ ಬಗೆದರೆ ಬೇಸರವೇನಿಲ್ಲ. ಮೊದಲನೆಯದಾಗಿ ಸಮಾಜದ ಕುರಿತ ಕೆಲಸ ವೃತ್ತಿಯೇ ಅಲ್ಲ ಮತ್ತು ಅದು ವ್ಯಕ್ತಿಗತ ಸಾಮಾಜಿಕ ಮಾನ್ಯತೆಗಾಗಿ ಮಾಡುವ ಕೆಲಸವೂ ಅಲ್ಲ. ಅದು ಒಬ್ಬ ವ್ಯಕ್ತಿ ತನ್ನ ಮನಸ್ಸಿನ ಸಮಾಧಾನಕ್ಕಾಗಿ ಮಾಡುವ ಕೆಲಸ ಅಷ್ಟೇ ಆಗಿರಬೇಕು. ಆದರೆ, ಈ ಬಗೆಯ ವ್ಯತ್ಯಾಸ ಏಕಿದೆ ಎಂಬುದು ಚರ್ಚಾರ್ಹವೆಂದೆನಿಸುತ್ತದೆ. ಏಕೆಂದರೆ, ಸಮಾಜದ ಬದಲಾವಣೆಗಾಗಿ ಮಾಡುವ ಯಾವುದೇ ಚಳವಳಿಯು ಸದಾ 'ಯಾವ ಬಗೆಯಲ್ಲಿ ಜನರನ್ನು ತಲುಪಬೇಕು' ಎಂಬ ಹುಡುಕಾಟದಲ್ಲಿ ಇದ್ದೇ ಇರುತ್ತದೆ. ಹಾಗೆಯೇ ಚಳವಳಿ ಎಂಬುದೂ ಕೇವಲ ಬೀದಿಯಲ್ಲಿ ಬಾವುಟ ಹಿಡಿದು ಮೆರವಣಿಗೆ ಹೊರಡುವುದು ಮಾತ್ರವೇ ಆಗಿಲ್ಲದಿರುವುದರಿಂದಲೂ, ಒಂದು ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ 'ಸಾಯುವ ಮುನ್ನ ಎಷ್ಟು ಸಾಧ್ಯವೋ ಅಷ್ಟು ಈ ಸಮಾಜವನ್ನು ಸಹನೀಯ ಮತ್ತು ಮಾನವೀಯಗೊಳಿಸುವ' ಕನಿಷ್ಠ ಉದ್ದೇಶವನ್ನು ಹೊಂದಿರಬೇಕಾದ್ದರಿಂದಲೂ ಈ ತುಲನೆಯ ಅಗತ್ಯವಿದೆ.

ಕೆಲವು ಹಿರಿಯ ಗೆಳೆಯರು ಇಸ... ಅಭಿಪ್ರಾಯವನ್ನು ಹೊಂದಿದ್ದಾರೆ. ಅದೇನೆಂ... ರಾಜ್ಯದಲ್ಲಿ ಒಂದು ದುರಂತದ ಸನ್ನಿವೇಶವಿದೆ... ವಿಚಾರದ ಕುರಿತು ಭಾಷಣ ಮಾಡಲು, ಮ... ಮಾಡಲು ನಮ್ಮಲ್ಲಿ ಸಾಹಿತಿಗಳನ್ನೇ ಕರೆಯುತ್ತಾ... ಕುರಿತಾಗಿ, ಕೃಷಿಯ ಕುರಿತಾಗಿ, ಅಭಿವ್ಯಕ್ತಿ... ಕುರಿತಾಗಿ, ದೇಶದ ಅಭಿವೃದ್ಧಿಯ ವಿವಿಧ ... ಕುರಿತಾಗಿ, ಸಂಸ್ಕೃತಿಯ ಕುರಿತಾಗಿ, ಗ್ರಾಮೀ... ಬದುಕಿನ ಏಳಿಗೆಯ ಕುರಿತಾಗಿ ಎಲ್ಲದರ ಬಗ... ಇರುವ, ಇರಬೇಕಾದ ಅರ್ಹತೆ ಸದರಿ ... ವಿಚಾರದ ಕುರಿತು ಒಳನೋಟ ಇರಬೇಕೆಂದ... ಅವರು ಸಾಹಿತಿಯಾಗಿರಬೇಕು ಅಷ್ಟೇ. ... ಸಂದರ್ಭಗಳಲ್ಲಿ ಅತಿಗೂ ಹೋಗುವುದಿದೆ. ... ಮೇಲೆ ಹೇಳಿದಂತಹ ಗೆಳೆಯರು 'ನಮ್ಮ ... ಚಿಂತನೆಗಳಿಂದ ಈ ಸಾಹಿತಿಗಳನ್ನು ಒಂ... ಕಡ್ಡಾಯವಾಗಿ ದೂರವಿಡಬೇಕು' ಎಂಬ ಅ... ಅನಿಸಿಕೆಗಳನ್ನೂ ಆಡುತ್ತಾರೆ.

ಪ್ರಭಾವಿ ಬರಹಗಾರರು ಓದುಗರ ಮೆ... ಬೀರುತ್ತಾರಾದ್ದರಿಂದ, ನಿಧಾನಕ್ಕೆ ಅವರಿಗೆ 'ಸ... ಪ್ರಾಪ್ತವಾಗುತ್ತದೆ. ಅಭಿಮಾನಿಗಳೂ ಹುಟ... ಹೀಗಾಗಿಯೂ ಅವರು ಎಲ್ಲಾ ವಿಚಾರಗ... ಅಥಾರಿಟಿ ಎಂಬ ಭಾವನೆ ವ್ಯಾಪಕವಾಗಬಹ... ಇದು ಕೇವಲ ಬರಹಗಾರರಿಗೆ ಮಾತ್ರ ... ಸಂಗತಿಯಲ್ಲವಲ್ಲಾ? ಚಳವಳಿಯೊಂದರ ನೇತ... ಪ್ರಮಾಣದಲ್ಲಿ ಪ್ರಭಾವಶಾಲಿಯಾಗಿರುತ್ತಾರೆ. ನ... ವಿಶ್ವವಿದ್ಯಾಲಯದಲ್ಲಿ ತಯಾರಾದವರು ಎಂದು ... ಸಂಖ್ಯೆಯ ವ್ಯಕ್ತಿಗಳು ನಾವು ಎಂ.ಡಿ.ನಂಜುಂಡ... ನೇತೃತ್ವದ ರೈತಸಂಘದ ವಿಶ್ವವಿದ್ಯಾ... ತಯಾರಾದವರು ಎಂದೂ ಹೇಳುತ್ತಾರೆ.

ಸಮಸ್ಯೆ ಇರುವುದು ಈ ರೀತಿಯ ... ಅಲ್ಲ. ಬರಹದಲ್ಲಾಗಲೀ, ಭಾಷಣದಲ್ಲಿ... ಚಿಂತನೆಗಳನ್ನು ಆರ್ಟಿಕ್ಯುಲೇಟ್ (ಮಾತಿ... ಬರಹದಲ್ಲಿ ಸಮರ್ಥವಾಗಿ ವ್ಯಕ್ತಪಡಿಸುವ... ವ್ಯಕ್ತಿಗಳು ಪ್ರಭಾವಿಗಳಾಗುವುದಕ್ಕೂ, ಆದರೆ ಅ... ಮಾಡಲಾಗದವರಿಗೂ, ಆರ್ಟಿಕ್ಯುಲೇಟ್ ಮಾ... ನಡುವೆ ಇರುವ ವ್ಯತ್ಯಾಸ. ಕೆಲವೊಮ್ಮೆ ಬ... ಮಾಡಬಲ್ಲವರು ಅಷ್ಟು ಒಳ್ಳೆಯ ಭಾಷ... ಇರಬಹುದು, ಲಂಕೇಶರ ತರಹ ಅಥವಾ ಒ... ಮಾಡುವವರು ಹೆಚ್ಚು ಬರೆಯದೇ ... ಎಂಡಿಎನ್‌ರ ತರಹ. ಆದರೂ ಒಂ... ಅಭಿವ್ಯಕ್ತಿಯಾದರೂ ಅವರಿಗೆ ಸಾಧ್ಯವಾಗಿರುತ್ತ... ಅವರ ಚಿಂತನೆಗಳ, ಒಳನೋಟಗಳ ಸಾಮಾಜ... ಕಡಿಮೆಯಾಗಿಬಿಡುತ್ತದೆ; ಸಾಮಾಜಿಕ ಮ... ಇರುತ್ತದೆ. ಇದಕ್ಕೆ ಏನಾದರೂ ಪರಿಹ... ಅಭಿವ್ಯಕ್ತಿಯ ಮಾಧ್ಯಮಗಳು ಹಲವು ಇರಬಹು... ಎಲ್ಲಾ ಬಗೆಯ ಮಾಧ್ಯಮಗಳು ಎಲ್ಲರಿಗೂ ... ಇರುವುದರಿಂದಲೂ, ಮುಖ್ಯವಾಗಿ ... ಮಾಡುವುದು ಬರಹ ಅಥವಾ ವ... ಆಗಬೇಕಾದ್ದರಿಂದಲೂ ಈ ಸಮಸ್ಯೆ ಹೆಚ್ಚಾಗ... ಬರಹ, ಭಾಷಣವಲ್ಲದೇ ಕ್ರಿಯೆಯೇ ಮು... ರೀತಿ-ನೀತಿಗಳನ್ನೂ ಹುಡುಕುವ ಅಗತ್ಯ...

ತಾನೇ ಯೋಚನೆ ಮಾಡುವುದಕ್ಕಿಂತ ... ಅದನ್ನು ಸಾರ್ವಜನಿಕಗೊಳಿಸುವ ತುರ್ತನ್ನು... ಫೇಸ್‌ಬುಕ್ ಮತ್ತು ವಾಟ್ಸಪ್‌ಗಳಂತಹ ... ಜಾಲತಾಣಗಳು ಜನರನ್ನು ಹೆಚ್ಚೆಚ್ಚು ... ಮಾಡುತ್ತಿವೆ. ಆದರೆ, ಅಲ್ಲೂ ಬರಿಯ ವಾಚ... ಕಾಪಿ - ಪೇಸ್ಟ್‌ನಂತಹ ಅಭ್ಯಾಸಗಳೇ ... ಬರಲಿರುವ ಕಾಲದಲ್ಲಿ ಅಭಿವ್ಯಕ್ತಿಯ ಮೇಲೆ ... ಪರಿಣಾಮ ಯಾವ ಥರದ್ದು ಎಂಬು... ನೋಡಬೇಕು. ಆದರೆ, ಕ್ರಿಯೆಗಿಂತ ಆಟ... ಹೆಚ್ಚಿನ ಮಹತ್ವವಿರುವುದು ಅಲ್ಲಿಯ... ಕ್ರಿಯೆಯಿಂದ ಮಾತು, ಮಾತಿನಿಂದ ... ಮಾಡಿಕೊಡುವ ಪ್ರಕ್ರಿಯೆಯನ್ನು ಸರಾಗಗೊ... ವಿಧಾನಗಳನ್ನು ಎಲ್ಲರೂ ಹುಡುಕಬೇಕಿದೆ. ... ಜಾಲತಾಣಗಳ ವಾಚಾಳಿತನವನ್ನೂ ಅರ್ಥಪ... ಕಡೆಗೆ ಕೊಂಡೊಯ್ಯಬಹುದು. ಇದ್ದಕ್ಕಿದ್ದ... ಮಾತುಗಾರರನ್ನು ಸೃಷ್ಟಿಸುತ್ತಿರುವ ಈ ತಾಣ... ಲೇಖಕರನ್ನೂ, ಹೋರಾಟಗಾರರನ್ನ... ಸಾಧ್ಯತೆಗಳೂ ತೆರೆದುಕೊಳ್ಳಬಹುದು.

# ನೇಪಾಳದಲ್ಲಿ ಹೊಸ ಸಂವಿಧಾನ ತಂದ ಕ್ರಾಂತಿ



• ಗೌರಿ ಲಂಕೇಶ್
editorlankesh@gmail.com

## ಕಂಡಹಾಗೆ

ಪಕ್ಕದ ನೇಪಾಳ ದೇಶದಲ್ಲಿ ಜಗತ್ತಿನ ನೂತನ ...ಧಾನವನ್ನು ಜಾರಿಗೆ ತರಲಾಗಿದೆ. ಈ ಹಿಂದೆ ಆ ...ದಲ್ಲಿ ರಾಜಾಡಳಿತವಿತ್ತು ಮತ್ತು ಆನಂತರ ರಾಜವಂಶದ ...ಗಳ ನೇರಕ್ಕೆ ರಚಿಸಲ್ಪಟ್ಟ ಸಂವಿಧಾನವಿತ್ತು. ಹಾಗಾಗಿ ...ನ ಜನ ಕಳೆದ 65 ವರ್ಷಗಳಿಂದ ತಮ್ಮ ಪ್ರತಿನಿಧಿಗಳೇ ಜನನಾಯಕರು ರಚಿಸಿರುವ ಸಂವಿಧಾನಕ್ಕಾಗಿ ...ರಿಸಿದ್ದರು. ಈ ಆರೂವರೆ ದಶಕಗಳಲ್ಲಿ ಆ ದೇಶ ...ವಾರು ಭಿನ್ನಮತವನ್ನು, ಪ್ರತಿಭಟನೆಗಳನ್ನು, ಆಂತರಿಕ ...ದ್ಧವನ್ನು, ಪ್ರಾಕೃತಿಕ ವಿಕೋಪಗಳನ್ನು, ರಾಜವಂಶಸ್ಥರ ...ಲೆಯನ್ನು ಮತ್ತು ರಾಜಕೀಯ ಅತಂತ್ರ ಸ್ಥಿತಿಯನ್ನೆಲ್ಲ ...ಭವಿಸಿತ್ತು. ಆದರೀಗ ಅಲ್ಲಿ ಹೊಸ ಆಶಯವನ್ನು ...ಟ್ಟುಹಾಕಿರುವ ಹೊಸ ಸಂವಿಧಾನ ಜಾರಿಗೆ ಬಂದಿದೆ. ...ಮ. ಈ ಹೊಸ ಸಂವಿಧಾನದ ಬಗ್ಗೆ ಹಲವರು ...ಸ್ವರಗಳನ್ನು ಎತ್ತಿದ್ದಾರೆ. ಮಾದೇಶಿ ಮತ್ತು ಇತರ ...ಮುದಾಯಗಳು ತಮಗೆ ಸೂಕ್ತ ಪ್ರಾತಿನಿಧ್ಯ ಕೊಟ್ಟಿಲ್ಲ ...ಮ ಗಲಭೆ ಮಾಡುತ್ತಿದ್ದರೆ, ಮಹಿಳೆಯರಿಗೆ ಸಂವಿಧಾನ ...ನ್ಯಾಯ ಮಾಡಿದೆ ಎಂದು ಮಹಿಳೆಯರ ಗುಂಪುಗಳೂ ...ಭಟಿಸಿವೆ. ಇದೆಲ್ಲದರ ಮಧ್ಯೆಯೂ ಈ ...ವಿಧಾನದಲ್ಲಿರುವ ಒಂದು ವಿಶೇಷತೆಯತ್ತ ನಮ್ಮ ...ನವನ್ನು ಹರಿಸಬೇಕಿದೆ. ಯಾಕೆಂದರೆ ದಕ್ಷಿಣ ಏಷ್ಯಾದಲ್ಲಿ ...ಮುದಾಯ ಆಧಾರಿತ ಪ್ರಜಾತಾಂತ್ರಿಕ ವ್ಯವಸ್ಥೆ'ಯನ್ನು ...ಗೆ ತಂದಿರುವ ಮೊದಲ ದೇಶ ನೇಪಾಳ ಆಗಿದೆ.

ಭಾರತದಂತೆ ನೇಪಾಳದಲ್ಲೂ ವಿವಿಧ ಭಾಷೆ ಮತ್ತು ...ತಿಗಳ ಸಮುದಾಯಗಳಿವೆ. ಅಲ್ಲಿಯೂ ಹಿಂದೂಗಳೇ



...ಸಂಖ್ಯಾತರಾಗಿದ್ದರೂ ನಮ್ಮ ದೇಶದಂತೆ ಮುಸಲ್ಮಾನರು, ...ಸ್ತರು, ಬೌದ್ಧರು, ಬುಡಕಟ್ಟು ಜನಾಂಗದವರಿದ್ದಾರಲ್ಲದೆ, ...ಲ್ಲಿ ಜಾತಿ-ವರ್ಗ ಆಧಾರಿತ ಭೇದಭಾವಗಳಿವೆ. ಜೊತೆಗೆ ...ಕ್ಕ ದೇಶದಲ್ಲಿ ಬರೋಬ್ಬರಿ ನೂರು ಭಾಷೆಗಳನ್ನಾಡುವ ...ಧ ಸಮುದಾಯಗಳಿವೆ. ನೇಪಾಳದಲ್ಲಿ ಈಗ ಏನಾಗಿದೆ ...ರೆ ಈ ಎಲ್ಲ ಸಮುದಾಯಗಳಿಗೆ ತಮ್ಮ ಜನಸಂಖ್ಯೆಯ ...ರದ ಮೇಲೆ ಪ್ರಾತಿನಿಧ್ಯವನ್ನು ಕಲ್ಪಿಸಲಾಗಿದೆ. ಈ ...ಎಲ್ಲಾ ಸಮುದಾಯಗಳಲ್ಲೂ ಮಹಿಳೆಯರಿಗೆ ಶೇ. ... ಪ್ರಾತಿನಿಧ್ಯ ಇರಬೇಕೆಂಬ ಒತ್ತಾಯ ಇದ್ದದ್ದು ...ದರೂ ಎಲ್ಲಾ ರಾಜಕೀಯ ಪಕ್ಷಗಳ (ಮಾವೋವಾದಿ ...ೂ ಸೇರಿದಂತೆ!) ನಾಯಕರೆಲ್ಲ ಮೇಲುಜಾತಿಗಳಿಗೆ ...ದ ಪುರುಷರೇ ಆಗಿರುವುದರಿಂದ ಮಹಿಳೆಯರಿಗೆ ... 33 ಪ್ರಾತಿನಿಧ್ಯವನ್ನು ಮಾತ್ರ ಕಲ್ಪಿಸಲಾಗಿದೆ. ಆ ...ತೆಯು ಹೊರತಾಗಿಯೂ ನೇಪಾಳದ ನೂತನ ...ಧಾನ ಶೋಷಿತ, ದಮನಿತ ಮತ್ತು ಅಂಚಿನಲ್ಲಿರುವ ...ಮುದಾಯಗಳಿಗೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸ್ಥಾನಾವಕಾಶ ...ಕೊಟ್ಟಿರುವುದು ಪ್ರಶಂಸನೀಯವಾಗಿದೆ ಮಾತ್ರವಲ್ಲ, ...ನ್ನು ಅನುಸರಿಸಿ ನಾವೂ ಅಂತಹ ಒಂದು ಕ್ರಮವನ್ನು ...ಗೆ ತಂದರೆ ಒಳ್ಳೆಯದಾಗುತ್ತದೆ ಎನಿಸುತ್ತದೆ.

ಯಾಕೆಂದರೆ, ಈಗ ನಮ್ಮಲ್ಲಿರುವ 'ಫರ್ಸ್ಟ್ ಪಾಸ್ಟ್ ...ಪೋಸ್ಟ್' (ಎಫ್‌ಪಿಟಿಪಿ) ಚುನಾವಣಾ ಮಾದರಿಯಲ್ಲಿ ...ವು ಲೋಪದೋಷಗಳಿವೆ. ಈ ಮಾದರಿಯಲ್ಲಿ ...ಸಂಖ್ಯಾತರ ಬೆಂಬಲ ಪಡೆಯದೇ ಇದ್ದರೂ ಒಬ್ಬ ...ರಣಿ ಗೆಲ್ಲಬಹುದು; ರಾಜಕೀಯ ಪಕ್ಷ ಅಧಿಕಾರಕ್ಕೆ ...ಬಹುದು. ಉದಾಹರಣೆಗೆ ಒಂದು ಮತಕ್ಷೇತ್ರದಲ್ಲಿ ...ರಾಜಕಾರಣಿ ಶೇ. 50ಕ್ಕಿಂತ ಹೆಚ್ಚು ಮತಗಳನ್ನು ...ದೆ ಇದ್ದರೂ, ಇತರ ಸ್ಪರ್ಧಿಗಳಿಗಿಂತ ಹೆಚ್ಚೋ, ...ೇ ಮತಗಳನ್ನು ಹೆಚ್ಚಿಗೆ ಪಡೆದ ಆಧಾರದ ಮೇಲೆ ...ತ'ನಾಗುತ್ತಾನೆ. ಹಾಗೆಯೇ ರಾಜ್ಯ ಅಥವಾ ...ದ್ಯಂತ ಬಹುಸಂಖ್ಯಾತ ಮತದಾರರಿಂದ ...ಕೃತವಾದ ಪಕ್ಷಗಳೂ ಅಧಿಕಾರದ ಗದ್ದುಗೆಗೇರುತ್ತವೆ. ...ಹರಣೆಗೆ 1999ರಲ್ಲಿ ಎನ್‌ಡಿಎ ದೇಶದಾದ್ಯಂತ ... 36 % ಮತಗಳನ್ನು ಗೆದ್ದಿದ್ದರೂ ವಾಜಪೇಯಿ ಪ್ರಧಾನಿ ಆಗಿದ್ದರು. ಹಾಗೆಯೇ 2009ರಲ್ಲಿ ಬರೀ 40 % ಮತದಾರರ ಬೆಂಬಲವನ್ನು ಪಡೆದಿದ್ದ ಯುಪಿಎ ಅಧಿಕಾರಕ್ಕೇರಿತ್ತು. ಇನ್ನು 2014ರಲ್ಲಿ ಬಿಜೆಪಿ ಬರೋಬ್ಬರಿ 69 % ಮತದಾರರಿಂದ ತಿರಸ್ಕೃತಗೊಂಡಿದ್ದರೂ ಮೋದಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ. ಇದೆಲ್ಲದರ ಅರ್ಥ ಏನೆಂದರೆ ಇಲ್ಲಿ ಬಹುಸಂಖ್ಯಾತರ ಬೆಂಬಲ ಇಲ್ಲದಿದ್ದರೂ ರಾಜಕಾರಣಿಗಳು 'ಜನಪ್ರತಿನಿಧಿ' ಎಂದೆನಿಸಿಕೊಳ್ಳುತ್ತಾರೆ; ಸರ್ಕಾರಗಳು ರಚಿಸಲ್ಪಡುತ್ತವೆ.

ಇನ್ನು ಈ ಚುನಾವಣಾ ಮಾದರಿಯಲ್ಲಿನ ಲೋಪದೋಷಗಳಿಂದಾಗಿ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬಲಿಷ್ಠವಾಗಿರುವ ಸಮುದಾಯಗಳೇ ಹೆಚ್ಚು ಪ್ರಾಶಸ್ತ್ಯವನ್ನೂ ಮತ್ತು ಅಧಿಕಾರವನ್ನೂ ಪಡೆಯುತ್ತವೆ. ಉದಾಹರಣೆಗೆ, ಕರ್ನಾಟಕದಲ್ಲಿ ಲಿಂಗಾಯತರು ಮತ್ತು ಒಕ್ಕಲಿಗರ ಸಂಖ್ಯಾಬಲ ಒಟ್ಟು ಶೇ. 26 ಇರಬಹುದು. ಆದರೆ ವಿಧಾನಸಭೆಯಲ್ಲಿ ಅವರದ್ದೇ ಹೆಚ್ಚು ಸಂಖ್ಯೆ. ಹಾಗೆಯೇ ಇಲ್ಲಿಯತನಕ ಎಂಟು ಮಂದಿ ಲಿಂಗಾಯತರೇ ಮುಖ್ಯಮಂತ್ರಿಗಳಾಗಿದ್ದರೆ, ಆರು ಜನ ಒಕ್ಕಲಿಗರು ಆ ಸ್ಥಾನವನ್ನು ಅಲಂಕರಿಸಿದ್ದಾರೆ. ಅಷ್ಟೇ ಅಲ್ಲ, ನಮ್ಮ ರಾಜ್ಯದ ಇತರೆ ಹಿಂದುಳಿದ ಸಮುದಾಯಗಳ ಸಂಖ್ಯಾಬಲ ಹೆಚ್ಚಿದ್ದರೂ ಆ ಸಮುದಾಯಗಳಿಂದ ನಾಯಕರು ರೂಪಗೊಳ್ಳುವುದನ್ನು ಮೇಲುಜಾತಿಯ ನಾಯಕರು ವ್ಯವಸ್ಥಿತವಾಗಿ ತಡೆಯುತ್ತಲೇ ಬಂದಿದ್ದಾರೆ.

ಬಲಶಾಲಿ ಸಮುದಾಯಗಳ ಹಿಡಿತದಲ್ಲಿರುವ ಇಂತಹ ವ್ಯವಸ್ಥೆಯಲ್ಲಿ ದಮನಿತ ಸಮುದಾಯಗಳ, ಅಲ್ಪಸಂಖ್ಯಾತರ, ಅಂಚಿಗೆ ದೂಡಲ್ಪಟ್ಟಿರುವ ವರ್ಗಗಳ ದನಿಯಾಗುವವರು ಯಾರು? ಅವರ ಉದ್ಧಾರಕ್ಕೆ ಶ್ರಮಿಸುವವರು ಯಾರು? ಅವರ ಪ್ರತಿನಿಧಿಯಾಗಿ ಹೋರಾಡುವವರು ಯಾರು? ಹೌದು, ನಮ್ಮ ದೇಶದಲ್ಲಿ ದಲಿತರ ಜನಸಂಖ್ಯೆಗೆ ಅನುಗುಣವಾಗಿ ವಿಧಾನಸಭೆ ಮತ್ತು ಸಂಸತ್ತಿಯಲ್ಲಿ ಮೀಸಲು ಕ್ಷೇತ್ರಗಳನ್ನು ಇಡಲಾಗಿದೆ. ಆದರೆ ಈ ಮೀಸಲು ಕ್ಷೇತ್ರಗಳಿಂದ ಗೆದ್ದು ಬರುವವರು ನಿಜವಾಗಲೂ ದಲಿತರಿಗೆ ದನಿಯಾಗಿದ್ದಾರೆಯೇ? ನಾಯಕರಾಗಿದ್ದಾರೆಯೇ? ಅವರ ಉದ್ಧಾರಕ್ಕಾಗಿ ಶ್ರಮಿಸಿದ್ದಾರೆಯೇ ಎಂದು ನೋಡಿದರೆ ನಿರಾಶೆಯಾಗುತ್ತದೆ. ಎಲ್ಲರಿಗೂ ಗೊತ್ತಿರುವಂತೆ ಕೆ.ಎಚ್.ಮುನಿಯಪ್ಪನವರು ಹಲವಾರು ಬಾರಿ ಕೋಲಾರ ಮೀಸಲು ಕ್ಷೇತ್ರದಿಂದ ಗೆದ್ದಿದ್ದಾರೆ. ಅವರ ಗೆಲುವಿಗೆ ಒಂದು ಕಾರಣ ಕೋಲಾರ ಮತ ಕ್ಷೇತ್ರದಲ್ಲಿರುವ ಬಹುಸಂಖ್ಯಾತ ಮೇಲುವರ್ಗದ ಜನ ಮುನಿಯಪ್ಪನವರನ್ನು ಜನನಾಯಕ ಎಂದು ಒಪ್ಪಿಕೊಂಡಿದ್ದಾರೆ ಎಂಬುದಲ್ಲ. ಬದಲಾಗಿ ಚುನಾವಣಾ ಪ್ರಚಾರದ ಸಮಯದಲ್ಲಿ ಮುನಿಯಪ್ಪನವರು ಮೇಲು ವರ್ಗಗಳ ಮನೆಗಳನ್ನು ಪ್ರವೇಶಿಸುವ 'ಉದ್ಧಟತನವನ್ನು ಹೊಂದಿಲ್ಲ' ಎಂಬುದಾಗಿರುವುದೇ ಒಂದು ದೊಡ್ಡ ದುರಂತ. ಹಾಗೆಯೇ ಹೋದ ವರ್ಷ ಬಿಜಾಪುರದಿಂದ ಸಂಸತ್ತು ಚುನಾವಣೆಯಲ್ಲಿ ಗೆದ್ದ ನಂತರ ರಮೇಶ್ ಜಿಗಜಿಣಗಿ ಅವರು ಒಂದು ದೇವಸ್ಥಾನವನ್ನು ಪ್ರವೇಶಿಸಲು ನಿರಾಕರಿಸಿದರು. ಯಾಕೆಂದರೆ ಅವರಿಗೆ ದೇವಸ್ಥಾನವನ್ನು ಪ್ರವೇಶಿಸಲು ಇಚ್ಛೆ ಇರಲಿಲ್ಲ ಎಂದಲ್ಲ, ಬದಲಾಗಿ ದಲಿತನಾದ ತಾನು ದೇವಸ್ಥಾನವನ್ನು ಪ್ರವೇಶಿಸಿದರೆ ಎಲ್ಲಿ ತನ್ನ ಮತ ಕ್ಷೇತ್ರದಲ್ಲಿರುವ ಮೇಲುಜಾತಿಗಳ ಮತಗಳನ್ನು ಕಳೆದುಕೊಳ್ಳುತ್ತೇನೋ ಎಂಬ ಆತಂಕ ಅವರನ್ನು ಕಾಡಿತ್ತು. ಹೀಗೆ ಮೇಲುಜಾತಿಯ ಹಂಗಿನಿಂದಲೇ ಗೆದ್ದುಬರುವ ನೇತಾರರು ಎಂದಾದರೂ ದಲಿತರ ಕಾಳಜಿಗಳನ್ನಾಗಲಿ, ಹೋರಾಟಗಳನ್ನಾಗಲಿ ಎತ್ತಿಕೊಂಡದ್ದು ಇಲ್ಲವೇ ಇಲ್ಲ. ಈ ಕಾರಣಕ್ಕೆ ಬಿಎಸ್‌ಪಿ ಪಕ್ಷವನ್ನು ಸ್ಥಾಪಿಸಿದ ಕನ್ಶಿರಾಮ್ ಅವರು "ಈ ವ್ಯವಸ್ಥೆಯಡಿ ಗೆದ್ದು ಬರುವ ದಲಿತರು ತಮ್ಮ ಸಮುದಾಯದ ನಾಯಕರಾಗದೆ ಮೇಲುಜಾತಿ ಜನರ ಚಮಚಾಗಳಾಗಿರುತ್ತಾರೆ" ಎಂದು ಟೀಕಿಸಿದ್ದರು.

ಅಂದಹಾಗೆ ಈ ಎಫ್‌ಪಿಟಿಪಿ ಚುನಾವಣೆ ಮಾದರಿಯನ್ನು ಸ್ವತಃ ಅಂಬೇಡ್ಕರ್ ವಿರೋಧಿಸಿದ್ದರಲ್ಲದೆ ಆದಕ್ಕೆ ಅವರೇ ಹಲವು ಬಾರಿ ಬಲಿಯಾಗಿದ್ದರು. ಭಾರತದ ಎಲ್ಲಾ ಪ್ರದೇಶಗಳಲ್ಲೂ ದಲಿತರು ದಮನಕ್ಕೆ ಗುರಿಯಾಗುತ್ತಾರಲ್ಲದೆ, ಅವರು ಸವರ್ಣೀಯರಿಗಿಂತ ಕಡಿಮೆ ಸಂಖ್ಯಾಬಲವನ್ನು ಹೊಂದಿರುವುದರಿಂದ ಮೇಲುಜಾತಿಗಳ ಹಂಗಿಲ್ಲದೆ ಗೆದ್ದು ಬರುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಅಂಬೇಡ್ಕರ್ ಅರಿತಿದ್ದರು. ಆ ಕಾರಣಕ್ಕೇ ಅವರು ದುಂಡುಮೇಜಿನ ಸಮಾವೇಶಗಳಲ್ಲಿ ದಲಿತರಿಗೆ ಎರಡು ಮತಗಳ ಹಕ್ಕನ್ನು ಕೊಡಬೇಕೆಂಬ ವಾದವನ್ನು ಮಂಡಿಸಿದ್ದರು. ಅಂಬೇಡ್ಕರ್ ಅವರ ಬೇಡಿಕೆ 'ದಲಿತರಿಗೆ ಕ್ಷೇತ್ರವಾರು ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ಆಯ್ಕೆ ಚಲಾಯಿಸಲು ಒಂದು ಮತ ಮತ್ತು ಪ್ರಾತಿನಿಧಿಕ ಸ್ಥಾನಕ್ಕೆ ತಮ್ಮ ಸಮುದಾಯದ ಪ್ರತಿನಿಧಿ ಯಾರೆಂಬುದನ್ನು ತೀರ್ಮಾನಿಸಲು ಇನ್ನೊಂದು ಮತ ಕೊಡಬೇಕು' ಎಂಬುದಾಗಿತ್ತು. ಅಷ್ಟುಹೊತ್ತಿಗಾಗಲೇ ಇಲ್ಲಿನ ಅಲ್ಪಸಂಖ್ಯಾತರಿಗೂ ಎರಡು ಮತಗಳನ್ನು ಕೊಟ್ಟಿದ್ದರಿಂದ ಆಗಿನ ಬ್ರಿಟನ್ ಪ್ರಧಾನಿ ರ್‍ಯಾಮ್‌ಸೆ ಮೆಕ್‌ಡೋನಾಲ್ಡ್ ಅವರು ಅಂಬೇಡ್ಕರ್ ಅವರ ವಾದವನ್ನು ಅಂಗೀಕರಿಸಿ ದಮನಿತ ದಲಿತ ವರ್ಗಕ್ಕೆ 'ಜನಾಂಗೀಯ ಪ್ರಾತಿನಿಧ್ಯ'ದ ಹಕ್ಕನ್ನು ಕೊಟ್ಟರು.

ಆದರೆ ಇದಕ್ಕೆ ಮಹಾತ್ಮ ಗಾಂಧಿಯವರ ಒಪ್ಪಿಗೆ ಇರಲಿಲ್ಲ. ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕಿದ್ದರೆ ಹಿಂದೂ ಸಮಾಜ ಛಿದ್ರಗೊಳ್ಳುತ್ತದೆ ಎಂಬುದು ಗಾಂಧಿಯವರ ನಿಲುವಾಗಿತ್ತು. ಹಾಗಾಗಿ ಅವರು ಆಗ ಯೆರಡಾಡ ಎಂಬ ಕಾರಾಗೃಹದಲ್ಲಿ ಬಂಧನಕ್ಕೊಳಗಾಗಿದ್ದರೂ ಅಲ್ಲೇ ಆಮರಣಾಂತ ಉಪವಾಸವನ್ನು ಪ್ರಾರಂಭಿಸಿದರು. ಗಾಂಧಿಗೆ ದಲಿತರ ಸ್ಥಿತಿಗತಿಗಳನ್ನು ಕುರಿತು, ಅವರಿಗೆ ನ್ಯಾಯ ಒದಗಿಸುವ ಬಗ್ಗೆ ಕುರಿತು ಅಂಬೇಡ್ಕರ್ ಆದೆಷ್ಟೇ ಪ್ರಯತ್ನಿಸಿದರೂ ಅವರು ತಮ್ಮ ಹಠ ಬಿಡಲಿಲ್ಲ. ಮಾತ್ರವಲ್ಲ, ಉಪವಾಸನಿರತರಾಗಿದ್ದ ಗಾಂಧೀಜಿಯ ಪ್ರಾಣಕ್ಕೆ ಹೆಚ್ಚುಕಮ್ಮಿಯಾದರೆ ದೇಶದಾದ್ಯಂತ ದಲಿತರ ಮಾರಣಹೋಮ ನಡೆಯುವುದು ಎಂದು ಕಾಂಗ್ರೆಸ್ ನಾಯಕರು ಮತ್ತು ಸವರ್ಣೀಯರು ಅಂಬೇಡ್ಕರ್ ಅವರಿಗೆ ಬೆದರಿಕೆಗಳನ್ನು ಹಾಕಿದರು. ಯಾವ ತನ್ನ ಸಮುದಾಯಕ್ಕಾಗಿ ತಾನು ಹೋರಾಡುತ್ತಿರುವೆನೋ ಆ ಸಮುದಾಯಕ್ಕೆ ಅಪಾಯ ಎದುರಾದಾಗ ಅಂಬೇಡ್ಕರ್ ವಿಧಿ ಇಲ್ಲದೆ ಗಾಂಧಿಯ ನಿಲುವಿಗೆ ಒಪ್ಪಿಗೆಯನ್ನು ಕೊಡಬೇಕಾಯಿತು. ಆ ಒಪ್ಪಂದವನ್ನು 'ಪೂನಾ ಪ್ಯಾಕ್ಟ್' ಎಂದು ಕರೆಯುತ್ತಾರೆ. 'ಪೂನಾ ಪ್ಯಾಕ್ಟ್' ಸುತ್ತಲಿನ ವಿದ್ಯಮಾನಗಳನ್ನೆಲ್ಲ ಕುರಿತು ಅಂಬೇಡ್ಕರ್ ಅವರು ತಮ್ಮ 'ಅಸ್ಪೃಶ್ಯರಿಗೆ ಕಾಂಗ್ರೆಸ್ ಮತ್ತು ಗಾಂಧಿ ಮಾಡಿದ್ದೇನು' ಎಂಬ ಲೇಖನದಲ್ಲಿ ತೋಡಿಕೊಂಡಿದ್ದಾರಲ್ಲದೆ "ನನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ, ನನ್ನ ಜನರ ಹಿತಾಸಕ್ತಿಗೆ ವಿರುದ್ಧವಾದ ಒಪ್ಪಂದವೊಂದಕ್ಕೆ ಸಹಿ ಹಾಕಿದ್ದೇನೆ" ಎಂದಿದ್ದಾರೆ.

ತಮ್ಮ ಇತರೆ ಬರಹಗಳಲ್ಲಿ "ಅಸ್ಪೃಶ್ಯರಿಂದ ಮಾತ್ರ ತುಂಬಬೇಕಾದ ಕೆಲವು ನಿರ್ದಿಷ್ಟ ಸಂಖ್ಯೆಯ ಸೀಟುಗಳನ್ನು ಅಸ್ಪೃಶ್ಯರಿಗೆ ಮೀಸಲಿಡಬೇಕೆಂಬುದನ್ನು ಹಿಂದೂಗಳು ಒಪ್ಪುತ್ತಾರೆ. ಆದರೆ ವಿಧಾನ ಸಭೆಯಲ್ಲಿ ಅಸ್ಪೃಶ್ಯರನ್ನು ಪ್ರತಿನಿಧಿಸಲು ಯಾವ ಅಸ್ಪೃಶ್ಯರು ಆಯ್ಕೆಯಾಗಬೇಕು ಎಂಬುದನ್ನು ಪ್ರತ್ಯೇಕ ಅಸ್ಪೃಶ್ಯ ಮತದಾರರ ಬದಲು ಹಿಂದೂಗಳು ಮತ್ತು ಅಸ್ಪೃಶ್ಯರಿಬ್ಬರೂ ಇರುವ ಮಿಶ್ರ ಮತದಾರರೇ ಆಯ್ಕೆ ಮಾಡಬೇಕೆಂದು ಒತ್ತಾಯಿಸುತ್ತಾರೆ. ವಿಧಾನ ಸಭೆಯಲ್ಲಿ ಅಸ್ಪೃಶ್ಯರ ಪ್ರಾತಿನಿಧ್ಯ ಇರಬೇಕು ಎಂಬುದನ್ನು ಒಪ್ಪಿಕೊಂಡಾದ ಮೇಲೆ ಅಸ್ಪೃಶ್ಯ ಮತದಾರರು ಆಯ್ಕೆ ಮಾಡುವ ಪ್ರತಿನಿಧಿಯೇ ಅವರ ನಿಜವಾದ ಪ್ರತಿನಿಧಿ ಎಂಬುದರಲ್ಲಿ ಎರಡು ಮಾತಿಲ್ಲ. ಹಾಗಿದ್ದಾಗ್ಯೂ ಪ್ರತ್ಯೇಕ ಮತದಾನವನ್ನು ಹಿಂದೂಗಳು ವಿರೋಧಿಸುತ್ತಿರುವುದೇಕೆ? ಕಾರಣವೇನೆಂದರೆ ಪ್ರತ್ಯೇಕ ಮತದಾನವಿದ್ದರೆ, ಅಸ್ಪೃಶ್ಯರಿಗೆ ಮೀಸಲಾದ ಸೀಟುಗಳನ್ನು ಕಬಳಿಸಲು ಹಿಂದೂಗಳಿಗೆ ಸಾಧ್ಯವಾಗುವುದಿಲ್ಲ, ಆದರೆ ಮಿಶ್ರ ಮತದಾನದ ಮೂಲಕ ಅದು ಸಾಧ್ಯವಿದೆ" ಎಂದೂ ಅಂಬೇಡ್ಕರ್ ಹೇಳಿದ್ದಾರೆ.


ಜೊತೆಗೆ "ಮಿಶ್ರ ಮತಕ್ಷೇತ್ರವಿದ್ದಾಗ ಅಸ್ಪೃಶ್ಯರ ಪ್ರತಿನಿಧಿ ನಾಮುಮಾತ್ರದ ಪ್ರತಿನಿಧಿಯಾಗಿರುತ್ತಾನೆಯೇ ಹೊರತು ಅವರ ನಿಜವಾದ ಪ್ರತಿನಿಧಿಯಾಗಿರಲು ಸಾಧ್ಯವಿಲ್ಲ. ಏಕೆಂದರೆ ಹಿಂದೂಗಳ 'ಆಯ್ಕೆ'ಯ ವ್ಯಕ್ತಿಯಾಗದಿರಲು (ಹಿಂದೂಗಳಿಗೆ ಒಪ್ಪಿಗೆಯಾಗುವಂತಹ ವ್ಯಕ್ತಿಯಾಗದಿರಲು) ಹಾಗೂ ಅವರ ಕೈಯಲ್ಲಿನ ಸಾಧನವಾಗದಿರಲು ಯಾವ ಅಸ್ಪೃಶ್ಯನು ಒಪ್ಪುವುದಿಲ್ಲವೋ ಅಂಥವನು ಹಿಂದೂಗಳು ಹಲವಾರು ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿರುವ ಮಿಶ್ರ ಮತಕ್ಷೇತ್ರದಲ್ಲಿ ಚುನಾಯಿತನಾಗಲು ಸಾಧ್ಯವೇ ಇಲ್ಲ. ಹಾಗಾಗಿ ಹಿಂದೂಗಳ ದೃಷ್ಟಿಯಿಂದ ಮೀಸಲು ಮತ ಕ್ಷೇತ್ರವೆಂಬುದು ನಾಮ ಮಾತ್ರಕ್ಕೆ ಅಸ್ಪೃಶ್ಯರ ಪ್ರತಿನಿಧಿಯಾಗಿರುವ, ಆದರೆ ವಾಸ್ತವದಲ್ಲಿ ಹಿಂದೂಗಳ ಕೈಯಲ್ಲಿನ ಸಾಧನವಾಗಿರುವ ಅಸ್ಪೃಶ್ಯನೊಬ್ಬನನ್ನು ನೇಮಿಸುವ ಪ್ರಕ್ರಿಯೆ ಆಗುತ್ತದಷ್ಟೇ" ಎಂದಿದ್ದಾರಲ್ಲದೆ ಅಂತಹ ಮೀಸಲು ಕ್ಷೇತ್ರವನ್ನು ಅವರು 'ನಾರುತ್ತಿರುವ ಮತಕ್ಷೇತ್ರ' ಎಂದೂ ಬಣ್ಣಿಸಿದ್ದಾರೆ.

ದಲಿತರಿಗೆ ಎರಡು ಮತಗಳ ಹಕ್ಕಿದ್ದಾಗ ಅಂಬೇಡ್ಕರ್ ಅವರಿಗೆ ಆದದ್ದೇನು ಮತ್ತು ಅದು ರದ್ದಾದ ನಂತರ ನಡೆದದ್ದೇನು ಎಂದು ನೋಡಿದರೆ ನಮ್ಮ ಈಗಿನ ವ್ಯವಸ್ಥೆಯ ದೌರ್ಬಲ್ಯಗಳು ಅರ್ಥವಾಗುತ್ತವೆ. 'ಪೂನಾ ಪ್ಯಾಕ್ಟ್' ಪ್ರಕಾರ ದಲಿತರಿಗೆ ಎರಡು ಮತಗಳ ಹಕ್ಕನ್ನು ನೀಡಲಾಗಿತ್ತು. ಆ ಕಾರಣಕ್ಕೆ ಅಂಬೇಡ್ಕರ್ ಅವರು 1937ರಲ್ಲಿ ನಡೆದ ಚುನಾವಣೆಯಲ್ಲಿ ಬಾಂಬೆ ಪ್ರದೇಶದಿಂದ ವಿಧಾನಸಭೆಗೆ ಆಯ್ಕೆಯಾದರು. ಆದರೆ 1946ರ ಹೊತ್ತಿಗೆ ಎರಡು ಮತಗಳ ಹಕ್ಕು ರದ್ದಾಗಿದ್ದರಿಂದ ಅವರು ಆ ವರ್ಷ ನಡೆದ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದರು. ಅದಕ್ಕೆ ಇನ್ನೊಂದು ಕಾರಣ ಅಂಬೇಡ್ಕರ್ ವಿರುದ್ಧ ಮತ್ತು ಅವರ 'ಪರಿಶಿಷ್ಟ ವರ್ಗ ಫೆಡರೇಶನ್'ನ ಅಭ್ಯರ್ಥಿಗಳ ವಿರುದ್ಧ ಕಾಂಗ್ರೆಸ್ ಪಕ್ಷ ಬಲವಾದ ಅಭ್ಯರ್ಥಿಗಳನ್ನು ನಿಲ್ಲಿಸಿದ್ದು. ಪರಿಣಾಮವಾಗಿ ಪ್ರಾದೇಶಿಕ ವಿಧಾನಸಭೆಗಳಿಂದ ಸಂವಿಧಾನ ಸಭೆಗೆ ಅಂಬೇಡ್ಕರ್ ಅವರನ್ನು ಆಯ್ಕೆ ಮಾಡಲು ಅಗತ್ಯವಿದ್ದ ನಾಲ್ಕು ಶಾಸಕರ ಬೆಂಬಲವೂ ಬಾಂಬೆ ವಿಧಾನಸಭೆಯಲ್ಲಿ ಇಲ್ಲದಂತಾಯಿತು. ಆಗ ಅನಿವಾರ್ಯವಾಗಿ ಅಂಬೇಡ್ಕರ್ ಅವರು ತಮಗೆ ಸಂಬಂಧವೇ ಇಲ್ಲದಿದ್ದ ಬಂಗಾಳ ವಿಧಾನಸಭೆಯಲ್ಲಿದ್ದ ಕಮ್ಯುನಿಸ್ಟ್, ಆಂಗ್ಲೋ ಇಂಡಿಯನ್ ಮತ್ತು ಜೋಗೇಂದ್ರ ನಾಥ್ ಮಂಡಲ್ ಎಂಬುವವರ ಬೆಂಬಲ ಪಡೆದು ಸಂವಿಧಾನ ಸಭೆಗೆ ಆಯ್ಕೆಯಾದರು. ಆಗ ಸಂವಿಧಾನ ಸಭೆಗೆ ಆಯ್ಕೆಯಾಗಿದ್ದ ಒಟ್ಟು 29 ದಲಿತ ಸದಸ್ಯರ ಪೈಕಿ ಅಂಬೇಡ್ಕರ್ ಮಾತ್ರ ಪರಿಶಿಷ್ಟ ವರ್ಗ ಫೆಡರೇಷನ್ನಿನ ಏಕೈಕ ಪ್ರತಿನಿಧಿಯಾಗಿದ್ದರು. ಮಿಕ್ಕ ಎಲ್ಲರೂ ಕಾಂಗ್ರೆಸ್ ಸದಸ್ಯರಾಗಿದ್ದರು. ಆಮೇಲೆ 1945ರಲ್ಲಿ ಭಾರತ ಮತ್ತು ಪಾಕಿಸ್ತಾನ ವಿಭಜನೆ ಆದ ಪರಿಣಾಮ ಬಂಗಾಳದಲ್ಲಿದ್ದ ಅಂಬೇಡ್ಕರ್ ಬೆಂಬಲಿಗ ಶಾಸಕರ ಸಂಖ್ಯೆಯೂ ಕಡಿಮೆ ಆಗಿ ಸಂವಿಧಾನ ಸಭೆಗೆ ಅವರ ಸದಸ್ಯತ್ವವೂ ರದ್ದಾಯಿತು. ಹೀಗೆ ಪ್ರತಿ ಹಂತದಲ್ಲೂ ಅಂಬೇಡ್ಕರ್ ಅವರಿಗೆ ತೊಡರುಗಾಲನ್ನು ಹಾಕುತ್ತಾ ಬಂದ ಕಾಂಗ್ರೆಸ್ ತನಗೆ ಬೇಕಾದಂತೆ ಅವರನ್ನು ಉಪಯೋಗಿಸಿಕೊಂಡದ್ದು ಹೇಗೆ ಎಂದು ನೋಡುವುದು ಸೂಕ್ತ.

ನೂರ್ ಶ್ರೀಧರ್ ಅವರು ತಮ್ಮ ಒಂದು ಲೇಖನದಲ್ಲಿ ಆ ವಿದ್ಯಮಾನಗಳನ್ನು ಹೀಗೆ ದಾಖಲಿಸಿದ್ದಾರೆ:

▶▶| 12

# ಉತ್ತರ ಕನ್ನಡ ಪರಿಷತ್ ಅಖಾಡ
# ಅಡಕತ್ತರಿಯಲ್ಲಿ ಡಾನ್ ದೇಶಪಾಂಡೆ



ಉತ್ತರ ಕನ್ನಡದ ಜಾತಿಕಾರಣಕ್ಕೆ ಸಾವಕಾಶ ಮದವೇರುತ್ತಿದೆ! ಸ್ಥಳೀಯಾಡಳಿತ ಸಂಸ್ಥೆಗಳ ಕ್ಷೇತ್ರದಿಂದ ಮೂರ್‍ನಾಲ್ಕೇ ತಿಂಗಳಲ್ಲಾಗಲಿರುವ ವಿಧಾನ ಪರಿಷತ್ ಚುನಾವಣೆ ಎರಡೇ ಫ್ಯಾಕ್ಟರ್ ಮೇಲೆ ನಡೆಯುವ ಸಕಲ ಸೂಚನೆ ಈಗಲೇ ಗೋಚರಿಸಲಾರಂಭಿಸಿದೆ. ಒಂದು ಡಾನ್ ದೇಶಪಾಂಡೆಯ ದಾದಾಗಿರಿ ರಾಜಕಾರಣದ ವಿರುದ್ಧ ಭುಗಿಲೆದ್ದಿರುವ ಕಾಂಗ್ರೆಸ್ಸಿಗರ ಆಕ್ರೋಶ. ಮತ್ತೊಂದು, ಜಾತಿ ಲೆಕ್ಕಾಚಾರ. ಕಾಂಗ್ರೆಸ್-ಬಿಜೆಪಿ ನೇರಾನೇರ ಕಾಳಗದ ಆಖಾಡದಲ್ಲಿ ಜೆಡಿಎಸ್ ಲೆಕ್ಕಕ್ಕೇ ಇಲ್ಲ, ಒಂದಂತೂ ಖರೆ. ಟಿಕೆಟ್ ಹಂಚಿಕೆಯಲ್ಲಿ ದೇಶಪಾಂಡೆ ತನ್ನ ಮಗನ ಭವಿಷ್ಯದ ಹಿಡನ್ ಅಜೆಂಡಾ ಇಟ್ಟುಕೊಂಡು ಆಟ ಆಡಿದ್ದೇ ಆದರೆ, ಸುಲಭವಾಗಿ ಗೆಲ್ಲುವ ಅವಕಾಶವಿರುವ ಕಾಂಗ್ರೆಸ್ 'ಕವುಚಿ' ಬೀಳಲಿದೆ!!

ಜಿಲ್ಲೆಯ ಸ್ಥಳೀಯ ಸಂಸ್ಥೆ ಕ್ಷೇತ್ರದಿಂದ ಪರಿಷತ್‌ಗೆ ನಡೆದ ಕಳೆದ ನಾಲ್ಕು ಚುನಾವಣೆಯ ಇತಿಹಾಸ ಕೆದಕಿದರೆ ಆಯಾ ಸಂದರ್ಭದ ಆಡಳಿತ ಪಕ್ಷದ ಟಿಕೆಟ್ ಹಂಚಿಕೆ ದೇಶಪಾಂಡೆಯ ಇಷ್ಟಾನಿಷ್ಟಕ್ಕೆ ತಕ್ಕಂತೆಯೇ ಆಗಿರುವುದು ಎದ್ದು ಕಾಣಿಸುತ್ತದೆ. ದೋಷಪಾಂಡೆ ಸಾಹೇಬರು ತಮ್ಮ ಏಕಚಕ್ರಾಧಿಪತ್ಯಕ್ಕೆ ಸವಾಲಾಗದ ದಂಡಪಿಂಡಗಳನ್ನೇ ಎಮ್ಮೆಲ್ಸಿ ಆಗಿಸುತ್ತಾ ಬಂದಿದ್ದಾರೆ. ಹೆಗಡೆಜೀ ಕಾಲಕೀರ್ದಿಯಲ್ಲಿ ಹೆರವಟ್ಟಾ ಮಾಸ್ತರ್ ಎಂಬ ದೇಶಪಾಂಡೆಯ ಸ್ವ-ಜಾತಿ ವೃದ್ಧರು ಪರಿಷತ್‌ಗೆ ಕಳಿಸಲ್ಪಟ್ಟಿದ್ದರು. ಆ ನಂತರ ಹಳಿಯಾಳದ ವಿ.ಡಿ. ಹೆಗಡೆ ಎಮ್ಮೆಲ್ಸಿ ಆಗಿದ್ದರು. ದೇಶಪಾಂಡೆಯ ಆತ್ಮಾಪ್ತ ಜಾತಿಬಂಧುವಾಗಿರುವ ಈ ಹೆಗಡೆ ಹಳಿಯಾಳದಲ್ಲಿ ದೇಶಪಾಂಡೆ ನಡೆಸಿದ ಅಷ್ಟೂ ಪಾಪಕೃತ್ಯದ ಪಾಲುದಾರರಾಗಿದ್ದರು.

ಎಮ್ಮೆಲ್ಸಿ ಆದನಂತರ ದೇಶಪಾಂಡೆಗೆ ಗುಟುರು ಹಾಕತೊಡಗಿದ ವಿ.ಡಿ. ಹೆಗಡೆಗೆ ಮತ್ತೆ ಅವಕಾಶ ಸಿಗಲಿಲ್ಲ, ಆಗ ತಿರುಗಿಬಿದ್ದ ವಿಡಿ ಮತ್ತವನ ಮಗ ಸುನಿಲ್ ಹೆಗಡೆ (ಮಾಜಿ ಶಾಸಕ) ಈಗ ದೇಶಪಾಂಡೆಗೆ ಬದ್ಧ ವೈರಿಗಳಂತಾಗಿ ಕಾಡುತ್ತಿದ್ದಾರೆ. ಆ ಹೊತ್ತಿಗೆ ದೇಶಪಾಂಡೆ ಗುರು ಹೆಗಡೆಜೀಗೇ ತಿರುಮಂತ್ರ ಹಾಕಿ ಕಾಂಗ್ರೆಸ್‌ಗೆ ಹಾರಿದ್ದರು. ಕಾಂಗ್ರೆಸಲ್ಲೂ ದೇಶಪಾಂಡೆಯ ದಾದಾಗಿರಿಯೇ ನಡೆಯಿತು. ಕಾರವಾರದ ಕೆಲಸಕ್ಕೆ ಬಾರದ ಹೆಂಗಸು ಶುಭಲತಾ ಅಸ್ನೋಟಿಕರ್‌ಗೆ ಎಮ್ಮೆಲ್ಸಿ ಮಾಡಿದರು ದೇಶಪಾಂಡೆ. ಶುಭಲತಾ ತನ್ನ ಎಮ್ಮೆಲ್ಸಿ ಅವಧಿ ಮುಗಿಸುವ ವೇಳೆಗೆ ಆಕೆಯ ಪ್ರಳಯಾಂತಕ ಪುತ್ರರತ್ನ ಆನಂದ ಅಸ್ನೋಟಿಕರ್ ಬಿಜೆಪಿಯ 'ಸಿಜರಿನ್ ಸಚಿವ'ನಾಗಿದ್ದ.


ಹೀಗಾಗಿ ದೇಶಪಾಂಡೆ ಮತ್ತೆ ದಾಳ ಬದಲಿಸಿದ್ದರು. ತನ್ನ ಬಲಗೈ ಬಂಟನೂ- ಹಳಿಯಾಳದ ಪುಂಡರ ದಂಡಿನ 'ದಂಡ' ನಾಯಕನೂ ಆಗಿದ್ದ ಶ್ರೀಕಾಂತ ಘೋಟನೇಕರ್‌ಗೆ ವಿಧಾನ ಪರಿಷತ್ ಸದಸ್ಯತ್ವದ ಕಿರೀಟ ಕಟ್ಟಿ ಕುಣಿದಾಡಿದರು. ಈಗ ಇದೇ ಘೋಟನೇಕರ್ ದೇಶಪಾಂಡೆಯ ಮಗ್ಗಲು ಮುಳ್ಳಾಗಿದ್ದಾನೆ. ಆರು ವರ್ಷ ಪರಿಷತ್ ಸದಸ್ಯನಾಗಿ ವ್ಯರ್ಥವಾಗಿ ಕಳೆದಿರುವ ಈ ಹೊಲಸು ನಾಲಿಗೆ 'ನಾಯಕ' ಹಳಿಯಾಳ ಬಿಟ್ಟು ಹೊರಗೆ ಬಂದೇ ಇಲ್ಲ. ಹಳಿಯಾಳದಾಚೆಯ ಒಂದೇ ಒಂದು ಗ್ರಾಮ ಪಂಚಾಯತ್ ಅಥವಾ ಮುನ್ಸಿಪಾಲ್ಟಿಯ ಬೇಕು-ಬೇಡ ಆತನಿಗೆ ಅರ್ಥವಾಗಲಿಲ್ಲ; ಒಬ್ಬೇ ಒಬ್ಬ ಸ್ಥಳೀಯ ಸಂಸ್ಥೆಯ ಸದಸ್ಯನ ಪರಿಚಯ ಘೋಟನೇಕರ್‌ಗೆ ಆಗಲಿಲ್ಲ.

ಆದರೆ ಹಳಿಯಾಳದ ಬಹುಸಂಖ್ಯಾತ ಮರಾಠ ಸಮುದಾಯದ ಈ ಘೋಟನೇಕರ್ ಆ ಭಾಗದಲ್ಲಿ ದೇಶಪಾಂಡೆಗೆ ಕೊಡರುಗಾಲಾಗಿ ಬೆಳೆದದ್ದು ಮಾತ್ರ ನಿಜ. ಎಮ್ಮೆಲ್ಸಿ ಅಧಿಕಾರ ಬಲದಿಂದ ದೇಶಪಾಂಡೆಗೆ ಸಮಾನಾಂತರವಾಗಿ ರಾಜಕಾರಣ ಮಾಡಿದ ಈತ ಬಾಸ್ ಜುಟ್ಟಕ್ಕೆ ಕೆಲವೊಮ್ಮೆ ಕೈಹಾಕಿ ಹಾಹಾಕಾರ ಎಬ್ಬಿಸಿದ್ದಾನೆ. ಜಿಲ್ಲೆಯ ಇಬ್ಬರು ಕಾಂಗ್ರೆಸ್ ಶಾಸಕರು ಮತ್ತಿಬ್ಬರು ಕಾಂಗ್ರೆಸ್‌ನ ಸಹ-ಶಾಸಕರು (ಪಕ್ಷೇತರರು) ಸದ್ದಿ, ಘೋಟನೇಕರ್‌ನ ಮುಂದಿಟ್ಟುಕೊಂಡೇ ದೇಶಪಾಂಡೆ ಬಾಲಕ್ಕೆ ಬೆಂಕಿ ಹಚ್ಚಿದ್ದಾರೆ. ಈ ಬಂಡಾಯಗಾರರ ಗ್ಯಾಂಗಿನ ಲೀಡರ್ ಆಗಿ ಅವತರಿಸಿರುವ ಘೋಟನೇಕರ್ ಕೆಡಿಸಿಸಿ ಬ್ಯಾಂಕ್ ನಿರ್ದೇಶಕರ ಮತ್ತು ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆ ಹಾಗು ಅಪೆಕ್ಸ್ ಬ್ಯಾಂಕ್ ಪ್ರತಿನಿಧಿ ಆಯ್ಕೆಯಲ್ಲಿ ದೇಶಪಾಂಡೆ ನೆಕ್ಕಿ ನೋಡುವಂತ ಹೊಡೆತವನ್ನೇ ಕೊಟ್ಟಿದ್ದಾರೆ. ದೇಶಪಾಂಡೆಯ ಇಚ್ಛೆಗೆ ವಿರುದ್ಧವಾಗಿ ತಂತ್ರಗಾರಿಕೆ ನಡೆಸಿದ ಶಾಸಕರು ಘೋಟನೇಕರ್‌ನ ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿಸಿದ್ದರು; ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್‌ನನ್ನು ಅಪೆಕ್ಸ್ ಬ್ಯಾಂಕ್‌ಗೆ ಕಳಿಸಿದ್ದರು.


ಇದು ದೇಶಪಾಂಡೆಯ ಪಾಳೆಗಾರಿ ರಾಜಕಾರಣಕ್ಕಾದ ಎರಡನೇ ಭರ್ಜರಿ ಸೋಲು. ಮೊದಲು ಮುಖಭಂಗವಾಗಿದ್ದು ಪಾರ್ಲಿಮೆಂಟ್ ಎಲೆಕ್ಷನ್ ಆಖಾಡದಲ್ಲಿ. ದೇಶಪಾಂಡೆಯ ಮಗ ಪ್ರಶಾಂತ ಭಾರೀ ಅಂತರದಲ್ಲಿ ಸೋಲುವಂತೆ ಸಂಘಟಿತ ಪ್ರಯತ್ನ ತುಂಬ ರಹಸ್ಯವಾಗಿ ನಡೆಸಿತ್ತು ಕಾಂಗ್ರೆಸ್ ಶಾಸಕರ ಬಳಗ! ಸತತವಾಗಿ ಬಿದ್ದ ಈ ಎರಡು ಏಟಿನಿಂದ ವಿಲವಿಲ ಒದ್ದಾಡುತ್ತಿರುವ ದೇಶಪಾಂಡೆ ಇವತ್ತಿಗೂ ಚೇತರಿಸಿಕೊಂಡಿಲ್ಲ, ಎದುರಾಳಿ ಶಾಸಕರ ಹುಟ್ಟಡಗಿಸಲು ಸಾಮ-ಭೇಧ-ದಂಡ ಪ್ರಯೋಗಿಸುತ್ತಲೇ ಇದ್ದಾರೆ. ಮಂತ್ರಿಗಿರಿ ಬಲದಿಂದ ಅಧಿಕಾರಿಗಳನ್ನು ಶತ್ರು ಚತುಷ್ಟಯರ ಮೇಲೆ ಛೂಬಿಟ್ಟು ಹಣಿಯಲು ಹವಣಿಸುತ್ತಿದ್ದಾರೆ. ಮಂತ್ರಿ ದೇಶಪಾಂಡೆ ಮತ್ತು ನಾಲ್ವರು ಶಾಸಕರ ನಡುವಿನ ಸಂಘರ್ಷದ ಬೆಂಕಿ ಜಿಲ್ಲಾ ಕಾಂಗ್ರೆಸ್‌ನ್ನು ಸುಡುತ್ತಿದ್ದರೆ, ಜಿಲ್ಲಾಡಳಿತದ ದಿಕ್ಕು-ದೆಸೆ ತಪ್ಪಿಸಿ ಬಿಟ್ಟಿದೆ!!

ಇಂಥ ಕಷ್ಟದ ಕಾಲಘಟ್ಟದಲ್ಲಿ ವಿಧಾನ ಪರಿಷತ್ ಚುನಾವಣೆ ಎದುರಾಗಿರುವುದು ದೇಶಪಾಂಡೆಯನ್ನು ಕಂಗಾಲಾಗಿಸಿದೆ. ಯಾರಿಗೆ ಟಿಕೆಟ್ ಕೊಡಿಸಬೇಕೆಂಬ ನಿರ್ಧಾರಕ್ಕೆ ಬರಲಾಗದೆ ಆತ ಚಡಪಡಿಸುತ್ತಿದ್ದಾರೆ. ಯಾರೂ ಹಿತವರಾಗಿ ಕಾಣಿಸುತ್ತಿಲ್ಲ, ಯಾರಿಗೆ ಎಮ್ಮೆಲ್ಸಿ ಮಾಡಿದರೂ ಆತ ತನ್ನ ಸಾಮ್ರಾಜ್ಯದ ಪತನಕ್ಕೆ ಹೇತುವಾದಾನೆಂಬ ಭಯ ನಿದ್ದೆಗೆಡಿಸುತ್ತಿದೆ. ಒಮ್ಮೆ ಎಮ್ಮೆಲ್ಸಿಯಾದವನಿಗೆ ಮತ್ತೆ ಅವಕಾಶ ಕೊಡದ ತಂತ್ರಗಾರಿಗೆ ದೇಶಪಾಂ[...] ಎರಡನೇ ಬಾರಿ ಎಮ್ಮೆಲ್ಸಿಯಾದರೆ ಆತ ತನ[...] ನಿಲ್ಲುತ್ತಾನೆಂಬ ದೂರಾಲೋಚನೆ. ಪಕ್ಷದಲ್ಲಿ [...] ಬೆಳೆಯದಂತೆ ಚಿವುಟಿ ಹಾಕುವ ದೇಶಪಾಂಡೆ [...] ಅದ್ಯಾಕೋ ಘೋಟನೇಕರ್‌ನ ಬ್ಲಾಕ್‌ವ[...] ಬೆದರಿದಂತಿದೆ. ಈತನಿಗೆ ಮತ್ತೆ ಟಿಕೆಟ್ ಕೊಟ್ಟ[...] ಕೊಡದಿದ್ದರೂ ಕಷ್ಟ ಎಂಬ ಸಂದಿಗ್ಧ ಸಂಕಟದಲ್ಲಿ ದೇ[...] ಸಿಕ್ಕಿಬಿದ್ದಿದ್ದಾರೆ. ಇವು ಆತನ ಮೂರು ದಶಕ[...] ರಾಜಕಾರಣದ ಅಧಃಪತನದ ದಿನಗಳು.....


ಘೋಟನೇಕರ್‌ನನ್ನು ಮತ್ತೆ ವಿಧಾನ ಪ[...] ಕಳಿಸುವ ಮನಸ್ಸು ದೇಶಪಾಂಡೆಗೆ ಒಂಚೂರು[...] ಆತನನ್ನೂ ಮಾಜಿ ಮಾಡಿ ವಿಡಿ ಹೆಗಡೆಯಂ[...] ಮೂಲೆಯಲ್ಲಿ ಕೂರಿಸುವ ಹಠ ಆತನದು[...] ಗೊತ್ತಾಗಿಯೇ ಘೋಟನೇಕರ್ ಜಿಲ್ಲಾ ಮಟ್ಟದ[...] ಕಾರು-ಕುರ್ಚಿ ಇರಲೆಂದೇ ಕೆಡಿಸಿಸಿ ಬ್ಯಾಂಕಿನ [...] ಜಿದ್ದಿಗೆ ಬಿದ್ದು ಗೆದ್ದುಕೊಂಡಿದ್ದು. ಹಾಗಂತ ಎಮ್ಮೆಲ್[...]



ರಾಜೇಂದ್ರ ನಾಯ್ಕ್




ರವೀಂದ್ರ ನಾಯ್ಕ್



ಎಸ್.ಎಲ್.ಘೋಟನೇಕರ್


## ಬಿಜೆಪಿ ಭೂಪ ಯಾರು?

ಗುಂಪುಗಾರಿಕೆಯ ಗೊಂದಲ-ಗಂಡಾಂತರದಲ್ಲಿರುವ ಜಿಲ್ಲಾ ಬಿಜೆಪಿ ಬಾಸ್‌ಗಳಿಗೆ ಸ್ಥಳೀಯ ಸಂಸ್ಥೆ ಕ್ಷೇತ್ರದ ಎಮ್ಮೆಲ್ಸಿ ಚುನಾವಣೆ ಬಗ್ಗೆ ಅಂಥ ಆಸಕ್ತಿಯೇ ಇಲ್ಲ. ಕಾಗೇರಿ ಕಂಡರೆ ಸಂಸದ ಅನಂತ್ಮಾಣಿ ಪಡೆಗಾಗದು. ಅನಂತ್ಮಾಣಿ ಎಂದರೆ ಪಕ್ಕಾ ಚಡ್ಡಿಗಳೇ ಮೂಗು ಮುರಿಯುತ್ತಾರೆ. ಜಿಲ್ಲಾ ಬಿಜೆಪಿಗೆ ದೊಡ್ಡ ಶನಿಯೆಂದರೆ ಯೂಸ್‌ಲೆಸ್ ಸಂಸದ ಅನಂತ್ಮಾಣಿ ಎಂಬುದು ಪಕ್ಷದ ಒಕ್ಕೊರಲ ಕೂಗು. ಚಡ್ಡಿಗಳಿಗೆ ಜಿಲ್ಲಾ ಬಿಜೆಪಿ ಕಥೆ ಕಂಡು ಏನೋ ಮುಜುಗರ. ಗತಿಗೇಡಿಯಂತಾಗಿರುವ ಬಿಜೆಪಿಯ ಎಮ್ಮೆಲ್ಸಿ ಟಿಕೆಟ್, ಯಾರಿಗೆ ಬೇಕಾಗಿದೆ?




ಕಾಗೇರಿ


ಎಷ್ಟೆಂದರೂ ಮೋದಿ ಮಹಾತ್ಮನ ಪಕ್ಷ ತಾನೆ? ದಿಲ್ಲಿಯಲ್ಲಿ ದರ್ಬಾರು ನಡೆಸುತ್ತಿರುವ ಪಕ್ಷವೆಂದರೆ ಸುಮ್ಮನೆ ಮಾತಾ? ಏನಿಲ್ಲವೆಂದರೂ ಎಮ್ಮೆಲ್ಸಿ ಕ್ಯಾಂಡಿಡೇಟ್ ಖರ್ಚಿಗೆ ಗಂಟು ಬರಲಾರದಾ? ಆ ಗಂಟಿನ ಮೇಲೆ ಕಣ್ಣಿಟ್ಟಿರುವ ಕಳ್ಳರು ಬಿಜೆಪಿ ಟಿಕೆಟ್‌ಗಾಗಿ ಒಳಗೊಳಗೆ ಪ್ರಯತ್ನ ನಡೆಸಿದ್ದಾರೆ. ಇವರಲ್ಲಿ ಎದ್ದು ಕಾಣುವುದು ಅಂಕೋಲಾ ಪಟ್ಟಣ ಪಂಚಾಯ್ತಿಯ ಅಧ್ಯಕ್ಷ ಭಾಸ್ಕರ್ ನಾರ್ವೇಕರ್. ಈತನ ತಂದೆ ಕಟ್ಟರ್ ಚಡ್ಡಿಯಾಗಿದ್ದರು. ಈ ಭಾಸ್ಕರ್ ಪಕ್ಕಾ ಸಮಯಸಾಧಕ. ದುಡ್ಡೇ ಈತನಿಗೆ ಪಕ್ಷ-ಸಂಘ-ಪ.ಪಂ.... ಎಲ್ಲರೂ.



ಭಾಸ್ಕರ್ ನಾರ್ವೇಕರ್



ಕೆ.ಜಿ. ನಾಯ್ಕ್




ವಿನೋದ್ ಪ್ರಭು


ನಾರ್ವೇಕರ್ ಹೆಸರಿಗಷ್ಟೇ ಆರೆಸ್ಸೆಸ್. ಕಾಗೇರಿ ಅಂಕೋಲಾ ಶಾಸಕನಾಗಿದ್ದಾಗ ಆತನ ಪರಮಾಪ್ತ ಏಜೆಂಟ್ ಆಗಿದ್ದ ನಾರ್ವೇಕರ್ ಆನಂದ ಅಸ್ನೋಟಿಕರ್ ಕಾಂಗ್ರೆಸ್ ಕ್ಯಾಂಡಿಡೇಟಾಗಿದ್ದಾಗ ಕಾಂಗ್ರೆಸ್ ಪಾಲಾಗಿದ್ದ. ಆನಂದ ಬಿಜೆಪಿ ಸೇರಿದಾಗ ಆತನ[...] 'ಮಾತೃ ಪಕ್ಷ'ಕ್ಕೆ ಬಂದ ಈತ ಆ ಸಂದರ್ಭದಲ್ಲಿ ಮಾಡಿದ ಲೇವಾದೇವಿ, ಮಗಾ[...] ಲೂಟಿಗೆ ಲೆಕ್ಕವೇ ಇಲ್ಲ. ಈ ರೊಕ್ಕದ ಬಲದಿಂದ ನಾರ್ವೇಕರ್‌ಗೆ ಒಂ[...] ಎಮ್ಮೆಲ್ಸಿ ಎಲೆಕ್ಷನ್‌ನಲ್ಲಿ ನೋಡುವ ಉಮೇದಿ [...] ಕಾಗೇರಿ ಈತನಿಗೆ ಟಿಕೆಟ್ ಕೊಡಿಸುವ ಕರಾಮತ್ತು ನ[...] ಬಿಜೆಪಿಯ ಘಟಾನುಘಟಿಗಳೆಂದು ಪೋಸ್ ಕೊಡು[...] ತಲೆ ಮರೆಸಿಕೊಂಡಿರುವಾಗ ನಾರ್ವೇಕರ್ ಟಿಕೆಟ್ [...] ನಡೆಸಿರುವುದು ಬಿಜೆಪಿ ಕಾರ್ಯಕರ್ತರಲ್ಲಿ ನಗೆಯ[...] ಬನ್ನಂಜೆ ರಾಜನ ಹಂತಕ ಪಡೆಗೆ ಬಲಿಯಾದ ಜನ[...] ಮಗ ಮಯೂರ ನಾಯಕ್‌ಗೆ ಎಮ್ಮೆಲ್ಸಿ ಆಸೆ [...] ಅಂಕೋಲೆಯ ಕೆಲವು ಬಿಜೆಪಿ ಭೂಪರ [...] ನೋಡುತ್ತಿದ್ದಾರೆ.

ಕಳೆದ ಬಾರಿ ಶೇವಣಿ ಕಳೆದುಕೊಂಡಿದ್ದ ಚಡ್ಡಿ[...] ವಿನೋದ್ ಪ್ರಭುಗೆ ಈ ಬಾರಿ ಸ್ಪರ್ಧಿಸುವ ಧೈರ್ಯ[...] ಸೋತಿದ್ದಕ್ಕೆ ಗೇರು ಅಭಿವೃದ್ಧಿ ನಿಗಮದ ಗೂಟದ[...] ಇನಾಮಾಗಿ ಪಡೆದಿದ್ದ. ಈತ ಇಂಥದ್ದೇ [...] ಸ್ಥಾನಮಾನಕ್ಕಾಗಿ ತಿಪ್ಪರಲಾಗ ಹಾಕುತ್ತಿದ್ದಾನೆ. ಕ[...] ಜೆಡಿಎಸ್ ಸುತ್ತಿ ಬಂದಿರುವ ಕಳಪೆ ಕಂಟ್ರಾಕ್ಟರ್ [...] ಈಶ್ವರನಾಯಕ್ ಕಪ್ಪು ಹಣ ಸುರಿದು ಬಿಜೆಪಿ [...] ಆಗುವ ತರಾತುರಿಯಲ್ಲಿದ್ದಾನೆ. ಈತನಲ್ಲಿರು[...] ಕಂಡು ಬಿಜೆಪಿ ಹೈಕಮಾಂಡ್ ಟಿಕೆಟ್ [...] ನಿರ್ಧಾರಕ್ಕೆ ಬಂದಿದೆ.

ಹಾಗೆಯೇ ಸಿದ್ದಾಪುರ ಪಟ್ಟಣ ಪಂಚಾಯತ[...] ಕೆ.ಜಿ. ನಾಯ್ಕ್‌ಗೂ ಎಮ್ಮೆಲ್ಸಿಯಾಗುವ ಹುಕ್ಕಿ [...] ಈತನ ಲೆಕ್ಕಾಚಾರದಲ್ಲಿ ಕಾಂಗ್ರೆಸ್‌ನ ಒಳಗುದಿಯ[...] ಪಡೆಯುವ ಹುನ್ನಾರಗಳಿವೆ. ಕಾಂಗ್ರೆಸ್ ಬಹು[...] ಈಡಿಗರಿಗೆ ಅವಕಾಶ ಕೊಡದೆ ದೇಶಪಾಂಡೆ ಅ[...] ನಿಲ್ಲಿಸಿದರೆ ಜಾತಿ ಸಮೀಕರಣ ತನಗೆ ನೆರವಾಗಬಹುದೆಂಬುದು ಸಂಸದ ಅ[...] ಶಿಷ್ಯ ಕೆ.ಜಿ. ನಾಯ್ಕನ ಆಲೋಚನೆ. ಕಾಂಗ್ರೆಸ್‌ನಲ್ಲಿ ಎಡವಟ್ಟಾಗಿ ಕೆ.ಜಿ. ನಾಯ್[...] ಹುರಿಯಾಳಾದರೆ ಆತನಿಗೆ ಲಾಭ ಆದರೂ ಆಗಬಹುದು. ಆಗಾತನಿಗೆ ದೇ[...] ವಿರೋಧಿ ಶಾಸಕರಷ್ಟೇ ಅಲ್ಲ ಲೋಕಸಭೆ ಎಲೆಕ್ಷನ್ ಹೊತ್ತಲ್ಲಿ ಬತ್ತಿ ಇಟ್ಟವ[...] ಕೆ.ಜಿ. ನಾಯ್ಕ್‌ಗೆ ಬೆಂಬಲಿಸಬಹುದು!

ಯಾರ ಅದೃಷ್ಟ ಯಾರು ಬಲ್ಲರು?





ಕಾಗೋಡು ತಿಮ್ಮಪ್ಪ

...ಏನೂ ಕಮ್ಮಿಯಾಗಿಲ್ಲ. ಮೂರು ಬಿಲ್ಲ ಕೆಲಸ ...ದಿದ್ದರೂ ಒಣ ರುಬಾಬಿಗೆ ಮತ್ತೆ ಎಮ್ಮೆಲ್ಸಿಯಾಗಲು ... ಕಟಿಪಟಿ ನಡೆಸಿದ್ದಾನೆ; ದೇಶಪಾಂಡೆ ಸೊಕ್ಕಿನ ...ಧಿಪತಿಯ ಸಮಾಧಿ ಮಾಡಲು ಸ್ಕೆಚ್ ಹಾಕುತ್ತಿದ್ದಾರೆ. ...ದರೆ ಘೋಟನೇಕರ್‌ನ ಬಗ್ಗು ಬಡಿಯುವುದು ... ಸುಲಭವಲ್ಲ ಎಂಬ ಆತಂಕ ದೇಶಪಾಂಡೆಯನ್ನು ...ಸಿದೆ. ಹಿಂದೆ ಅತ್ಯಾಪ್ತನಾಗಿದ್ದ ವೀಡಿ ಹೆಗಡೆ ...ಬಿದ್ದಾಗ ಆದ ಅನಾಹುತ ದೇಶಪಾಂಡೆ ಮರೆತಿಲ್ಲ. ... ಮಗ ಸುನಿಲ್ ಹೆಗಡೆ ಜೆಡಿಎಸ್‌ನಿಂದ ...ಯಾಳದಲ್ಲಿ ಸ್ಪರ್ಧಿಸಿ ದೇಶಪಾಂಡೆಯನ್ನು ಸೋಲಿಸಿದ್ದ. ... ಅತೀ ಸಣ್ಣ ಕೊಂಕಣಿ ಜಾತಿಯವನಾದರೂ ...ಸಂಖ್ಯಾತ ಮರಾಠರ ಒಲಿಸಿಕೊಂಡಿದ್ದ. ಮರಾಠರ ...ಟನೇಕರ್ ವೈರಿಯಾದರೆ ದೇಶಪಾಂಡೆ ಪರಿಸ್ಥಿತಿ ...ನೀತು? ನೀವೇ ಯೋಚಿಸಿ. ಮರಾಠರ ಓಟ್ ಕಟ್ ...ದೇಶಪಾಂಡೆಯ ಶಾಸಕ ಸ್ಥಾನಕ್ಕೆ ಕುತ್ತು ಬರುತ್ತದೆ. ... ಅಲ್ಲ, ಕುಲೋದ್ಧಾರಕ ಪ್ರಶಾಂತ ದೇಶಪಾಂಡೆಯ ...ವೂ ಬರಡಾಗುತ್ತದೆ. ಈ ಲೆಕ್ಕಾಚಾರದಲ್ಲಿ ದೇಶಪಾಂಡೆ ...ಣಾಗಿ ಹೋಗಿದ್ದಾರೆ.

...ದೇಶಪಾಂಡೆಗೆ ಜಿಲ್ಲೆಯ ಬಹುಸಂಖ್ಯಾತ ದೀವರು ...(ಗ) ಕೋಮಿನ ಧೀರನ್ಯಾರಿಗಾದರೂ ಎಮ್ಮೆಲ್ಸಿ ಟಿಕೆಟ್ ...ದರೆ ಲಾಭ ಜಾಸ್ತಿ ಎಂಬ ಯೋಚನೆ. ಆದರೆ ...ಮಟ್ಟದಲ್ಲಿ ಗುರುತಿಸಿಕೊಂಡಿರುವ ಕಾಂಗ್ರೆಸ್‌ನ ದೀವರ ...ರುಗಳೆಂದರೆ ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕ್ ಮತ್ತು ... ಅತಿಕ್ರಮಣದಾರರ ಸ್ವಯಂಘೋಷಿತ ಮುಂದಾಳು ...ದ್ರನಾಥ ನಾಯ್ಕ್ ಯಾನೆ ಎ. ರವೀಂದ್ರ ಇಬ್ಬರೇ. ...ಲ್ಲಿ ಭೀಮಣ್ಣ ತನಗೆ ಎಮ್ಮೆಲ್ಸಿಗಿರಿ ಬೇಡ ಅಂತಿದ್ದಾರೆ. ...ಗೆ ಶಿರಸಿಯಿಂದ ಶಾಸಕನಾಗೋದೊಂದೇ ಜೀವನದ ...ಮ ಆಸೆ. ಈ ಆಸೆ ಈಡೇರಿಸಿಕೊಳ್ಳಲು ಆತ ದನ ...ಯುತ್ತಿದ್ದ ತನ್ನನ್ನು ರಾಜಕಾರಣಿಯಾಗಿಸಿದ ಭಾವ 'ಬಂ'ಗೂ ...ಕಾಲದಲ್ಲಿ ಕೈಕೊಟ್ಟು ಕಾಂಗ್ರೆಸಲ್ಲೇ ಉಳಿದಿದ್ದಾನೆ. ...ದ ದೇಶಪಾಂಡೆ ಕಳೆದ ಬಾರಿ ಶಿರಸಿ ಟಿಕೆಟ್ ...ತಲೇ ಕೊಡಿಸದಿದ್ದರೂ ಮತ್ತೆ ಆತನ ಹಿಂದಿಂದೇ ...ತ್ತಿದ್ದಾನೆ.

...ನ್ನೊಬ್ಬ ದೀವರ ಮುಂದಾಳು ರವೀಂದ್ರನಾಥ ನಾಯ್ಕ್ ... ದೇಶಪಾಂಡೆಗೆ ಆಗದು. ಈ ರವಿ ಮ್ಯಾಗಿ ಶಿಷ್ಯನಾಗಿ ...ಪದಲ್ಲಿ ಗುರುತಿಸಿಕೊಂಡಾತ. ಈಗ ಆಕೆಯಿಂದಲೂ ...ಗಿದ್ದಾನೆ. ಅರಣ್ಯ ಅತಿಕ್ರಮಣದಾರರ ಪರ ತಾನು ...ಸುತ್ತಿರುವ ಹೋರಾಟ ಹಳ್ಳಿಯ ಗ್ರಾಮ ಪಂಚಾಯತ್ ...ದಲ್ಲಿ ತನ್ನನ್ನು ಭಾರೀ ಜನಪ್ರಿಯವಾಗಿಸಿದೆ ಎಂದಾತ ...ದಿದ್ದಾನೆ. ಈ 'ಜನಬಲ' ತನ್ನನ್ನು ಸ್ವತಂತ್ರವಾಗಿ ನಿಂತರೂ ...ಲ್ಸಿ ಮಾಡುತ್ತದೆಂಬ ಇಂಗಿತ ಆತನದು. ರವಿ ಬೆನ್ನಿಗೆ ...ಸ ದೊಡ್ಡ ಮುಖಂಡರಾದ ಸ್ಪೀಕರ್ ಕಾಗೋಡು ...ಮ್ಮಪ್ಪ, ಎಐಸಿಸಿ ಪ್ರಧಾನ ಕಾರ್ಯದರ್ಶಿ ...ಸಾದ್‌ನಂಥವರಿದ್ದಾರೆ. ಸ್ವ-ಜಾತಿ ಹುಡುಗ ...ಲ್ಸಿಯಾಗಲಿ ಎಂಬ ಹಾರೈಕೆ-ಬೆಂಬಲ ಇವರದು. ...ಗಿ ದೇಶಪಾಂಡೆ ಜತೆಗೂ ಈ ಇಬ್ಬರು ದೀವರ ...ಗಳು ಒಂದು ಸುತ್ತಿನ ರಾಜಿ ಮಾತುಕತೆ ನಡೆಸಿದ್ದಾರೆ. ... ಮಹತ್ವಾಕಾಂಕ್ಷಿಯೂ- ಜನರ ನಡುವೆ ಬೇರು ...ದ ರವಿ ಎಮ್ಮೆಲ್ಸಿಯಾದರೆ ತನಗೆ ತೊಂದರೆ ...ದು ದೇಶಪಾಂಡೆಯ ಮನದಿಂಗಿತ.

...ಗಾಗಿ ದೇಶಪಾಂಡೆ ದೀವರಿಗೇ ಟಿಕೆಟ್ ...ಕೆಂದರೆ ಅಂಕೋಲಾ ಮುನ್ಸಿಪಾಲ್ಟಿ ಸದಸ್ಯ ... ನಾಯ್ಕ್ ಇದ್ದಾನಲ್ಲ ಎಂದು ಕಿತಾಪತಿ ಶುರು ...ಡಿದ್ದಾರೆ. ಕರಿ ರಾಜು ಎಂದೇ ಅಂಕೋಲೆಯಲ್ಲಿ ...ಗಿರುವ ಈತನ ಪರಿಚಯ ಜಿಲ್ಲೆಯ ಬೇರೆ ... ಇಲ್ಲ. ದೇಶಪಾಂಡೆ ಮಗ ಪ್ರಶಾಂತನಿಗಾಗಿ ...ಯಲ್ಲಿ ಆಗಾಗ ಬೋಗಸ್ ಫಂಕ್ಷನ್ ನಡೆಸುವ ... ರಾಜುಗೆ ಎಮ್ಮೆಲ್ಸಿಯಾಗುವ ಅರ್ಹತೆಯಿಲ್ಲ ... ಪ್ರಶಾಂತ ಅಣ್ಣಂಗೆ ಒತ್ತಡ ಹಾಕಿ ಕರಿರಾಜು ... ಕಾಂಗ್ರೆಸ್‌ನಲ್ಲಿ ಪ್ರಕಾರಿದಿದೆ.

ಬರೋಬ್ಬರಿ ಹದಿನೆಂಟು ವರ್ಷದ ಹಿಂದೆ ಇದೇ ಕ್ಷೇತ್ರದಲ್ಲಿ ಬಂಡಾಯ ಕಾಂಗ್ರೆಸಿಗನಾಗಿ ಸ್ಪರ್ಧಿಸಿ ಠೇವಣಿ ಕಳೆದುಕೊಂಡು ಜೆಡಿಎಸ್ ಪಾಲಾಗಿದ್ದ ರವಿ ನಾಯ್ಕ್, ನೆಟ್ಟಗೆ ಪಟ್ಟಣ ಪಂಚಾಯತ್‌ಗೆ ಗೆಲ್ಲಲಾಗದೆ ತಿಣುಕಾಡುವ ರಾಜು ನಾಯ್ಕ್, ಹವ್ಯಕರೇ ಮೂಸಿ ನೋಡದ ಶಾಂತಾರಾಮ ಹೆಗಡೆ, ಉಮ್ಮಾಣಿ ಭಟ್ಟ... ವಗೈರೆಗಿಂತ ಘೋಟನೇಕರ್‌ನೆ ಅನಿವಾರ್ಯ ಅನಿಷ್ಟ ಎಂಬ ತೀರ್ಮಾನಕ್ಕೆ ದೇಶಪಾಂಡೆ ಬಂಧಿದ್ದಾರೆ. ಮಗನನ್ನು ಎಂಪಿ ಮಾಡಲಾಗದ ದೇಶಪಾಂಡೆ ಮುಂದಿನ ಬಾರಿ ಹಳಿಯಾಳ ಅಸೆಂಬ್ಲಿ ಕ್ಷೇತ್ರ ಮಗನಿಗೆ ಬಿಟ್ಟುಕೊಟ್ಟು ತಾನು ನಿವೃತ್ತಿ ಪಡೆಯಲು ಯೋಚಿಸಿದ್ದಾರೆ. ಹಳಿಯಾಳದಲ್ಲಿ ದೇಶಪಾಂಡೆಯಾಗಲೀ ಅಥವಾ ಪ್ರಶಾಂತನಾಗಲಿ ಶಾಸಕನಾಗಬೇಕಾದರೆ ಬಹುಸಂಖ್ಯಾತ ಮರಾಠರ ಕೃಪೆ ಬೇಕೇಬೇಕು. ಹೀಗಾಗಿ ಮರಾಠರನ್ನು ತುಂಬ ನಾಜೂಕಾಗಿ ನಿಭಾಯಿಸಬೇಕಾದ ಸಂದಿಗ್ಧ ದೇಶಪಾಂಡೆಯದು. ಇಂಥಾದ್ದರಲ್ಲಿ ಮರಾಠ ಮುಖಂಡ ಘೋಟನೇಕರ್ ಏನಾದರೂ ಮುರಿದುಕೊಂಡು ಬಿದ್ದರೆ ದೇಶಪಾಂಡೆ ಪಾಡೇನಾದೀತು?

ಮಗನ ಭವಿಷ್ಯಕ್ಕಾಗಿ ದೇಶಪಾಂಡೆ ಮತ್ತೆ ಘೋಟನೇಕರ್‌ಗೇ ಚಾನ್ಸ್ ಕೊಡಬೇಕಾದ ಫಜೀತಿಗೆ ಬಿದ್ದಿದ್ದಾರೆಂದು ಕಾಂಗ್ರೆಸ್‌ನವರೇ ಮೂದಲಿಸುತ್ತಿದ್ದಾರೆ. ದೇಶಪಾಂಡೆಯ ಮುಂದಾಲೋಚನೆ ರಾಜಕಾರಣ, ವ್ಯಾಪಾರಿ ಬುದ್ಧಿ ನೋಡಿದರೆ ಘೋಟನೇಕರ್‌ಗೆ ಕಾಂಗ್ರೆಸ್ ಟಿಕೆಟ್ ಸಿಗುವ ಅವಕಾಶ ಹೆಚ್ಚಾಗಿದೆ ಅನ್ನಿಸುತ್ತದೆ. ಆದರೆ ಘೋಟನೇಕರ್ ಗೆಲ್ಲುವುದು ಕಷ್ಟ. ಜಿಲ್ಲೆಯ ಹಳ್ಳಿಹಳ್ಳಿಯ ಗ್ರಾಪಂ, ಮುನ್ಸಿಪಾಲ್ಟಿ, ಜಿಪಂ, ತಾಪಂಗಳ ಸದಸ್ಯರಲ್ಲಿ ಘೋಟನೇಕರ್ ಬಗ್ಗೆ ಅಸಹ್ಯ ಮೂಡಿದೆ. ಕಳೆದ ಆರು ವರ್ಷದಲ್ಲಿ ಒಮ್ಮೆಯೂ ಮುಖ ತೋರಿಸದ ಮುಖೇಡಿ ಘೋಟನೇಕರ್‌ಗೆ ಬುದ್ಧಿ ಕಲಿಸಲು ಸ್ಥಳೀಯ ಸಂಸ್ಥೆ ಮತದಾರರು ಈಗಾಗಲೇ ದೃಢ ನಿರ್ಧಾರ ಮಾಡಿದ್ದಾರೆ. ಹಾಗಂತಲೇ ಹೇಳುತ್ತಿದೆ ಪೊಲೀಸ್ ಇಂಟಲಿಜೆನ್ಸ್ ವರದಿ. ಗುಪ್ತಚರ ವರದಿ ಪ್ರಕಾರ ಘೋಟನೇಕರ್‌ನೇ ಕ್ಯಾಂಡಿಡೇಟಾದರೆ ಕಾಂಗ್ರೆಸ್‌ಗೆ ಸೋಲು ಖಚಿತ!!

ಘೋಟನೇಕರ್ ಸೋಲು ಖಚಿತವಾಗಿರುವುದರಿಂದಲೇ ದೇಶಪಾಂಡೆ ಆತನ ಪರ ವಕಾಲತ್ತು ಮಾಡುತ್ತಿದ್ದಾರೆ. ಒಂದೇ ಕಲ್ಲಿಂದ ಎರಡೆರಡು ಹಕ್ಕಿ ಉದುರಿಸುವ ಘಾತಕ ರಾಜಕಾರಣದ ಆಟ ಮುದಿ ಡಾನ್ ದೇಶಪಾಂಡೆಯದು. ಕಾಂಗ್ರೆಸ್ ಸೋತರೂ ಪರವಾಗಿಲ್ಲ; ತನಗೆ ಅಥವಾ ತನ್ನ ಮಗನಿಗೆ ಹಳಿಯಾಳದ ಬಹುಸಂಖ್ಯಾತ ಮರಾಠರ ಮತ ದಕ್ಕಬೇಕಷ್ಟೇ ಎಂಬ ಇರಾದೆ ದೇಶಪಾಂಡೆಯದು. ಘೋಟನೇಕರ್ ಸೋತರೆ ಕಿರಿಕಿರಿ ಮಾಡುವ ಶನಿಯೂ ತೊಲಗುತ್ತದೆ; ಮರಾಠರ ಮತ ಬ್ಯಾಂಕೂ ಭದ್ರವಾಗುತ್ತದೆ ಎಂಬ ಕಂತ್ರಿ ಕರಾಮತ್ತು ದೇಶಪಾಂಡೆಯದು.

ಅಕಸ್ಮಾತ್ ಘೋಟನೇಕರ್‌ನೇ ಕಾಂಗ್ರೆಸ್ ಹುರಿಯಾಳಾದರೆ ಯಲ್ಲಾಪುರದ ಶಾಸಕ ಹೆಬ್ಬಾರ್, ಕುಮಟೆಯ ಶೆಟ್ಟಿಯಮ್ಮ, ಕಾರವಾರದ ಸೈಲಣ್ಣ ಮತ್ತು ಭಟ್ಕಳದ ಮಂಕಾಳ ಮಾಧು ಫಜೀತಿಗೆ ಬೀಳುತ್ತಾರೆ. ಇಷ್ಟು ದಿನ ದೇಶಪಾಂಡೆ ಮೇಲೆ ಈ ನಾಲ್ವರು ಶಾಸಕರು ಸಮರ ಸಾರಿದ್ದೇ ಘೋಟನೇಕರ್‌ನ ಸೇನಾಧಿಪತ್ಯದಲ್ಲಿ. ಈಗವರು ಅನಿವಾರ್ಯವಾಗಿ ಘೋಟನೇಕರ್‌ನ ಕೈಬಿಡಬೇಕಾಗಿ ಬರುತ್ತದೆ. ಈಗಾಗಲೇ ದೇಶಪಾಂಡೆ ಹೇರುವ ಕ್ಯಾಂಡಿಡೇಟ್ ವಿರುದ್ಧ ಸಂಘಟಿತ ಸೋಲಿಸುವ ಪ್ರಯತ್ನ ಮಾಡುವ ರಹಸ್ಯ ತೀರ್ಮಾನ ಕಾಂಗ್ರೆಸ್ ಶಾಸಕರು ಮತ್ತು ಬಹುಸಂಖ್ಯಾತ ಜನಪ್ರತಿನಿಧಿಗಳು, ಕಾರ್ಯಕರ್ತರು ಮಾಡಿದ್ದಾರೆ. ಬಹುಸಂಖ್ಯಾತ ದೀವರಿಗೆ ಪರಿಷತ್ ಟಿಕೆಟ್ ಕೊಡದಿದ್ದರೆ ಕಾಂಗ್ರೆಸ್‌ಗೆ ಖಂಡಿತ ಲಗಾಟಿ ಹೊಡೆಯಲಿದೆ. ಹಳಿಯಾಳದ ಸ್ವಾರ್ಥ ರಾಜಕಾರಣಕ್ಕಾಗಿ ಇಡೀ ಜಿಲ್ಲಾ ಕಾಂಗ್ರೆಸ್ ಅಪೋಶನ ಪಡೆಯಲು ಸಿದ್ಧವಾಗಿರುವ ದೇಶಪಾಂಡೆಗೆ ಜಿಲ್ಲೆಯ ಜನರು ಮತ್ತೊಂದು ಪಾಠ ಕಲಿಸೋದಂತೂ ಗ್ಯಾರಂಟಿ!!


■ ನಹುಷ

# ಹಿಂಸಾಲೋಕದ ಪಾಪಿಗಳು ಮಾತ್ರ ಗಾಂಧಿ ವಿರೋಧಿಗಳು!

## ಥೂತ್ತೇರಿ

▸ ಯಾಹೂ

ಅರಸು ಶತಮಾನೋತ್ಸವ ಬಂದಿದೆ. ಪರಿವರ್ತನೆ ಹರಿಕಾರನ ಫಲಾನುಭವಿಗಳು ತಮ್ಮ ಕೈಲಾದಷ್ಟು ಸ್ಮರಣೆ ಮಾಡಿಕೊಂಡು ಕೃತಾರ್ಥರಾಗಲು ತಯಾರಿ ನಡೆಸಿದ್ದಾರೆ. ಆದರೆ ಇಂದುಳಿದ ವರ್ಗದ ಹಿಂದೂಧರ ಎಂಬ ಪತ್ರಕರ್ತರು "ಅರಸು ದುಷ್ಟ, ನೀಚ, ಭ್ರಷ್ಟ" ಎಂದು ಬಿಂಬಿಸಲು ಹೆಣಗುತ್ತಿದ್ದಾರಂತಲ್ಲಾ. "ಛೇ ಕನ್ನಡದ ಪ್ರಬುದ್ಧ ಪತ್ರಕರ್ತರು ಹಾಗೆ ಹೇಳಿರಲಾರರು. ಮರುಚಿಂತಿಸಿ ಮಾತನಾಡಿ" ಎಂದು ಅರಸು ಅಭಿಮಾನಿಗಳನ್ನು ಕೇಳಲಾಗಿ "ಇಲ್ಲ, ನೀವೇ ಬೇಕಿದ್ದರೆ ಮುಕ್ತ ಮನಸ್ಸಿನಿಂದ ಭೂಗತಲೋಕದ ಕಣ್ಣಿನಿಂದ ನೋಡಿ ಅರಸುರವರನ್ನು ಅಳೆಯಿರಿ ಎಂದು ಧಮಕಿ ಹಾಕಿದ್ದಾರೆ ಸಾರ್. ಅದಷ್ಟೇ ಅಲ್ಲ, ಗಾಂಧಿ ಮತ್ತು ಅರಸುರವರನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗಿ ಎಸೆದಿದ್ದಾರೆ" ಎಂದರಲ್ಲಾ. ಗಾಂಧಿಯನ್ನು ವಿರೋಧಿಸುವುದು ಸಹಜ.. ಏಕೆಂದರೆ ಹಿಂಸಾಲೋಕದಲ್ಲಿದ್ದು ಅದನ್ನೇ ಹಾಸಿ ಹೊದ್ದು ಮಲಗುತ್ತಿದ್ದವರಿಗೆ ಗಾಂಧಿ ಅಹಿಂಸೆ ಅಪಥ್ಯವಾಗುವುದು ಸರಿ. ಆ ದಿಸೆಯಲ್ಲಿ ಗೊಡ್ಸೆಯ ಅಕ್ರಮ ಸಂತಾನದಂತಹ ರಕ್ತಬೀಜಾಸುರ ಪಡೆ ಈಚೆಗೆ ದೇಶದಲ್ಲಿ ಅಭಿವೃದ್ಧಿ ಹೊಂದುತ್ತಿದೆ. ಆದರೆ ಅರಸು ವಿರೋಧಕ್ಕೆ ಅರ್ಥವೇ ಇಲ್ಲ. ಹೊಟ್ಟೆಪಾಡಿಗಾಗಿ ಪಾತಕ ಲೋಕಕ್ಕೆ ಇಳಿದವರನ್ನು ರಕ್ಷಿಸಿ ಗೌರವಿಸಿದ ತಂದೆ ಅರಸು. ಅವರು ಆ ಸಂದರ್ಭದಲ್ಲಿ




ಮೆಚ್ಚಿದ ಅನಾಗರಿಕ ರಕ್ಕಸ ಶಿವಮೊಗ್ಗದ ರಾಮಚಂದ್ರನಿಗೆ ಕೊತ್ವಾಲ ಎಂದು ಹೆಸರಿಟ್ಟಿದ್ದರು. ಅಂತಹ ಕೊತ್ವಾಲನ ಆತ್ಮೀಯರಾಗಿದ್ದು ಅರಸುವನ್ನು ನೀಚ, ಭ್ರಷ್ಟ ಎಂದು ತೆಗಳುವುದು ಸರಿಯೇ ಎಂಬುದು ಅರಸು ಅಭಿಮಾನಿಗಳ ಪ್ರಶ್ನೆಯಾಗಿದೆಯಲ್ಲಾ, ಥೂತ್ತೇರಿ!!

******

ಕಾಲ ಸರಿದಂತೆ ಮೈಸೂರು ದಸರಾ ರಾಜಕಾರಣಿಗಳಿಗೆ ಬೇಕಿಲ್ಲದ ಪರೀಕ್ಷೆಯಾಗುತ್ತಿದೆ. ಆದರೆ ಮೈಸೂರಿನ ದೊಡ್ಡ ಮತ್ತು ಪುಡಿ ರಾಜಕಾರಣಿಗಳಿಗೆ ನಿಜಕ್ಕೂ ಹಬ್ಬ. ಏಕೆಂದರೆ ದಸರಾಕ್ಕಾಗಿ ನಡೆಯುವ ಕಾಮಗಾರಿ ಉತ್ಸವದ ಖರ್ಚಿನಲ್ಲಿ ಸಿಗುವ ಪರಸಂಟೇಜ್ ಏರುತ್ತಿದೆ. ಆದ್ದರಿಂದ ಅಂತಹ ಉತ್ಸವ ರಾಜಕಾರಣಕ್ಕೋಸ್ಕರ ನಡೆಯಲೇಬೇಕಿದೆ. ಮೈಸೂರಿನ ಸುಸಂಸ್ಕೃತ ಮನಸ್ಸುಗಳಿಗೆ ಸವಾಲೆಂಬಂತೆ ಆರ್‌ಎಸ್‌ಎಸ್‌ನ ಹೈನಾವೊಂದು "ನಾನು ಸಿಂಹ" ಎಂದು ಹೇಳಿಕೊಂಡು ಸಂಸದನಾದಾಗಿನಿಂದ ನಮ್ಮ ವಾರಾನ್ನದ ಎಕ್ಸ್‌ಪರ್ಟ್ ಎಸ್.ಎಲ್. ಭೈರಪ್ಪನಿಂದಲೇ ದಸರಾ ಉದ್ಘಾಟಿಸಬೇಕೆಂದು ಹಠ ಹಿಡಿದಿರುವಾಗಲೇ ದಡ್ಡ ಸರ್ಕಾರ "ಯಾರೂ ಬೇಡ. ನಮ್ಮ ಕಡಿದಾಳು ಶಾಮಣ್ಣನೇ ಸರಿ. ಕರೆದ ಕೂಡಲೇ ಬಂದು ಖುಷಿಯಿಂದ ದಸರಾ ಉದ್ಘಾಟಿಸುತ್ತಾರೆ" ಎಂದು ಭಾವಿಸಿದ್ದೂ ಅಲ್ಲದೆ ಕರೆದು ಇಲ್ಲ ಎನ್ನಿಸಿಕೊಂಡು ಅವಮಾನ ಅನುಭವಿಸಿದೆಯಲ್ಲಾ. ಈ ಸರಕಾರದಲ್ಲಿ ಯಾರಾದರೂ ಶಾಮಣ್ಣನ ಪರಿಚಯವಿದ್ದವರು ಇದ್ದಿದ್ದರೆ ಇಂತಹ ಮಂಗಳಾರತಿಯಾಗುತ್ತಿರಲಿಲ್ಲ. ಗೋಪಾಲಗೌಡರ ಶಿಷ್ಯರಾದ ಶಾಮಣ್ಣ, ಅವರ ಮಾತಿನ ಕಿಡಿ ಹೊತ್ತಿಸಿಕೊಂಡು ಹೋಗಿ ಜಂಬೂಸವಾರಿಗೇ ಕ್ಯಾಟರ್‌ಬಿಲ್ಲಿಂದ ಕವಣೆ ಕಲ್ಲು ಬೀರಿದ್ದ ಅಸಾಮಿ. ಅದೆಲ್ಲಕ್ಕಿಂತ ಮುಖ್ಯವಾಗಿ ಇದೇ ದೇವೇಗೌಡರು ಮುಖ್ಯಮಂತ್ರಿಯಾದಾಗ ಶಾಮಣ್ಣನಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿದರು. ಕೂಡಲೇ ಶಾಮಣ್ಣ "ಅತಿವೃಷ್ಟಿಯಿಂದ ಬೆಳೆಕಳೆದುಕೊಂಡು ರೈತರು ಅಳುತ್ತಿರುವಾಗ ನಾನು ರಾಜ್ಯೋತ್ಸವ ಪ್ರಶಸ್ತಿ ಪಡೆಯಲಾರೆ" ಎಂದು ಮುಖ್ಯಮಂತ್ರಿ ಮುಖಕ್ಕೆ ಹೇಳಿದ್ದನ್ನು ಮರೆತಿರುವ ಇಂದಿನ ಮುಖ್ಯಮಂತ್ರಿ ಪುನಃ ಶಾಮಣ್ಣನನ್ನು ಕರೆದಿದ್ದಾರಲ್ಲಾ, ಥೂತ್ತೇರಿ!!


*******

ಈ ಸಮಾಜದ ಕ್ಷೋಭೆಗೆ ಮಾಂಸಾಹಾರವೇ ಮುಖ್ಯ ಕಾರಣವೆಂದು ವಿಜಯಲಕ್ಷ್ಮಿ ಬಾಳೆಕುಂದ್ರಿ ಎಂಬ ವೈದ್ಯೆ ಬಾಯಿ ಬಡಿದುಕೊಂಡಿದ್ದಾರಂತಲ್ಲಾ. ಮಾಂಸಾಹಾರ ಮಾಡಿದರೆ ಅದು ಕರುಳಿನಲ್ಲಿ ಸ್ವಾಕಾಗಿ ಕೊಳೆತು ಜೀವಕ್ಕೆ ಆಪತ್ತು ತರುತ್ತದೆ ಎಂದು ಪ್ರತಿಪಾದಿಸುವ ಈಕೆ ಮುಂದುವರಿದು ಯಕೃತ್ತು, ಮೂತ್ರ ಪಿಂಡ, ಮೂಲವ್ಯಾಧಿ, ಮಲಬದ್ಧತೆ ಮತ್ತು ಇವೆಲ್ಲವುಗಳಿಂದ ಕ್ಯಾನ್ಸರ್ ಎಂದು ಹೆದರಿಸಿದ್ದಾರಲ್ಲಾ. ಕಡೆಗೆ ಈ ದೇಶ ಶಾಂತಿ ಸಮಾಧಾನ ಸಮೃದ್ಧಿಯಿಂದ ಇರಬೇಕಾದರೆ, ಸಸ್ಯಾಹಾರವೇ ಏಕೈಕ ಮಾರ್ಗ ಎಂಬ ಅಂತಿಮ ತೀರ್ಪು ಕೊಟ್ಟಿದ್ದಾರಲ್ಲಾ. ಸದರಿ ವೈದ್ಯೆ ಪ್ರಸ್ತಾಪಿಸಿದ ಮಾತುಗಳು ಸಸ್ಯಾಹಾರಿಗಳಿಗೆ ಹೇಳಿರುವ ತಿಳಿವಳಿಕೆಯೇ ಹೊರತು ಮಾಂಸಾಹಾರಿಗಳಿಗಲ್ಲ. ಸಸ್ಯಾಹಾರಿಗಳಲ್ಲೇ ನಡೆದುಬಂದ ಪರಂಪರೆಯಲ್ಲಿ ಮಾಂಸವನ್ನು ಜೀರ್ಣಿಸಿಕೊಂಡು ಬಿಸಾಡುವ ಶಕ್ತಿಯಿಲ್ಲದೆ ಇರಬಹುದು. ಆದರೆ ಮಾಂಸಾಹಾರಿಗಳಲ್ಲಿ ಹಾಗಿಲ್ಲ. ಮಾಂಸಾಹಾರದಿಂದ ಸಮಾಜದ ಕ್ಷೋಭೆ ಹೆಚ್ಚುತ್ತೆ ಎನ್ನುವುದಾದರೆ ಶುದ್ಧ ಸಸ್ಯಾಹಾರದ ರಾಘವೇಶ್ವರ ಸ್ವಾಮಿ ಮಾಂಸದ ತುಂಡಿನ ಸಮಸ್ಯೆಯಿಂದಲೇ ಇಡೀ ಸಮುದಾಯವನ್ನೇ ಕ್ಷೋಭೆಗೀಡುಮಾಡಿ ಸಮರಕ್ಕೂ ಸೈ, ಸ್ನೇಹಕ್ಕೂ ಸೈ ಎನ್ನುತ್ತಿದ್ದಾನಲ್ಲಾ. ಇದಕ್ಕೆ ನಮ್ಮ ಅಪೂರ್ವ ವೈದ್ಯರ ಉತ್ತರವೇನು? ನಮ್ಮ ನಡುವಿನ ಅಹಿಂಸಾವಾದಿ ಸಜ್ಜನ ರಾಜಕಾರಣಿ ಎಚ್.ಟಿ. ಕೃಷ್ಣಪ್ಪ ಮೊದಲು ಹೆಂಡತಿ ಜೊತೆ ಸೇರಿಕೊಂಡು ಒಂದು ಕೆ.ಜಿ. ಮಟನ್ ತಿನ್ನುತ್ತಿದ್ದರು. ಹೆಂಡತಿ ತೀರಿಕೊಂಡಮೇಲೆ ಅರ್ಧ ಕೆ.ಜಿ.ಗೆ ಬಂದರು. ಈಗಲೂ ತಮ್ಮ ಎಂಭತ್ತಾರನೇ ವಯಸ್ಸಿನಲ್ಲಿ ಮಾಂಸ ಬಿಟ್ಟಿಲ್ಲ. ಯಾವ ಕಾಯಿಲೆಯೂ ಇಲ್ಲ. ಸದರಿ ವೈದ್ಯೆ ಕೃಷ್ಣಪ್ಪನವರ ಕರುಳು ಚೆಕಪ್ ಮಾಡಿದರೆ ಒಳ್ಳೆಯದಲ್ಲವೆ. ಥೂತ್ತೇರಿ!!

*******

ಚೆಡ್ಡಿಗಳು ಯಾವ ಛದ್ಮವೇಷದಲ್ಲಿದ್ದರೂ ಪತ್ತೆಯಾಗುತ್ತಾರಂತೆ. ಅವರು ಕತ್ತೆ ಚರ್ಮಹೊದ್ದು ನಿಂತಿದ್ದರೂ ಕಣ್ಣುಗಳಿಂದಲಾದರೂ ಪತ್ತೆಯಾಗುತ್ತಾರಂತೆ. ಅದೆಲ್ಲಕ್ಕಿಂತ ಮುಖ್ಯವಾಗಿ ಅವರ ಸಂಘಟನೆಯೇ ಕಪಟತನದಿಂದ ಕೂಡಿದ್ದು, ಅಖಂಡಹಿಂದು, ಅಖಂಡಭಾರತ, ಸರ್ವೇ ಜನ ಸುಖೀನೋ ಭವಂತು ಇವೆಲ್ಲಾ ಛದ್ಮವೇಷದ ಘೋಷಣೆಗಳಷ್ಟೇ ಎಂಬುದು ಹಳೆಯ ಸಂಗತಿ. ಆದರೆ ಮೀಸಲಾತಿ ವಿಷಯದಲ್ಲಿ ಅವರಾಡುತ್ತಿರುವ ನಾಟಕ ಈ ದೇಶದ ಪ್ರಜ್ಞಾವಂತರ ಮನಸ್ಸಿಗೆ ಆಗಲೇ ಹೊಳೆದಿತ್ತು, ಆದರೀಗ ಅದರ ಸ್ಪಷ್ಟ ಚಿತ್ರಣ ಸಿಗತೊಡಗಿದೆ. ವರ್ಷದ ಹಿಂದೆ ಭಾಗವತ ಎಂಬ ಬೃಹಸ್ಪತಿ ಈ ದೇಶದಲ್ಲಿ ಅಸ್ಪೃಶ್ಯತೆ ಇರುವವರೆಗೆ ಮೀಸಲಾತಿ ಇರುತ್ತದೆ ಎಂದಾಗಲೇ ಅನುಮಾನ ಹುಟ್ಟಿತ್ತು. ಈಗ ಈ ಮಾತಿನ ಹಾವಡದ ಕೂಸು ಗುಜರಾತ್‌ನಲ್ಲೇ ಕಾಣಿಸಿಕೊಂಡಿದೆ. ದಿನಬೆಳಗಾಗುವುದರಲ್ಲಿ ಗುಜರಾತಿನಲ್ಲಿ ಬೀದಿ ಅಭ್ಯರ್ಥಿ ಪಟೇಲ್ ಸಂತತಿ ದೇಶವ್ಯಾಪಿ ಹಬ್ಬುವಂತೆ ಮಾಡಲು ಹಗಲು ರಾತ್ರಿ ಕಾರ್ಯಕ್ರಮಗಳನ್ನು ಆಯೋಜಿಸಿ ತಲುಪಿಸುತ್ತಿರುವ ಆರೆಸ್ಸೆಸ್, ವಿಶ್ವಹಿಂದೂ, ಬಿಜೆಪಿ ಎಂಬ ಭಾರತದ ಭೀಕರ ಸಮಸ್ಯೆಗಳು, ತಾವು ಈ ಸಂದರ್ಭದಲ್ಲಿ ಏನೇನು ಹೇಳಬೇಕೆಂದು ಪರಸ್ಪರ ಮಾತನಾಡಿಕೊಂಡೇ ಘೋಷಿಸುತ್ತಿದೆಯಲ್ಲಾ, ಇದೆಲ್ಲದರ ಸೂತ್ರಧಾರ ಗುಜರಾತಿನ ಮಾಜಿ ಮುಖ್ಯಮಂತ್ರಿ ಮೋದಿ ಇನ್ನೂ ಬಾಯಿಬಿಟ್ಟಿಲ್ಲ. ಆದರೆ ಪೊಲೀಸರಿಂದ ತಪ್ಪಿಸಿಕೊಳ್ಳಲು ಹಾರ್ದಿಕ್ ಪಟೇಲ್ ತೊಲಬಂದು ಓದಿದ್ದಾನೆ. ನಿಜಕ್ಕೂ ಮೀಸಲಾತಿ ವಿರೋಧಿ ಚಿಂತನೆ ಆತನ ಮನಸ್ಸಿನಲ್ಲಿ ಮೂಡಿದ್ದರೆ, ಪೊಲೀಸರಿಗ ಎದೆಯೊಡ್ಡುತ್ತಿದ್ದನಂತಲ್ಲಾ, ಥೂತ್ತೇರಿ !!! ■

# ಮೈಷುಗರ್-ಮಹಿಷಾಸುರರ ಮುಷ್ಟಿಯಲ್ಲಿ.



ಮಂಡ್ಯ ಜಿಲ್ಲೆಗೆ ಸಕ್ಕರೆ ನಾಡು ಎಂಬ ಅನ್ವರ್ಥ ನಾಮವೂ ಇದೆ. ಇದಕ್ಕೆ ಸ್ಪಷ್ಟ ಇತಿಹಾಸವೂ ಇದೆ.

ಮೈಷುಗರ್ ಸಕ್ಕರೆ ಕಾರ್ಖಾನೆ ಆರಂಭಗೊಂಡಿದ್ದು ಸ್ವಾತಂತ್ರ ಪೂರ್ವಕಾಲದಲ್ಲಿ, ಆಗಿನ ಮೈಸೂರು ರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1933ರಲ್ಲಿ ಈ ಕಾರ್ಖಾನೆಯನ್ನು ಪ್ರಾರಂಭಿಸಿದರು. ಮೈಸೂರು ಸರ್ಕಾರದಲ್ಲಿ ತೋಟಗಾರಿಕಾ ತಜ್ಞನಾಗಿ ಸೇವೆಯಲ್ಲಿದ್ದ ಕೋಲ್‌ಮನ್ ಎಂಬ ಬ್ರಿಟಿಷ್ ಅಧಿಕಾರಿಯ ಪರಿಶ್ರಮವೂ ಸೇರಿ ಇಡೀ ದಕ್ಷಿಣ ಭಾರತದಲ್ಲೇ ಪ್ರಪ್ರಥಮ ಸಕ್ಕರೆ ಕಾರ್ಖಾನೆ ಮಂಡ್ಯದ ಬಳಿ ತಲೆಎತ್ತಿತ್ತು, ಆ ವೇಳೆಗಾಗಲೇ ಕೆಆರ್‌ಎಸ್ ಅಣೆಕಟ್ಟಿನಿಂದ ನೀರಾವರಿ ಯೋಜನೆಯೂ ಬಂದಿತ್ತು.

ಮೈಷುಗರ್ ಕಾರ್ಖಾನೆ ಕೇವಲ ಕಬ್ಬು ಅರೆದು ಸಕ್ಕರೆ ತಯಾರಿಸುವುದು ಮಾತ್ರವಲ್ಲದೆ, ಕಬ್ಬು ಬಿತ್ತನೆ ಕಬ್ಬು/ತಳಿ ಅಭಿವೃದ್ಧಿ ಮುಂತಾದ ಸಂಶೋಧನಾ ಕಾರ್ಯದಲ್ಲೂ ತೊಡಗಿಸಿಕೊಂಡಿದೆ. ಹೀಗಾಗಿ ಈ ಮೈಷುಗರ್ ಕಂಪನಿಯ ಒಡೆತನದಲ್ಲಿ ನೂರಾರು ಎಕರೆ ಕಬ್ಬಿನ ಗದ್ದೆಗಳೂ ಇವೆ.

ಮೈಷುಗರ್ ಕಂಪನಿ ಆರಂಭಗೊಂಡು ಸುಮಾರು 70 ವರ್ಷಗಳ ಕಾಲ ಸತತ ಲಾಭ ಗಳಿಸುತ್ತಾ ಸಾಗಿತ್ತು, ಈ ಸಾರ್ವಜನಿಕ ಉದ್ದಿಮೆ ಕೇವಲ ಲಾಭ ಮಾಡಿದ್ದು ಮಾತ್ರವಲ್ಲ; ಹಲವಾರು ಕಲ್ಯಾಣ ಕಾರ್ಯಗಳನ್ನೂ ನಡೆಸಿಕೊಂಡು ಬಂದಿದೆ. ಉಚಿತ ಆಸ್ಪತ್ರೆ, ಔಷಧಶಾಲೆ, ಪಿಯು ಕಾಲೇಜು, ಐಟಿಐ ಕಾಲೇಜು ಮುಂತಾದ ವಿದ್ಯಾಸಂಸ್ಥೆಗಳನ್ನು ನಡೆಸಿಕೊಂಡು ಬಂದಿದೆ. ಕಾರ್ಮಿಕರು ಹಾಗೂ ಕಬ್ಬು ಬೆಳೆಯುವ ರೈತರ ಅನುಕೂಲಕ್ಕಾಗಿ ಹಲವು ಕಲ್ಯಾಣಮಂಟಪಗಳನ್ನು ಕಟ್ಟಿಸಿ, ರಿಯಾಯಿತಿ ದರದಲ್ಲಿ ಕಲ್ಯಾಣಮಂಟಪ ಬಳಸಲು ಅನುವು ಮಾಡಿಕೊಟ್ಟಿದೆ. ಮಂಡ್ಯ ನಗರದಲ್ಲಿರುವ ಜಿಲ್ಲಾಸ್ಪತ್ರೆ ಕಟ್ಟಡದ ಒಂದು ಇಡೀ ಬ್ಲಾಕ್ ಅನ್ನು ಮೈಷುಗರ್ ಉಚಿತವಾಗಿ ನಿರ್ಮಿಸಿಕೊಟ್ಟಿದೆ. ಈಜುಕೊಳ, ಆಟದ ಮೈದಾನಗಳನ್ನು ಕಟ್ಟಿಸಿದೆ. ರೈತ ಕಲ್ಯಾಣ ನಿಧಿಯನ್ನು ಸ್ಥಾಪಿಸಿ ನಾನಾ ರೀತಿಯಲ್ಲಿ ರೈತರಿಗೆ ನೆರವಾಗಿದೆ.

ಮಂಡ್ಯ ನಗರದಲ್ಲಿರುವ ಇಡೀ ಸ್ವರ್ಣಸಂದ್ರ ಬಡಾವಣೆಯನ್ನು ಕಂಪನಿಯಲ್ಲಿ ದುಡಿಯುತ್ತಿದ್ದ ಕಾರ್ಮಿಕರಿಗಾಗಿ ಕಟ್ಟಿಸಿದ್ದು, ನಂತರದ ದಿನಗಳಲ್ಲಿ ಆ ಮನೆಗಳನ್ನು ಆಯಾ ಕಾರ್ಮಿಕರಿಗೇ ಬಿಟ್ಟುಕೊಡಲಾಗಿದೆ.

ಇಷ್ಟೆಲ್ಲಾ ಹೇಳುತ್ತಿರುವುದು ಯಾಕೆಂದರೆ ಮೈಷುಗರ್ ಕಂಪನಿ ಆರಂಭದಿಂದ ಇತ್ತೀಚಿನ ವರ್ಷಗಳವರೆಗೂ ಉತ್ತಮ ಲಾಭದಲ್ಲಿತ್ತು, ಅದು ಮಂಡ್ಯ ಜಿಲ್ಲೆಯ ಒಟ್ಟಾರೆ ಆರ್ಥಿಕತೆಯ ಜೀವನಾಡಿಯಾಗಿತ್ತು, ಇಂಥಾ ಘನ ಇತಿಹಾಸವುಳ್ಳ ಕಾರ್ಖಾನೆ ಇಂದು ನಷ್ಟದಲ್ಲಿದೆ. ಹಲವು ವಿವಾದಗಳ ಹಗರಣಗಳ ಕೇಂದ್ರಬಿಂದುವಾಗಿದೆ.

ಇಂಥ ಸನ್ನಿವೇಶ ಇದ್ದಕ್ಕಿದ್ದಂತೆ ಸೃಷ್ಟಿಯಾದುದಲ್ಲ, ಇದರ ಹಿಂದೆ ಭಾರೀ ಷಡ್ಯಂತ್ರವೇ ಇದೆ. ಆದರೆ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿ ಖದೀಮ ಕಂಪನಿಗಳ ಬಾಯಿಗೆ ಹಾಕುವ ಖಾಸಗೀಕರಣ ಪ್ರಕ್ರಿಯೆ ಯಾವಾಗ ಈ ದೇಶದಲ್ಲಿ ಶುರುವಾಯಿತೋ, ಅಂದಿನಿಂದ ಲಾಭದಲ್ಲಿದ್ದ ಅದೆಷ್ಟೋ ಸರ್ಕಾರಿ ಕಂಪನಿಗಳು 'ನಷ್ಟ' ಅನುಭವಿಸಲು ಶುರು ಮಾಡಿದವು. ಮೈಷುಗರ್ ಕಾರ್ಖಾನೆಗೂ ಅದೇ ಗತಿಯಾಯ್ತು,

ಇದೇ ಅವಧಿಯಲ್ಲಿ ಕೆಎಂದೊಡ್ಡಿ ಬಳಿ ಚಾಮುಂಡೇಶ್ವರಿ ಷುಗರ್ಸ್, ನಂಜನಗೂಡು ಬಳಿ ಬನ್ನಾರಿ ಷುಗರ್ಸ್ ಎಂಬ ತಮಿಳುನಾಡು ಮೂಲದ ಮಾಲಿಕರನ್ನು ಹೊಂದಿರುವ ಕಾರ್ಖಾನೆಗಳು ಸ್ಥಾಪನೆಯಾದವು. ಈ ಖಾಸಗಿ ಕಂಪನಿಗಳ ಯಾತ್ರೆ ಹಾಗೇ ಮುಂದುವರೆದು ಮೈಷುಗರ್ ಪಕ್ಕದಲ್ಲೇ ಎಸ್‌ಪಿಎಂ ಷುಗರ್ಸ್ ಎಂಬ ಹೊಸ ಕಾರ್ಖಾನೆಯೊಂದು ಎಸ್‌ಎಂ ಕೃಷ್ಣರ ಕಾಲದಲ್ಲಿ ಶುರುವಾಯ್ತು, ಅಂದಹಾಗೆ ಅದರ ಮಾಲೀಕರು ಯಾರು ಅಂತೀರಿ? ಇದೇ ಎಸ್‌ಎಂ ಕೃಷ್ಣ ಕುಟುಂಬ! ಎಸ್‌ಪಿ ಮಲ್ಲಯ್ಯ ಅವರ ತಂದೆಯ ಹೆಸರು. ಮೈಷುಗರ್ ಕಂಪನಿಯ ವ್ಯಾಪ್ತಿಯಲ್ಲಿದ್ದ ಕಬ್ಬು ಪ್ರದೇಶವನ್ನು ಕಡಿತಗೊಳಿಸಿ ಎಸ್‌ಪಿಎಂ ಷುಗರ್ ಕಂಪನಿಗೆ ಕೊಡಲಾಯಿತು. ಇದು ಎಂಥ ನೀತಿ? ಸರ್ಕಾರಿ ಕಂಪನಿಯ ರೆಕ್ಕೆಗಳನ್ನು ಕತ್ತರಿಸಿ, ಖಾಸಗಿ ಹದ್ದುಗಳನ್ನು ಬೆಳೆಸುವ ನೀತಿಯಲ್ಲದೆ ಮತ್ತೇನು? ನಂತರದ ದಿನಗಳಲ್ಲಿ ಈ ಕಂಪನಿಯನ್ನು ಎಸ್‌ಎಂಕೆ ಕುಟುಂಬ ಮಾರಾಟ ಮಾಡಿದ್ದರ ಪರಿಣಾಮ ಈಗ ಆ ಕಂಪನಿಯ ಹೆಸರು ಎನ್‌ಎಸ್‌ಎಲ್ ಎಂದು ಬದಲಾಗಿದೆಯಷ್ಟೆ.


ಇತ್ತೀಚಿನ ವರ್ಷಗಳಲ್ಲಿ ಕೆಆರ್ ಪೇಟೆ ಬಳಿ ಐಸಿಎಲ್ ಕಾರ್ಖಾನೆ ಪ್ರಾರಂಭವಾಗಿದೆ. ಇದರ ಮಾಲಿಕ ಬಿಸಿಸಿಐನ ಅಧ್ಯಕ್ಷ, ಹಲವು ಹಗರಣಗಳ ಸರದಾರ ಶ್ರೀನಿವಾಸನ್.

ಸುಮಾರು 7 ದಶಕಗಳ ಕಾಲ ಉತ್ತಮ ಲಾಭ ಮಾಡುತ್ತಿದ್ದ ಮೈಷುಗರ್ ಕಂಪನಿ ಇದ್ದಕ್ಕಿದ್ದಂತೆ ನಷ್ಟದ ಕಡೆ ಜಾರತೊಡಗಿತು. ಮೈಷುಗರ್‌ನ 'ನಷ್ಟ ತಪ್ಪಿಸಬೇಕೆಂದರೆ' ಸಕ್ಕರೆ ಜೊತೆಗೇ ಇದೇ ಕಾರ್ಖಾನೆಯಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಕೋ-ಜನರೇಷನ್ ಪ್ಲಾಂಟ್ ಸ್ಥಾಪಿಸಬೇಕೆಂದು ತೀರ್ಮಾನಿಸಲಾಯ್ತು, ಅದರಂತೆ 2003 - 04 ರ ಸುಮಾರಿನಲ್ಲಿ ಸರ್ಕಾರಿ ಸ್ವಾಮ್ಯದ ಹುಡ್ಕೋ ಸಂಸ್ಥೆಯಿಂದ 100 ಕೋಟಿ ಸಾಲ ತಂದರು. ಯಂತ್ರೋಪಕರಣಗಳೂ ಬಂದವು, ಘಟಕ ಕಾರ್ಯಾರಂಭವೂ ಆಯ್ತು. ಆದರೆ ಅದು ಕೆಲಸ ಮಾಡಿದ್ದು ಕೇವಲ 18 ಗಂಟೆಗಳು ಮಾತ್ರ. ಹೀಗೆ 2007ರಲ್ಲಿ ನಿಂತುಹೋದ ವಿದ್ಯುತ್ ತಯಾರಿಕಾ ಘಟಕ ಮತ್ತೆಂದಿಗೂ ಆರಂಭವಾಗಲೇ ಇಲ್ಲ, ಆದರೆ 100 ಕೋಟಿ ಸಾಲ ಹೆಚ್ಚುವರಿಯಾಗಿ ತಲೆಮೇಲೆ ಹೇರಿಕೊಂಡು ಬಡ್ಡಿ, ಚಕ್ರಬಡ್ಡಿಗೆ ಬೆಳೆದು ಮೈಷುಗರ್‌ಗೆ ಹೊರಲಾಗದಷ್ಟು ಹೊರೆಯನ್ನು ಹೊರಿಸಿದೆ.

ಈ ಕೋ-ಜನರೇಷನ್ ಪ್ಲಾಂಟ್ ಕಾರ್ಯ ನಿರ್ವಹಿಸದಿರಲು ಪ್ರಮುಖ ಕಾರಣ ಏನಂತೆ ಗೊತ್ತೆ? ಇಲ್ಲಿ 30 ಮೆಗಾವಾಟ್ ಸಾಮರ್ಥ್ಯದ ಒಂದೇ ಬಾಯ್ಲರ್ ಸ್ಥಾಪಿಸಲಾಗಿದ್ದು, ಇಷ್ಟು ಬೃಹತ್ ಬಾಯ್ಲರ್ ಕಾರ್ಯನಿರ್ವಹಿಸಲು ಬೇಕಿರುವಷ್ಟು ಉರುವಲು ಇಂಧನವನ್ನು ಸರಬರಾಜು ಮಾಡುವ ಸಾಮರ್ಥ್ಯ ಮೈಷುಗರ್‌ಗೆ ಇಲ್ಲವಂತೆ. 30 ಮೆಗಾವಾಟ್‌ನ ಒಂದೇ ಬಾಯ್ಲರ್ ಬದಲಿಗೆ 5 ಅಥವ 10 ಮೆಗಾ ವಾಟ್ ಸಾಮರ್ಥ್ಯದ ಸಣ್ಣ ಸಣ್ಣ ಘಟಕಗಳನ್ನು ಸ್ಥಾಪಿಸಿದ್ದರೆ ಇಲ್ಲಿ ವಿದ್ಯುತ್ ತಯಾರಿಕೆ ಕಾರ್ಯ ಸುಗಮವಾಗುತ್ತಿತ್ತು ಎಂಬುದು ಹಲವು ತಜ್ಞರ ಅಭಿಪ್ರಾಯ. ಸರ್ಕಾರಗಳು ಕೈಗೊಳ್ಳುತ್ತಿರುವ ಕ್ರಮಗಳು 'ಹುಚ್ಚ ಮದ್ವೇಲಿ ಉಂಡೋನೇ ಜಾಣ' ಎಂಬಂತಿವೆ.

ಮೈಷುಗರ್‌ಗೆ ಪುನಶ್ಚೇತನ ನೀಡಬೇಕು ಎಂಬ ಮಾತನ್ನು ಸಂಘಸಂಸ್ಥೆಗಳು ಮಾತ್ರವಲ್ಲದೆ, ಜನಪ್ರತಿನಿಧಿಗಳೂ, ಇದುವರೆಗೆ ಆಡಳಿತ ನಡೆಸಿದ ಎಲ್ಲ ಪಕ್ಷಗಳೂ ಹೇಳುತ್ತಾ ಬಂದಿವೆ. ಆದರೆ ಆಗಿರುವುದೇನು? ವಿಧಾನಸೌಧದಲ್ಲಿ ಪಕ್ಷಗಳು ಬದಲಾದಂತೆಲ್ಲಾ ಮ್ಯಾನೇಜಿಂಗ್ ಡೈರೆಕ್ಟರ್‌ಗಳೂ, ಆಯಕಟ್ಟಿನ ಸಿಬ್ಬಂದಿಯೂ ಬದಲಾಗುತ್ತಾರೆ. ಹೊಸ ಚೇರ್ಮನ್ನುಗಳು ಸೀಟಿಗೆ ಬರುತ್ತಾರೆ. ಪುನಶ್ಚೇತನದ ಪ್ರಹಸನ ಶುರುವಾಗುತ್ತದೆ. ಹತ್ತೋ ಇಪ್ಪತ್ತೋ ಕೋಟಿಗಳನ್ನು ಬಿಡುಗಡೆ ಮಾಡಲಾಗುತ್ತದೆ. ಆದರೆ ಬಿಕ್ಕಟ್ಟು ಯಾವ ಸ್ವರೂಪದಲ್ಲಿದೆ ಎಂದರೆ ಹೀಗೆ ಬರುವ ಹಣ ಆ ತಕ್ಷಣದ ಹಣಕಾಸು ಒತ್ತಡಗಳಿಗೆ ಅಂದರೆ, ರೈತರಿಗೆ ಬಾಕಿಯಿದ್ದ ಬಿಲ್ಲುಗಳನ್ನು ಪಾವತಿಸಲಿಕ್ಕಾಗಿಯೋ ಅಥವ ಸಿಬ್ಬಂದಿಯ ವೇತನಕ್ಕಾಗಿಯೋ ಖರ್ಚಾಗಿ ಮತ್ತೆ ಯಥಾಸ್ಥಿತಿ ಮರುಕಳಿಸುತ್ತದೆ.


ಈಗಿನ ಸಿದ್ದರಾಮಯ್ಯ ಸರ್ಕಾರ ಕಳೆದ ಬಜೆಟ್ಟಿನಲ್ಲಿ 125 ಕೋಟಿಗಳ ಪ್ಯಾಕೇಜ್ ಘೋಷಿಸಿದೆ. ಆದರೆ ಸ್ವಲ್ಪ ಆಳಕ್ಕಿಳಿದು ನೋಡಿದರೆ ಈಗಿನ ಸರ್ಕಾರಕ್ಕೂ ಯಾವುದೇ




ಸಮಗ್ರ ಯೋಜನೆ ಇದ್ದಂತಿಲ್ಲ, ಘೋಷಿಸಿರುವ ಈ ಮೊತ್ತ ಕೂಡ ಒಮ್ಮೆಲೇ ಬರುವುದಿಲ್ಲ; ಮಾಮೂಲಿಯಂತೆ ಕಂತುಗಳಲ್ಲಿ ಬಿಡುಗಡೆಯಾಗುವ ಹಣ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯೇ ಸರಿ.

ಇಷ್ಟು ಮಾತ್ರವಲ್ಲ, ಇದುವರೆಗೆ ಬಂದ ಜನಪ್ರತಿನಿಧಿಗಳಿಗಾಗಲಿ ಅಥವ ಸರ್ಕಾರಗಳಿಗಾಗಲಿ ಜಿಲ್ಲೆಯ ಆರ್ಥಿಕ ಜೀವನಾಡಿಯಾಗಿರುವ ಮೈಷುಗರ್‌ನಲ್ಲಿ ನಡೆಯುತ್ತಿರುವ ಅಂಧಾದುಂಧಿಗಳನ್ನು ತಡೆಗಟ್ಟಿ, ಅದಕ್ಕೆ ಪುನಶ್ಚೇತನ ಕೊಡುವ ಇಚ್ಛಾಶಕ್ತಿಯೇ ಇಲ್ಲವಾಗಿರುವುದು ದುರಂತ. ಈ ಬಗ್ಗೆ ಕನಿಷ್ಟ ಮಟ್ಟದ ಕಾಳಜಿಯಾದರೂ ಇದೆಯೇ ಎಂಬುದು ಕೂಡ ಪ್ರಶ್ನಾರ್ಹ.

ಇಂಥಾ ಅಧ್ವಾನದ ಪರಿಸ್ಥಿತಿಯಲ್ಲಿ ಮಂಡ್ಯ ಕ್ಷೇತ್ರಕ್ಕೆ ಅಂಬರೀಶ್ ಶಾಸಕರಾಗಿ, ನಂತರ ಸಚಿವರೂ ಆಗಿದ್ದು



ಮಂಡ್ಯದ ರೈತ - ಕಾರ್ಮಿಕರ ಗ್ರಹಗತಿಗಳು ವ... ಕೆಟ್ಟುಹೋಗಿವೆ. ಈ ಮಹಾನುಭಾವನ ಮಂಪ... ಎಚ್ಚರಗೊಳ್ಳಬೇಕೆಂದರೆ ಈತನ ಚೇಲಾಗಳು ... ಬೊಂಬಡಾ ಬಜಾಯಿಸಬೇಕು. ಅವರು ಹೀಗೆ ಬೊ... ಬಾರಿಸೋದು ತಮಗೆ ನಗರಸಭೆ ಅಧ್ಯ... ಕೈತಪ್ಪಿದಾಗಲೋ ಅಥವ ಮೈಷುಗರ್ ಅಧ... ಬೇಕೆನಿಸಿದಾಗಲೋ ಮಾತ್ರ. ಇದನ್ನು ಹೊರತು... ಜನತೆಗೆ ಕಷ್ಟ ಬಂದಾಗ ಈ ಮಂದಿ ಸ್ಪ... ಉದಾಹರಣೆಗಳು ಇಲ್ಲವೆಂದೇ ಹೇಳಬೇಕು.

ಹೀಗಿದ್ದಾಗ ಕಳೆದ ವರ್ಷ ಮೈಷುಗರ್ ಅಧ್ಯಕ್ಷ... ಸಚಿವ ಮಹದೇವಪ್ರಸಾದ್ ಬಂದಿದ್ದಾರೆ. 2... ಆಗಸ್ಟ್‌ನಲ್ಲಿ ಎಚ್.ಆರ್. ಮಹಾದೇವ್ ... ಅಧಿಕಾರಿಯನ್ನು ಎಂಡಿಯಾಗಿ ನೇಮಿಸಿದ್ದಾರೆ. ಈ ... ಮಹಾದೇವರು ಆರಂಭದಲ್ಲಿ ಮಂಡ್ಯದ ಜನರಲ್ಲಿ ಒ... ಭರವಸೆ ಮೂಡಿಸಿದ್ದರು. ಯಾಕೆಂದರೆ ಬರಬರ... ರೈತ ಕಾರ್ಮಿಕರೊಂದಿಗೆ 'ಮುಕ್ತ ಸಂವಾದ' ನಡೆ... ಒಂದಷ್ಟು ಜನ ಭ್ರಷ್ಟ ಸಿಬ್ಬಂದಿಯನ್ನೂ ಒಂ... ಅಧಿಕಾರಿಗಳನ್ನೂ ಹಿಡಿಯುವ ನಾಟಕ ಆಡಿದರು. ... ಒಂದೆರಡು ತಿಂಗಳು ಕಳೆದ ಮೇಲೆ ಅಧಿಕಾರಿ ಮಹ... ತಮ್ಮ ಮಾಮೂಲಿ ವರಸೆ ಶುರುವಿಟ್ಟುಕೊಂಡು ತ... ಒಂದು ದುಷ್ಟ ಕೂಟ ರಚಿಸಿಕೊಂಡು ಮೈಷುಗರ... ಮುಕ್ಕಿಬಿಡಲು ತೀರ್ಮಾನಿಸಿದ್ದಾನೆ.

ಎಚ್.ಆರ್.ಮಹಾದೇವ ಮುಕ್ಕಲು ಶುರು ... ನಂತರ ಮೈಷುಗರ್‌ನ ಅಧೋಗತಿ ವೇಗ ಪಡೆದುಕೊ... ಇದರ ಪರಿಣಾಮ ಕಂಪನಿಯ ಒಂದು ವರ್ಷದ... ಸುಮಾರು 45 ಕೋಟಿ ರೂಪಾಯಿಗಳು!

ಸಿಎಂ ಸಿದ್ದರಾಮಯ್ಯನವರ ಆಪ್ತರು ಎನ್ನಲಾದ ... ಮಹದೇವ ಪ್ರಸಾದ್‌ರ ಕೃಪಾಶೀರ್ವಾದ ... ಮೇಲಿರುವುದರಿಂದ ತನ್ನನ್ನು ಯಾರೂ ... ಮಾಡಲಾಗದು ಎಂಬುದು ಸದ್ಯದ ಎಂಡಿಯ ... ಧೋರಣೆ. ಮೇಲಾಗಿ ಈತ ಸಚಿವರಿಗೆ ಜಾತಿ... ಬೇರೆ. ಹೀಗಾಗಿ ಆತ ತಾನು ಮಾಡಿದ್ದೇ ಕಾ... ಎಂಬಂತೆ ಮೈಷುಗರ್‌ಗೆ ಕೊನೆಯ ಮೊಳೆ... ಹೊಡೆಯಲು ಆರಂಭಿಸಿದ್ದಾನೆ. 'ಲಂಕೇಶ್'ಗೆ ... ಹಗರಣಗಳ ಹಲವಾರು ದಾಖಲೆಗಳು ಲಭ್ಯವಾಗಿವೆ. ... ಸ್ಯಾಂಪಲ್‌ಗಳನ್ನು ನೋಡೋಣ.

1. ಇತ್ತೀಚೆಗೆ 80 ಟಿಪಿಎಚ್ ಸಾಮ... ಬಾಯ್ಲರೊಂದನ್ನು 4.5 ಕೋಟಿ ರೂಪಾಯಿ ... ಖರೀದಿಸಲಾಗಿದೆ. ಆದರೆ ತಜ್ಞರ ವರದಿ ಪ್ರಕಾರ ಬೆಲೆ 1.5 ಕೋಟಿ, ಎಷ್ಟೇ ಹೆಚ್ಚೆಂದರೂ 2 ... ದಾಟುವುದಿಲ್ಲ. ಈ ಒಂದೇ ಡೀಲ್‌ನಲ್ಲಿ ಮೂರು ... ಮಂಗಮಾಯ. ಇದೂ ಸಾಲದೆಂಬಂತೆ ಮತ್ತೆ... ಬಾಯ್ಲರ್ ತರಿಸಿಕೊಳ್ಳಲು ಈ ಮಹಾಶಯ ಈಗ ... ಆರ್ಡರ್ ಕೊಟ್ಟಿದ್ದಾನೆ. ಅದರ ಬೆಲೆ ಬರೋಬ... ಕೋಟಿ 23 ಲಕ್ಷಗಳು!

2. ಮತ್ತೊಂದು ಹಗರಣ ಎಷ್ಟು ಹಸಿಹಸಿಯ... ನೋಡಿ. ಬೆಂಗಳೂರಿನ ಮಾನಸ ಎಲೆಕ್ಟ್ರಿ... ಎಂಬುವವರಿಂದ ನಾನಾ ಎಲೆಕ್ಟ್ರಿಕಲ್ ಸಾಮಗ್ರಿ... ಖರೀದಿಸಲಾಗಿತ್ತು, ಅದರಲ್ಲಿ ನಡೆದ ಗೋಲ್‌ಮಾ... ಲೆಕ್ಕವೇ ಇಲ್ಲ, 300 ಅಲ್ಯುಮಿನಿಯಂ ಕೇಬಲ್ ಲೆಗ್... ತಲಾ ಒಂದಕ್ಕೆ 500 ರೂಪಾಯಿ ಬೆಲೆ ತೆರಲ... ಸರಬರಾಜಾದ ಉಪಕರಣ ತೀರಾ ಕಳಪೆಯದಾಗಿತ್ತು... ಕಳಪೆ ಸಾಮಗ್ರಿಗೆ ದುಬಾರಿ ಬೆಲೆ ತೆತ್ತಿರುವುದನ್ನು ಕಾ... ಪ್ರತಿಭಟಿಸಿದರು. ಪ್ರತಿಭಟನೆ ವಿಕೋಪಕ್ಕೆ ತಿರು... ಅವುಗಳನ್ನು ವಾಪಸ್ ಕಳಿಸಿ, ಸಂಬಂಧಿಸಿದ ಇಂಜಿನ... ಒಬ್ಬರು ಇದೇ ಸಾಮಗ್ರಿಯನ್ನು ಮಾರುಕಟ್ಟೆಯಲ್ಲಿ ... ಪೀಸ್‌ಗೆ 48/-ರಂತೆ ಖರೀದಿಸಿದರು.



## ನಷ್ಟಕ್ಕಾಗಿ ಹೊಸ ಕಂಪನಿಗಳು!

ರೈತರಿಂದ ಕಬ್ಬು ಖರೀದಿಸಿ ಎರಡು ವರ್ಷವಾದರೂ ರೈತರಿಗೆ ನಿಗದಿತ ಹಣ ಪಾವತಿ ಮಾಡಲು ಸಕ್ಕರೆ ಕಾರ್ಖಾನೆಗಳು ಮೀನಮೇಷ ಎಣಿಸುತ್ತಾ ಬಂದಿವೆ. ಪರಿಣಾಮವಾಗಿ ದಿಕ್ಕು ಕಾಣದ ರೈತರು ಆತ್ಮಹತ್ಯೆ ಮಾಡಿಕೊಂಡ ಎಷ್ಟೋ ಉದಾಹರಣೆಗಳು ನಮ್ಮ ಮುಂದಿವೆ. ಈ ಪರಿಸ್ಥಿತಿಗೆ ಕಾರಣ ಏನು ಎಂದು ಕೇಳಿದರೆ ಅನಾದಿಯಿಂದಲೂ ಕಂಪನಿ ಮಾಲಿಕರ ವಾದ ಸಕ್ಕರೆ ಕಾರ್ಖಾನೆಗಳು ಭಾರೀ ನಷ್ಟದಲ್ಲಿವೆ ಎಂಬುದು. ಇದು ಹೌದೋ ಅಲ್ಲವೋ ಎಂದು ತಿಳಿದುಕೊಳ್ಳುವ ಕುತೂಹಲ ಎಲ್ಲರಿಗೂ ಸಹಜ. ಸತ್ಯವನ್ನು ಅರ್ಥ ಮಾಡಿಕೊಳ್ಳಲು ಪೂರಕವಾದ ಒಂದು ವಾಸ್ತವಾಂಶ ಇಲ್ಲಿದೆ ನೋಡಿ.

ಈಗ ಹಾಲಿ ಕರ್ನಾಟಕದಲ್ಲಿ "ನಷ್ಟದಲ್ಲಿರುವ" ಸಕ್ಕರೆ ಕಾರ್ಖಾನೆಗಳ ಜೊತೆಗೆ ಹೊಸದಾಗಿ 45 ಸಕ್ಕರೆ ಕಾರ್ಖಾನೆಗಳು ಈಗಾಗಲೇ ಅನುಮತಿ ಪಡೆದುಕೊಂಡಿವೆ. ಹೊಸ ಕಾರ್ಖಾನೆಗಳನ್ನು ಸ್ಥಾಪಿಸುವ ಪ್ರಕ್ರಿಯೆ ವಿವಿಧ ಹಂತಗಳಲ್ಲಿವೆ. ಮತ್ತೊಂದು ಕುತೂಹಲಕಾರಿ ಸಂಗತಿಯೆಂದರೆ ಈ 45ರಲ್ಲಿ 20 ಹೊಸ ಕಾರ್ಖಾನೆಗಳನ್ನು ಸ್ಥಾಪಿಸುತ್ತಿರುವುದು ಈಗಾಗಲೇ "ನಷ್ಟ" ಅನುಭವಿಸುತ್ತಿರುವ ಹಳೆಯ ಮಾಲಿಕರೇ! ಯಾಕೆಂದರೆ ಈಗ ಆಗಿರುವ "ನಷ್ಟ"ದಿಂದ ಅವರು ತೃಪ್ತರಾದಂತೆ ಕಾಣುತ್ತಿಲ್ಲ, ಮತ್ತಷ್ಟು "ನಷ್ಟ" ಅನುಭವಿಸಲೇಬೇಕೆಂದು ಹಠ ತೊಟ್ಟು ಅವರು ಹೊಸ ಕಾರ್ಖಾನೆಗಳನ್ನು ಸ್ಥಾಪಿಸುತ್ತಿದ್ದಾರೆ! ಇಷ್ಟಾದರೂ ಅರ್ಥ ಮಾಡಿಕೊಳ್ಳದೇ ಹೋದರೆ ನಮಗಿಂತ ಮೂರ್ಖರು ಬೇರೆ ಯಾರಿದ್ದಾರೆ ಹೇಳಿ?

▶▶ 1...

# ಹುಬ್ಬಳ್ಳಿ ಅಂಜುಮಾನ್ ಚುನಾವಣೆಯಲ್ಲಿ ರಾಜಕೀಯ ಕಾದಾಟ

ಹುಬ್ಬಳ್ಳಿ ಅಂಜುಮಾನ್ ಸಂಸ್ಥೆಯು
...ಾತದ ಅಂಜುಮಾನ್ ಸಂಸ್ಥೆಯ ನಂತರ ಜನ್ಮ
...ರೂ ಧಾರವಾಡ ಅಂಜುಮಾನ್ ಚುನಾವಣೆಗಿಂತ
...ಳ್ಳಿ ಅಂಜುಮಾನ್ ಚುನಾವಣೆ ಬಿರುಸಿನಿಂದ
...ಯುತ್ತದೆ. ಇದಕ್ಕೆ ಕಾರಣಗಳು ಇಲ್ಲದೇ ಇಲ್ಲ;
... ಹುಬ್ಬಳ್ಳಿ ಅಂಜುಮಾನ್ ಸಂಸ್ಥೆಯ ಅಧ್ಯಕ್ಷ ಗಾದಿ
...ಗೆ ದಕ್ಕುತ್ತದೆಯೋ ಅವರು ಹುಬ್ಬಳ್ಳಿ ಶಹರಕ್ಕೆ
...ಎ ಆಗುವುದು ಗ್ಯಾರಂಟಿ ಎನ್ನುವ
...ಸ್ಥಿಂದಿತ್ತು. ಆದರೆ ಕಳೆದ ವಿಧಾನಸಭೆ
...ವಣೆಯಲ್ಲಿ ಈ ಕ್ಷೇತ್ರವನ್ನು ಸಾಮಾನ್ಯ
...ಿಂದ ತೆಗೆದು ಪರಿಶಿಷ್ಟ ಜಾತಿಗೆ
...ಾಗಿರಿಸಿದೆ. ಇದರ ಹಿಂದೆ ಮಾಜಿ ಸಚಿವ
... ಹಿಂಡಸಗೇರಿ ಕೈವಾಡವಿದೆ. ಯಾವಾಗ
...ಮಾನ್ ಸಂಸ್ಥೆಯ ಮೇಲೆ ತನ್ನ ಹಿಡಿತ
...ಯಿತೋ ಆಗ ಎಚ್ಕೆ ಪಾಟೀಲರ ಬಲದಿಂದ ಈ
...ನ್ನು ಮೀಸಲು ಕ್ಷೇತ್ರ ಮಾಡಿಸಿ ಸಂತೋಷ
...ರು ಹಿಂಡಸಗೇರಿ. ತನಗೆ ದಕ್ಕದ್ದು
...ಮವರಿಗೂ ದಕ್ಕಬಾರದೆಂಬುದು ಹಿಂಡಸಗೇರಿಯ
...




...ಯಾವಾಗ ಹಿಂಡಸಗೇರಿ ಅಂಜುಮಾನ್ ಸಂಸ್ಥೆಗೆ
... ಕೊಟ್ಟನೋ ಅವತ್ತಿನಿಂದ ಆ ಸಂಸ್ಥೆ ಕಾಂಗ್ರೆಸ್
...ವಾಗಿ ಹೋಯಿತು. ಅಲ್ಲಿಯವರೆಗೆ
...ಮಾನ್ ಸಂಸ್ಥೆ ಸಾಮಾಜಿಕ ಮತ್ತು ಶೈಕ್ಷಣಿಕ
...ಗಳಲ್ಲಿ ಗುರುತಿಸಿಕೊಂಡಿತ್ತು. ಆದರೆ ನಿಧಾನವಾಗಿ
...ರಾಜಕೀಯ ಕೃಷಿ ಮಾಡಿದರೆ ಹುಲುಸಾದ
...ೆದು ಅದರ ಲಾಭ ಪಡೆಯುವ ಲೆಕ್ಕಾಚಾರ
...ಭವಾಯಿತು. ಮೊದಮೊದಲು ಹುಬ್ಬಳ್ಳಿಯ
... ಸಮುದಾಯಕ್ಕೆ ಅಂಜುಮಾನ್ ಸಂಸ್ಥೆಯನ್ನು
...ಯಿಸಿದ್ದೇ ಹಿಂಡಸಗೇರಿ ಎಂಬ ಖತರ್‌ನಾಕ್
...ರಣಿ. ಮೊಹಲ್ಲಾದ ಹಿರಿ ತಲೆಗಳನ್ನು
...ಟ್ಟುಕೊಂಡು ಅಂಜುಮಾನ್ ಸಂಸ್ಥೆಯನ್ನು ಈತ
... ಈ ಗರಡಿ ಮನೆಯಲ್ಲಿ ಬೆಳೆದವರೆ
...ಮಿಲ್ ಕಾಲೆಬುಡ್ಡೆ, ಇಸೂಫ್, ಸರ್ವದಾರ್,
...ಖಾನ್ ಹೊನ್ನಳ್ಳಿ ತರಹದವರು. ಯಾವಾಗ
...ಗೇರಿ ಸರ್ವಾಧಿಕಾರಿ ಧೋರಣೆ ಹೆಚ್ಚಾಯಿತೋ,
...ಾಗ ತನ್ನ ಮಾತು ನಡೆಯಬೇಕು
...ಾಡಗಿದನೋ ಆಗ ಅವನ ವಿರುದ್ಧವೇ ಅವನ
...ಲ್ಲರೂ ಸಿಡಿದೆದ್ದರು.

...ಸ್ಮಾಯಿಲ್ ಕಾಲೆಬುಡ್ಡೆ ಮತ್ತು ಜಬ್ಬಾರ್‌ಖಾನ್
...ಳ್ಳಿ ಜನತಾ ಪರಿವಾರದವರೊಂದಿಗೆ
...ಸಿಕೊಂಡು ರಾಜಕೀಯಕ್ಕೆ ಬಂದವರು. ಆಗ
... ಹಿಂಡಸಗೇರಿ ಅವರನ್ನು ಕಾಂಗ್ರೆಸ್‌ನತ್ತ ಮುಖ
...ಸಿದ್ದು ಸುಳ್ಳೇನಲ್ಲ. ಆದರೆ ಆತ
...ಧಿಕಾರಿಯಾಗಲು ಹೊರಟಿದ್ದು ಅವನಿಗೇ
...ವಾಯಿತು. ಇವನನ್ನು ಕಾಂಗ್ರೆಸ್‌ನಲ್ಲಿ 'ನಾಗಪ್ಪಾ'
... ಗುರುತಿಸುತ್ತಾರೆ. ತನ್ನನ್ನು ವಿರೋಧಿಸಿದವರನ್ನು
...ಸರ ಸಹಾಯದಿಂದ ಹಿಂದೂ-ಮುಸ್ಲಿಂ
...ಯಲ್ಲಿ ಜೈಲಿಗೆ ಅಟ್ಟಿದ್ದೂ ಸುಳ್ಳೇನಲ್ಲ.
...ಲೇ ಈ ಎಲ್ಲವೂ ಇತಿಹಾಸದ ಘಟ
...ಾಗಿದೆ. ಈಗ ಇವನನ್ನು ನಂಬುವ
...ಯಲ್ಲಿ ಯಾರೂ ಇಲ್ಲ. ಏಕಾಂಗಿಯಾದರೂ
...ಬುದ್ಧಿ ತೋರುವ ಹಿಂಡಸಗೇರಿ ಪ್ರತಿ
...ಮಾನ್ ಚುನಾವಣೆಯಲ್ಲಿ ಏನಾದರೂ ಒಂದು
...ಗ ಮಾಡುತ್ತಲೇ ಇರುತ್ತಾನೆ.

... ಹಿಂದೆ ಹಿಂಡಸಗೇರಿಗೆ ತಾನು ಚುನಾವಣೆಗೆ
... ಸೋಲು ಗ್ಯಾರಂಟಿ ಎಂದು ಗೊತ್ತಾದಾಗ ತನ್ನ
...ದರ ನಾಜೀಮನನ್ನು ಚುನಾವಣಾ ಕಣಕ್ಕೆ
... ಆದರೆ ಆ ಪ್ರಯತ್ನ ವಿಫಲವಾಯಿತು. ಈ
... ಚುನಾವಣೆಯಲ್ಲಿ ಹಿಂಡಸಗೇರಿ ಮತ್ತೆ ತನ್ನ
...ರುವಿಟ್ಟುಕೊಂಡಿದ್ದಾನೆ. ಮಜರ್‌ಖಾನ್ ಎಂಬ
...ನು ಗುಂಪಿನಲ್ಲಿದ್ದವನನ್ನೇ ತನ್ನೆಡೆಗೆ
...ಕೊಂಡು ಅವನ ಮುಖಾಂತರ ಒಂದು
... ಹುಟ್ಟು ಹಾಕಿದ್ದಾನೆ.


### ಮಜರ್‌ಖಾನ್ ಯಾರು?

... ಮಜರ್‌ಖಾನ್ ಮಿಲತ್ ಅಸೋಸಿಯೇಶನ್
... ಸಾಮಾಜಿಕ ಕೆಲಸಗಳಲ್ಲಿ ತೊಡಗಿಕೊಂಡಿದ್ದಾನೆ.
...ದೆ ಅಂಜುಮಾನ್ ಸಂಸ್ಥೆಯಲ್ಲಿದ್ದಾಗ ಮುಸ್ಲಿಂ
...ಗಳಿಗೆ ಸರ್ಕಾರದ ಸ್ಕಾಲರ್‌ಶಿಪ್
...ಸುವುದು, ಬಡ ಮಕ್ಕಳ ಫೀ ಹಣ ಕಟ್ಟುವುದು
...ಗಳಲ್ಲಿ ತೊಡಗಿಸಿಕೊಂಡಿದ್ದ. ರಿಯಲ್ ಎಸ್ಟೇಟ್
...ಈತನ ಉದ್ಯೋಗ. ಯಾವಾಗ ಈಗ

ಅಂಜುಮಾನ್ ಸಂಸ್ಥೆಗೆ ಎಂಟ್ರಿ ಕೊಟ್ಟನೋ ಆಗ ತಾನು ಸಿ.ಎಂ.ಇಬ್ರಾಹಿಂ ಶಿಷ್ಯ, ತನಗೆ ರಾಜಕೀಯ ಹೊಸದಲ್ಲ ಎನ್ನುವುದಕ್ಕೆ ಶುರುವಿಟ್ಟುಕೊಂಡ.

ಈಗಾಗಲೇ ಹುಬ್ಬಳ್ಳಿಯಲ್ಲಿ ಹೈದರಾಬಾದ್ ಸಂಸದ ಅಸಾವುದ್ದೀನ್ ಓವೈಸಿ ಜೊತೆಗೆ ಕೆಲವು ಮುಸ್ಲಿಂ ಯುವಕರು ಗುರುತಿಸಿಕೊಂಡು ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಹುಬ್ಬಳ್ಳಿಯ ಮುಸ್ಲಿಂ ಸಮಾಜ


ಆರೀಫ್

ಯಾವಾಗಲೂ ಜಾತ್ಯತೀತವಾಗಿಯೇ ಬೆಳೆದಿದೆ. ಅಡ್ಡದಾರಿ ಹಿಡಿದ ಯುವಕರನ್ನೂ ಸರಿದಾರಿಗೆ ತಂದಿದೆ. ಹಿಂದೂಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದೆ. ಪ್ರತಿ ವರ್ಷ ರಂಜಾನ್, ಬಕ್ರೀದ್ ಹಬ್ಬದ ಸಂದರ್ಭಗಳಲ್ಲಿ ಈದ್ಗಾ ಮೈದಾನದ ಸಾಮೂಹಿಕ ಪ್ರಾರ್ಥನೆ ನಂತರ ಮೂರು ಸಾವಿರ ಮಠಕ್ಕೆ ಭೇಟಿ ಕೊಟ್ಟು ಚಾಯಿಚಾರಾ ಮೆರೆದಿದೆ. ಆದರೆ ಈಗ ಇದು ಕೆಲವು ಯುವಕರಿಗೆ ಹಿಡಿಸದಾಗಿದೆ. ಅದಕ್ಕೆ ಅವರು ಓವೈಸಿಯಂತಹವರು ತಮ್ಮ ನಾಯಕ, ಅವನೇ ತಮಗೆ ಸರಿ ಎನ್ನುತ್ತಿದ್ದಾರೆ.

ಆ ಯುವಕರು ಹುಬ್ಬಳ್ಳಿಯ ಸಿಬಿಟಿ, ಮಂಚೂರರೋಡ್, ತಬೀಬಲ್ಯಾಡ್, ಗಣೇಶ್ ಪೇಟೆ, ಹಳೇ ಹುಬ್ಬಳ್ಳಿಯ ಕೆಲವು ಭಾಗಗಳಲ್ಲಿ ಸಕ್ರಿಯರಾಗಿದ್ದಾರೆ. ಅಂತಹ ಒಂದು ಯುವಕರ ಗುಂಪು ಅಂಜುಮಾನ್ ಸಂಸ್ಥೆಯನ್ನು ತನ್ನ ವಶಕ್ಕೆ ಪಡೆಯಲು ಯತ್ನಿಸುತ್ತಿದೆ. ಅವರೆಲ್ಲರೂ ಮಜರ್‌ಖಾನ್ ನೇತೃತ್ವದಲ್ಲಿ ಅಂಜುಮಾನ್ ಚುನಾವಣೆ ಎದುರಿಸುತ್ತಿದ್ದಾರೆ.


ಇದೇ ಮಜರ್‌ಖಾನ್ ಇತ್ತೀಚೆಗೆ ಹೊನ್ನಳ್ಳಿ ಹತ್ತಿರ ಹೋಗಿ "ನನಗೆ ಉಪಾಧ್ಯಕ್ಷ ಸ್ಥಾನ ನೀಡಿದರೆ ನಾನು ಬೇರೆ ಗುಂಪು ಮಾಡಿ ಸ್ಪರ್ಧಿಸುವುದಿಲ್ಲ" ಎಂದು ಬೇಡಿಕೆ ಇಟ್ಟಿದ್ದ. ಆದರೆ ಹೊನ್ನಳ್ಳಿ ನೋ ಎಂದದನ್ನೇ ಬಳಸಿಕೊಂಡು ಚುನಾವಣೆ ಕಣಕ್ಕೆ ಧುಮುಕಿದ್ದಾನೆ. ಆದರೆ ಜಾತ್ಯತೀತ ಮುಸ್ಲಿಂರ ಗುಂಪು ಮಜರ್‌ಖಾನ್ ಗುಂಪನ್ನು ಒಪ್ಪುವ ಸಾಧ್ಯತೆಗಳಿಲ್ಲ.

ಹೊನ್ನಳ್ಳಿ ಗುಂಪಿನಲ್ಲಿ ಗುರುತಿಸಿಕೊಂಡು ಬೆಳೆದ ಕಾರ್ಪೊರೇಟರ್ ಅಲ್ತಾಫ್ ಕಿತ್ತೂರ್, ಪಠಾಣನಂತಹವರೂ ತಮಗೆ ದೊಡ್ಡ ಹುದ್ದೆಗಳನ್ನು ಕೊಡಬೇಕು ಎಂಬ ಬೇಡಿಕೆ ಇಟ್ಟಿದ್ದರು. ಅದನ್ನು ಹೊನ್ನಳ್ಳಿ ಸ್ಪಷ್ಟವಾಗಿ ನಿರಾಕರಿಸಿದಾಗ ಅವರೆಲ್ಲ ಹೊರಬಿದ್ದರು. ಪಠಾಣನಂತವನು ಹೊನ್ನಳ್ಳಿಯ ವಿರೋಧಿ ಬಣ ಸವಣೂರ ಗುಂಪಿಗೆ ಸೇರಿಕೊಂಡರೆ, ಯಾವುದೇ ಗುಂಪಿನಲ್ಲಿ ಸ್ಥಾನ ಸಿಗದ ಅಲ್ತಾಫ್ ಕಿತ್ತೂರ್ ಈಗ ಈ ಚುನಾವಣೆಯಿಂದ ಹೊರಬಂದಿದ್ದಾರೆ. ಈ ಮಧ್ಯೆ ಹಿಂಡಸಗೇರಿಯವರನ್ನು ಸಂಪರ್ಕಿಸಿರುವ ಅಲ್ತಾಫ್ ಕಿತ್ತೂರ್‌ಗೇ ಅಲ್ಲಾ...

ನಿರಾಶೆಯಾಗಿದೆ. ಆದ್ದರಿಂದ "ಈ ವಿಧಾನಸಭಾ ಕ್ಷೇತ್ರವೇ ಬದಲಾಗಿದೆ. ನಾನು ಅಂಜುಮಾನ್ ಚುನಾವಣೆಯಲ್ಲಿ ತಟಸ್ಥ" ಎಂದು ಹೇಳುತ್ತಿದ್ದಾನೆ.

### ಯಾರೀ ಸವಣೂರ

ಮೊಹಮ್ಮದ್ ಯೂಸೂಫ್ ಸವಣೂರರ ಉದ್ಯೋಗವೇ ಸ್ಕ್ರ್ಯಾಪ್ ಎತ್ತುವದು. ಮೊದಲು


ಮಜರ್‌ಖಾನ್

ಹಿಂಡಸಗೇರಿ ಶಿಷ್ಯನಾಗಿದ್ದು ತನ್ನ ದಂಧೆ ವಿಸ್ತರಿಸಿದ. ನಂತರ ಚುನಾವಣೆಯತ್ತ ಒಲವು ತೋರಿದ. ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಪಡೆಯಲು ಪ್ರಯತ್ನಿಸಿದ. ಆದರೆ ಅದು ಕೈಗೂಡಲಿಲ್ಲ. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದನಂತರ ನಿಗಮ, ಮಂಡಳಿ ಅಂತ ಓಡಾಡಿದ. ಅದೂ ಕೈಗೆಟುಕಲಿಲ್ಲ. ಈಗ ಅಂಜುಮಾನ್ ಚುನಾವಣೆಯಾದರೂ ಕೈ ಹಿಡಿಯುತ್ತೆ ಅಂತಾ ತನ್ನದೇ ಗುಂಪಿನೊಂದಿಗೆ ಸ್ಪರ್ಧೆಗೆ ಇಳಿದಿದ್ದಾನೆ. ಈತ ಈ ಹಿಂದೆ ಒಂದು ಬಾರಿ ಹಿಂಡಸಗೇರಿ ಮತ್ತು ಹೊನ್ನಳ್ಳಿ ನಡುವಿನ ಜಗಳದ ಲಾಭ ಪಡೆದು ಅಂಜುಮಾನ್ ಸಂಸ್ಥೆಯ ಅಧಿಕಾರ ಹಿಡಿದಿದ್ದ. ಹೊನ್ನಳ್ಳಿ ಗುಂಪಿನಲ್ಲಿದ್ದು ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಈತ ಇಡೀ ಅಂಜುಮಾನ್ ಸಂಸ್ಥೆ ತನಗೆ ಬೇಕು ಎಂದು ಪಟ್ಟು ಹಿಡಿದು ಬೇರೊಂದು ಗುಂಪು ಕಟ್ಟಿ ಕಳೆದ ಚುನಾವಣೆಯಲ್ಲಿ ನೆಲಕಚ್ಚಿದ್ದ.

ನೂರಾನಿ ಮಾರ್ಕೆಟ್‌ನಲ್ಲಿ ಸ್ಕ್ರ್ಯಾಪ್ ಮಾರಾಟ ಮಾಡುವವರ ಗುಂಪು ಕಟ್ಟಿಕೊಂಡು ಅಲ್ಲಿ ಸಹಕಾರ ಬ್ಯಾಂಕ್ ಒಂದನ್ನು ಸ್ಥಾಪಿಸಿದ. ಆ ಬ್ಯಾಂಕ್‌ನಲ್ಲಿ ತನ್ನ ಹೆಸರಲ್ಲಿ ಮತ್ತು ಕುಟುಂಬದವರ ಹೆಸರಲ್ಲಿ ಸಾಲ ಎತ್ತಿಯಾಗಿದೆ. ಆ ಹಗರಣವೇ ಆತ ಕಳೆದ ಚುನಾವಣೆಯಲ್ಲಿ ಸೋಲುವುದಕ್ಕೆ ಕಾರಣವಾಯಿತು.


ಹುಬ್ಬಳ್ಳಿ ರೈಲ್ವೆ ವರ್ಕ್‌ಶಾಪ್, ಕೆಎಸ್‌ಆರ್‌ಟಿಸಿ ವರ್ಕ್‌ಶಾಪ್‌ಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ಕ್ರ್ಯಾಪ್ ಎತ್ತುವಳಿ ಮಾಡುವುದೇ ಇವನ ಉದ್ಯೋಗವಾಗಿದೆ. ಕೆಎಸ್‌ಆರ್‌ಟಿಸಿ ವರ್ಕ್‌ಶಾಪ್‌ನಲ್ಲಿ ಹೊಸ ಬಸ್‌ಗಳ ಚಾಸ್ಸಿ ನಂಬರ್ ಬದಲಾಯಿಸಿ ಸ್ಕ್ರ್ಯಾಪ್‌ನಲ್ಲಿ ಅದನ್ನು ಖರೀದಿಸಿದವರ ಹೆಸರಲ್ಲಿ ಸಿದ್ಧಮಾಡುವ ಹಗರಣದಲ್ಲಿ ಈತನ ಹೆಸರು ತಳುಕು ಹಾಕಿಕೊಂಡಿದೆ. ಇಡೀ ವ್ಯವಹಾರ ತನಿಖೆಯಿಂದ ಹೊರಬರುವಷ್ಟರಲ್ಲಿ ತನ್ನ ರಾಜಕೀಯ ಬಳಸಿ ಎಂ.ಡಿ. ದಿನೂತ ಪ್ರಿಯಾ ವರ್ಗಾವಣೆಯ ಮುಖಾಂತರ ತೋರಿಸಿದ್ದಾನೆ. ಈಗಾಗಲೇ ಎಂ.ಡಿ. ವರ್ಗಾವಣೆ ವಿರೋಧಿಸಿ ಹೋರಾಟ ಪ್ರಾರಂಭವಾಗಿದೆ. ಸವಣೂರನಿಗೆ ಈ ಚುನಾವಣೆಯಲ್ಲಿ ಇದು ವಿರುದ್ಧವಾಗಿ ಕೆಲಸ ಮಾಡುವುದು ಸ್ಪಷ್ಟವಾಗಿದೆ.


ಇನ್ನೊಂದು ಹಗರಣದಲ್ಲಿ ಸವಣೂರ ತಾನೆ ಹಣ

ನೀಡಿ ಅಂಜುಮಾನ್ ಸಂಸ್ಥೆಗೆ ಒಂದು ಸಾವಿರಕ್ಕೂ ಹೆಚ್ಚು ಮತದಾರರನ್ನಾಗಿ ಸೇರಿಸಿದ್ದಾನೆ. ಅದಕ್ಕಾಗಿ ಕೆಲವರು ಈಗ ಸಂಸ್ಥೆಯಲ್ಲಿ ನಕಲಿ ಮತದಾರರು ಸೇರ್ಪಡೆಗೊಂಡಿದ್ದಾರೆ ಎಂದು ಕೆಲವರು ಹೈಕೋರ್ಟ್ ಮೆಟ್ಟಿಲು ಏರಿದರು. ಆಗ ಕೋರ್ಟ್ ಮತದಾರ ಪಟ್ಟಿ ಪರಿಷ್ಕರಿಸಿ ನಿಜವಾದ ಮತದಾರರನ್ನು ಗುರುತಿಸಲು ತಿಳಿಸಿತು. ಮಹಾನಗರ ಪಾಲಿಕೆಯ ಆಯುಕ್ತ ನೂರ ಮನ್ಸೂರ್ ಈ ಕೆಲಸ ವಹಿಸಿಕೊಂಡರು. ಡಿಜಿಟಲ್ ಗುರುತಿನ ಕಾರ್ಡ್ ಪಡೆಯಲು ದಾಖಲೆ ಒದಗಿಸಲು ಕೇಳಿದರು. ಆಗ **18,000** ಮತದಾರ ಬದಲಾಗಿ **11,300** ನಿಜವಾದ ಮತದಾರರು ಉಳಿದರು. ಹಣ ನೀಡಿ ಏನನ್ನಾದರೂ ಖರೀದಿ ಮಾಡುತ್ತೇನೆ ಎಂದು ಹೊರಟ ಸ್ಕ್ರ್ಯಾಪ್‌ನ ಸವಣೂರನಿಗೆ ಮನ್ಸೂರ್ ತಕ್ಕ ಪಾಠವನ್ನೇ ಕಲಿಸಿದ್ದಾರೆ. ತಾನೇ ಸೃಷ್ಟಿಸಿದ ನಕಲಿ ಮತದಾರರು ಕೈಬಿಟ್ಟು ಹೋದ ಮೇಲೆ ಸವಣೂರ ಕಂಗಾಲಾಗಿ ಕುಳಿತಿದ್ದಾನೆ.

### ಜಬ್ಬಾರಖಾನ್ ಹೊನ್ನಳ್ಳಿ ಉರ್ಫ್ ಮಾಸ್ತರ್ ಗುಂಪು

ಹಿಂದಿನ ಅವಧಿಗೆ ಹೊನ್ನಳ್ಳಿ ಗುಂಪೇ ಆಡಳಿತ ನಡೆಸಿದೆ. ಮೂರು ವರ್ಷಕ್ಕೊಮ್ಮೆ ನಡೆಯುವ ಈ


ಆಶ್ರಫ್


ನೂರ್ ಮನ್ಸೂರ್


ಚುನಾವಣೆ ಅವಧಿ ಮುಗಿದರೂ ಚುನಾವಣೆ ನಡೆಸಲು ಹೊನ್ನಳ್ಳಿ ತಯಾರು ಇಲ್ಲವೆಂದು ಸವಣೂರ ಗುಂಪು ಕೋರ್ಟ್ ಮೆಟ್ಟಿಲೇರಿತ್ತು. ಸಾಮಾನ್ಯ ಸಭೆ ಕರೆದಾಗ ಗಲಾಟೆ ಮಾಡಿಸಿತು. ಅದೇ ಸವಣೂರಿಗೆ ಮುಳುವಾಯಿತು. ಒಂದೆಡೆ ನಕಲಿ ಮತದಾರರು ಕೈ ತಪ್ಪಿದರು. ಮತ್ತೊಂದೆಡೆ ಕೆಎಸ್‌ಆರ್‌ಟಿಸಿಯ ಸ್ಕ್ರ್ಯಾಪ್ ದಂಧೆಯ ಕಳ್ಳಾಟದ ಹಗರಣವೂ ಹೊರಬಿತ್ತು. ಇದೇ ಈ ಚುನಾವಣೆಯಲ್ಲಿ ಹೊನ್ನಳ್ಳಿ ಮಾಸ್ತರಿಗೆ ಅಸ್ತ್ರ ಒದಗಿಸಿದೆ.


ಹೊನ್ನಳ್ಳಿ ಮಾಸ್ತರ್ ಆರೋಗ್ಯ ಹದಗೆಟ್ಟಿರುವುದು ಸುಳ್ಳೇನಲ್ಲ. ಆದರೆ ಆತನ ಶಿಷ್ಯರಿಗೆ ಆತನೇ ಅಧಿನಾಯಕ. "ನೀವು ಮನೆಯಲ್ಲಿರಿ. ನಾವು ಚುನಾವಣೆಯಲ್ಲಿ ಆಯ್ಕೆಗೊಳ್ಳುತ್ತೇವೆ" ಎನ್ನುವ ಹುರುಪಿನಲ್ಲಿ ಆಶ್ರಫಲಿ, ಕೊಳೂರ, ಹಳ್ಳೂರನಂತಹ ಯುವಕ ಪಡೆ ಗಲ್ಲಿ ಗಲ್ಲಿ ತಿರುಗುತ್ತಿದೆ. ಹೊನ್ನಳ್ಳಿ ಮಾಸ್ತರಿಗೆ ನೇರವಾಗಿ ವಿವಾದದ ಸುಳಿಯಲ್ಲಿ ಸಿಲುಕದೇ ಇರುವದು ಹಾಗೂ ಹಿಂದೂ ಸಮಾಜದೊಂದಿಗೆ ಒಳ್ಳೆಯ ಸಂಬಂಧವಿಟ್ಟುಕೊಂಡಿರುವುದು ಪ್ಲಸ್ ಪಾಯಿಂಟ್ ಆಗಿವೆ. ಗಣೇಶ ಉತ್ಸವ, ಹೋಳಿ-ಹುಣ್ಣಿಮೆ ಸಂದರ್ಭದಲ್ಲಿ ಇಡೀ ಅಂಜುಮಾನ್ ಸಂಸ್ಥೆಯ ಪದಾಧಿಕಾರಿಗಳನ್ನು ಕರೆದುಕೊಂಡು ಹೊನ್ನಳಿ ಮಾಸ್ತರ್ ತಿರುಗಾಡುವುದು ಬಹಳಷ್ಟು ಜನರಿಗೆ ಇಷ್ಟವಾದ ಸಂಗತಿ.

ಹಳ್ಳಿ ಪ್ರದೇಶದಿಂದ ಬಂದು ಮಾಸ್ತರಿಕೆ ಮಾಡಿ, ಅದಕ್ಕೆ ಗುಡ್‌ಬೈ ಹೇಳಿ, ರಿಯಲ್ ಎಸ್ಟೇಟ್‌ನಲ್ಲಿ ಸ್ವಲ್ಪ ದಿನ ತೊಡಗಿಸಿಕೊಂಡು, ಆನಂತರ ಜನತಾ ಪಕ್ಷದೊಂದಿಗೆ ಗುರುತಿಸಿಕೊಂಡು ಎಂಎಲ್‌ಸಿ ಆಗಿ ರಾಜಕೀಯ ಜೀವನ ಪ್ರಾರಂಭಿಸಿದ ಈತ ಹುಬ್ಬಳ್ಳಿ ಶಹರ ಎಂಎಲ್‌ಎ ಆಗಿ ಮಂತ್ರಿಯಾಗಿದ್ದು ಒಂದು ಸಾಹಸವೇ ಸರಿ. ಹಿಂಡಸಗೇರಿ ತರಹದವರ ರಾಜಕೀಯ ಪಟ್ಟುಗಳಿಗೆ ತಿರುಗೇಟು ನೀಡುತ್ತಾ ಅಂಜುಮಾನ್ ಸಂಸ್ಥೆಯನ್ನು ತನ್ನ ಸುಪರ್ದಿಗೆ ತಂದು ಮತ್ತೊಂದು ಅವಧಿಗೆ ಅಂಜುಮಾನ್ ಚುನಾವಣೆ ಎದುರಿಸುತ್ತಿದ್ದಾರೆ.

■ ಹುಬ್ಬಳ್ಳಿಯಾಂವ

# ಸಂಪುಟ ಪುನರ್‌ರಚನೆ ಅಂದರ್ ಬಾಹರ್ ಆಟ ಶುರು!


ಸಿದ್ದು


ದಿಗ್ವಿಜಯ್ ಸಿಂಗ್

'ನಾನೇನೂ ಸನ್ಯಾಸಿಯಲ್ಲ, ಹೈಕಮಾಂಡ್ ಯಾವುದೇ ಜವಾಬ್ದಾರಿ ಕೊಟ್ಟರೂ ನಿಭಾಯಿಸಬಲ್ಲೆ. ಆದರೆ ಸಂಪುಟ ಪುನಾರಚನೆ ಏನಿದ್ದರೂ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟದ್ದು...!'

ಹೀಗೆಂದು ರಾಜ್ಯ ಕಾಂಗ್ರೆಸ್ ಅಧಿಪತಿ ಪರಮೇಶ್ವರ್ ಕಣ್ಣಾಮುಚ್ಚಾಲೆಗಿಳಿದರೆ ಜವಳಿ ಸಚಿವ ಚಿಂಚನಸೂರ್ 'ರಾಜ್ಯದಲ್ಲಿ 60 ಲಕ್ಷ ಗಂಗಾಮತಸ್ಥರಿದ್ದಾರೆ. ಆ ಜನಾಂಗದಿಂದ ಮಂತ್ರಿಯಾಗಿರುವುದು ನಾನೊಬ್ಬನೆ. ನನ್ನನ್ನು ಬಿಟ್ಟು ಸಂಪುಟ ಪುನರ್‌ರಚನೆ ಎಂದರೆ ಅದು ಗಂಗಾಮತಸ್ಥರನ್ನು ಕೈಬಿಟ್ಟಂತೆಯೇ' ಎಂದು ಠುಸ್ ಪಟಾಕಿ ಸಿಡಿಸುತ್ತಾರೆ. ಮಂಡ್ಯದ ಗಂಡು ಅಂಬಿ ಅಭಿಮಾನಿಗಳದ್ದು 'ಸುಮ್ನೇ ಬಿಡ್ತೀವಾ...?' ಎಂಬ ಗೊಡ್ಡು ಬೆದರಿಕೆಯಾದರೆ ಸಿದ್ದು ನಿಷ್ಠ ಪಿರಿಯಾಪಟ್ಟಣದ ವೆಂಕಟೇಶ್ ಮತ್ತು ಮಳವಳ್ಳಿ ನರೇಂದ್ರ ಸ್ವಾಮಿ ನೇರ ಮೈಸೂರಿಗೇ ನುಗ್ಗಿ ಮುಖ್ಯಮಂತ್ರಿಗೆ ಮುತ್ತಿಗೆ ಹಾಕಿ ಎಚ್ಚರಿಕೆಯ ಆವಾಜು ಹಾಕುತ್ತಾರೆ. 'ಕಾಗೋಡು ತಿಮ್ಮಪ್ಪ ಮತ್ತು ಸೊರಕೆಗಿಂತಲೂ 6ನೇ ಬಾರಿ ಗೆದ್ದು ಶಾಸಕನಾಗಿರುವ ನಾನೇ ಕಾಂಗ್ರೆಸ್ಸಿನಲ್ಲಿ ಸೀನಿಯರ್ ಮೋಸ್ಟ್. ನನ್ನನ್ನು ಮಂತ್ರಿ ಮಾಡದೇ ಹೋದರೆ ಕಾಂಗ್ರೆಸ್ಸಿನಲ್ಲಿ ಇನ್ನು ಯಾರನ್ನು ಮಾಡಲು ಸಾಧ್ಯ' ಎಂಬುದು ಮಾಲಿಕಯ್ಯ ಗುತ್ತೇದಾರ್ ಪ್ರಶ್ನೆಯಾದರೆ ಮಾಜಿ ಮಂತ್ರಿ ಖಮರುಲ್ ತಾನು ಕಾಂಗ್ರೆಸ್ಸಿನ ನಿಷ್ಠಾವಂತ ಸೇನಾನಿ. ತನ್ನ ಆರೋಗ್ಯದ ಬಗ್ಗೆ ಯಾರಿಗಾದರೂ ಗುಮಾನಿಯಿದ್ದರೆ ನನ್ನ ಜೊತೆ ನೂರು ಮೀಟರ್ ಓಟಕ್ಕಿಳಿದು ಪರೀಕ್ಷಿಸಿಕೊಳ್ಳಲಿ.... ಎಂದು ಸವಾಲನ್ನೂ ಹಾಕಿದ್ದಾರೆ.

ಐಟಿ ಬಿಟಿ ಸಚಿವ ಎಸ್.ಆರ್. ಪಾಟೀಲರಿಂದ ಹಿಡಿದು ಕನ್ನಡ ಸಂಸ್ಕೃತಿ ಸಚಿವೆ ಉಮಾಶ್ರೀ ತನಕ ಸಮಾಜ ಕಲ್ಯಾಣ ಮಂತ್ರಿ ಆಂಜನೇಯ ಮೊದಲಾಗಿ ಜಲ ಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ್ ಮೊದಲಾಗಿ ಸಿದ್ದು ಸಂಪುಟದ ಪ್ರತಿಯೊಬ್ಬರದ್ದೂ ಒಂದೇ ಮಂತ್ರ.

### ಶಾಮನೂರು...!


ಅದು ಸಂಪುಟ ಪುನರ್‌ರಚನೆ. ಒಂದೋ ತನ್ನನ್ನು ಸಂಪುಟದಿಂದ ಕೈಬಿಡುವುದಿಲ್ಲ ಎಂಬ ಹುಸಿ ಆತ್ಮವಿಶ್ವಾಸ ಅಥವಾ ತನಗೆ ಯಾವ ಖಾತೆ ಕೊಟ್ಟರೂ ಬೇಜಾರಿಲ್ಲ ಎಂಬ ಒಣ ಔದಾರ್ಯ, ಇವೆರಡರ ಹೊರತಾಗಿ ಬಹುತೇಕ ಶಾಸಕರೆಲ್ಲರದ್ದೂ ಅದೇ ಹಾಡು ಅದೇ ಪಾಡು. ತಾನು ಇಂಥಾ ಜಾತಿಗೆ ಸೇರಿದ್ದರಿಂದ ಆ ಜಾತಿಗೆ ಪ್ರಾತಿನಿಧ್ಯವೆಂದೋ, ತಾನು ಇಷ್ಟು ಬಾರಿ ಗೆದ್ದಿದ್ದರಿಂದ ತನ್ನನ್ನು ಮಂತ್ರಿ ಮಾಡಬೇಕೆಂದೋ ಚೌಕಾಶಿ...!


ಇಂದು ನಾಳೆ ಆವತ್ತು ಇವತ್ತು ಎಂದುಕೊಂಡೇ ಸಂಪುಟ ವಿಸ್ತರಣೆಯನ್ನು ಮುಂದೂಡಿಕೊಂಡು ಬಂದ ಸಿಎಂ ಸಿದ್ದುಗೆ ಮತ್ತಾವುದೇ ನೆಪ ಉಳಿದಿಲ್ಲ. ಹೆಚ್ಚೆಂದರೆ ಇನ್ನೊಂದು ವಾರವಷ್ಟೇ. ಅಕ್ಟೋಬರ್ 6 ಅಥವಾ 7ಕ್ಕೆ ರಾಹುಲ್ ಗಾಂಧಿ ಬೆಂಗಳೂರಿಗೆ ಬರುವುದು ಗ್ಯಾರಂಟಿ. ಆದರೆ ಅಷ್ಟರೊಳಗಾಗಬೇಕು. ಆ ನಂತರ ವಿಧಾನ ಮಂಡಲದ ಅಧಿವೇಶನ. ಅದು ಮುಗಿಯುವ ತನಕ ಕಾಯುವಷ್ಟು ತಾಳ್ಮೆ ತಾನೇ ಹಸಿದು ಕೂತ ಯಾವ ಕಾಂಗ್ರೆಸ್ ನಾಯಕರಿಗಿದೆ?

ಹೀಗಾಗಿ ಕಾಲ ನೂಕಿದಷ್ಟೂ ಯಡವಟ್ಟುಗಳೇ ಹೆಚ್ಚೆಂಬ ನಿರ್ಧಾರಕ್ಕೆ ಮುಖ್ಯಮಂತ್ರಿ ಸಿದ್ದು ಮಾತ್ರವೇ ಅಲ್ಲ, ಹೈಕಮಾಂಡೂ ಬಂದುಬಿಟ್ಟಿದೆ. ಸದ್ಯ ಸಿದ್ದು ದೆಹಲಿಯಲ್ಲಿದ್ದಾರೆ. ನಾಳೆ ಅಂದರೆ ಸೆಪ್ಟೆಂಬರ್ 24ರಂದು ದೆಹಲಿಯಲ್ಲೇ ಇದ್ದು ದಿಗ್ವಿಜಯ್ ಸಿಂಗ್‌ರನ್ನು ಕಂಡು ಚರ್ಚಿಸಬಹುದು. ಆ ನಂತರವೇ ಮೇಡಂ ದರ್ಶನ. ಸೆಪ್ಟೆಂಬರ್ 25ರ ಶುಕ್ರವಾರ ಮೇಡಂ ಸೋನಿಯಾ ಅಂತಿಮ ನಿರ್ಣಯ ಪ್ರಕಟಿಸುವುದಕ್ಕೂ ಮುನ್ನ ಪರಮೇಶ್ವರ್ ಮತ್ತು ಸಿದ್ದುರನ್ನು ಮುಖಾಮುಖಿ ಕೂರಿಸಿ ದಿಗ್ವಿಜಯ್ ಸಿಂಗ್ ಅಂತಿಮ ರೂಪುರೇಷೆ ನಿರ್ಧರಿಸಬಹುದು. ಪ್ರಶ್ನೆಯೆಂದರೆ ಈಗ ನಡೆಯುವುದು ಸಂಪುಟ ವಿಸ್ತರಣೆಯೋ ಅಥವಾ ಸಚಿವ ಸಂಪುಟದ ಪುನಾರಚನೆಯೋ?


### ಡಿಸಿಎಂ?

ವಿಸ್ತರಣೆಯೆಂದರೆ ಸದ್ಯ ಬಾಕಿಯಿರುವ ನಾಲ್ಕು ಮಂತ್ರಿ ಸ್ಥಾನಗಳನ್ನು ತುಂಬುವುದು ಮಾತ್ರ. ಅದರಿಂದ ಸದ್ಯದ ಬೇಗುದಿ ತಣಿಯುವುದುಂಟೆ? ಬಾಕಿಯಿರುವುದು ಕೇವಲ ಎರಡು ವರ್ಷವಷ್ಟೆ. ಅಷ್ಟರೊಳಗೆ ಮಂತ್ರಿಗಿರಿ ದಕ್ಕದೆ ಹೋದರೆ ಇನ್ನಾವ ಪುರುಷಾರ್ಥಕ್ಕೆ ಕಾಂಗ್ರೆಸ್ಸಿನಲ್ಲಿರಬೇಕು? ನಮಗೆ ನಯಾ ಪೈಸೆಯ ಪ್ರಯೋಜನ ಇಲ್ಲವೆಂದರೆ ಸರ್ಕಾರ ಇದ್ದರೆಷ್ಟು ಬಿಟ್ಟರೆಷ್ಟು? ಇಂಥಾ ಮನಸ್ಥಿತಿಗೆ ಬಂದು ತಲುಪಿರುವ ಕಾಂಗ್ರೆಸ್ ಶಾಸಕರನ್ನು ಸಂತೈಸಲು ಇರುವ ಅಂತಿಮ ಮಾರ್ಗೋಪಾಯವೇ ಸಂಪುಟ ಪುನರ್‌ರಚನೆ. ಈ ಪೈಕಿ ದೊಡ್ಡ ತಲೆನೋವು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್.


ತಂಗಡಗಿ


ಶಾಮನೂರು



ಗುಂಡೂರಾವ್



ಅಂಬಿ

ಒಂದೋ ತನ್ನನ್ನು ಡಿಸಿಎಂ ಮಾಡಿ ಫಲವತ್ತಾದ ಒಂದು ಖಾತೆ ನೀಡಿ ಅಥವಾ ಡಿಸಿಎಂ ಆಗದಿದ್ದರೆ ಅಗಣಿತ ಆಮದನಿಯ ಎರಡು ಖಾತೆ ನೀಡಿ ಎಂಬುದು ಪರಮೇಶ್ವರ್ ಪಟ್ಟು. ಸದ್ಯ ಸಿದ್ದು ಸಂಪುಟದಲ್ಲಿ ಮಹದೇವಪ್ಪ ಮತ್ತು ಶ್ರೀನಿವಾಸ್ ಪ್ರಸಾದ್ ಇಬ್ಬರೂ ದಲಿತ ವರ್ಗದ ಬಲಗೈಗಳೇ. ಅಂಥಾದ್ದರಲ್ಲಿ ಪರಮೇಶ್ವರ್ ಬಂದರೆ ಅದು ಮೂರಕ್ಕೇರುತ್ತದೆ. ಆಗ ಸಹಜವಾಗೇ ಎಡಗೈ ಮಾದಿಗ ವರ್ಗದ ಕಣ್ಣು ಕೆಂಪಾಗುತ್ತದೆ. ಇದ... ನೀಡಬಾರದೆಂದರೆ ವಯೋವೃದ್ಧ ಮತ್ತು ... ಶ್ರೀನಿವಾಸ್ ಪ್ರಸಾದ್‌ರನ್ನು ಸ್ಪೀಕರ್ ಹುದ್ದೆಗೆ ತ... ಕಂದಾಯ ಖಾತೆಯನ್ನು ಪರಮೇಶ್ವರ್ ಬಾಯಿ...


ಹೇಗೂ ಉಪಮುಖ್ಯಮಂತ್ರಿ ಹುದ್ದೆಯಿಲ್ಲ... ಕಂದಾಯ ಖಾತೆಗೆ ಹೆಚ್ಚುವರಿಯಾಗಿ ಉ... ಖಾತೆಯನ್ನೂ ನೀಡಬೇಕೆಂಬುದು ಪರಮೇಶ್... ಹಾಗೊಮ್ಮೆ ಕಂದಾಯ ಇಲಾಖೆಯನ್ನು ಕೊ... ಹೋದರೆ ತನಗೆ ಬಿಡಿಎ, ಬಿಎಂಆರ್‌ಡಿಎ, ... ಜಲಮಂಡಳಿ, ಏರ್‌ಪೋರ್ಟ್ ಅಥಾರಿಟಿಯೂ... ಬೆಂಗಳೂರು ಡೆವಲಪ್‌ಮೆಂಟ್ ಹೆಸರಿ... ಇಲಾಖೆಯೊಂದನ್ನು ಸೃಷ್ಟಿಸಿಕೊಡಿ ಎಂಬುದು ... ಬಿಗಿ ಪಟ್ಟು!

ಹಾಗಂತ ಒಬ್ಬ ಪರಮೇಶ್ವರ್ ಬಯಕೆ ... ಉದ್ದೇಶವಾಗಿಟ್ಟುಕೊಂಡರೆ ಕಾಂಗ್ರೆಸ್‌ನ ಇತರೇ ... ಸಂಭಾಳಿಸುವವರ್‍ಯಾರು? ಮುಖ್ಯವಾಗಿ ಕ... ತಿಮ್ಮಪ್ಪನವರಿಗಿದು ಬದುಕಿನ ಕಟ್ಟಕಡೆಯ ... ಹೆಸರಿಗಷ್ಟೇ ಸ್ಪೀಕರ್‌ಗಿರಿ. ಹಿಂದಿಲ್ಲ ಮುಂದಿಲ್ಲ... ಕೊನೆಗಾಲಕ್ಕಾದರೂ ನಾಲ್ಕು ಜನಕ್ಕೆ ಉಪಕಾರ ವ... ಹೋದರೆ ಇಷ್ಟೆಲ್ಲ ಮಾಡಿ ಏನು ಪ್ರಯೋ... ಆಕ್ರೋಶ ಕಾಗೋಡು ತಿಮ್ಮಪ್ಪನವರದ್ದು. ಮುತ್... ಬಂಗಾರಪ್ಪ ಸರಿಸಮಕ್ಕೆ ನಿಲ್ಲಬಹುದಾಗಿದ್ದ ... ತಿಮ್ಮಪ್ಪ, ಜಾತಿ ಬಲವಿದ್ದಿದ್ದರೆ ಯ... ಮುಖ್ಯಮಂತ್ರಿಯಾಗಬೇಕಿತ್ತು. ಇದೇ ... ಸೇರಬಹುದಾದ ಮತ್ತೊಬ್ಬ ಹಿರಿಯ ರಮೇಶ್... ಮಂತ್ರಿಯಾಗಿ ಸ್ಪೀಕರ್ ಆಗಿ ತಮ್ಮದೇ ಸರ್ಕಾರ... 'ತಬ್ಬಲಿ'ಯಂತೆ ಕೈಕಟ್ಟಿ ಕೂರಬೇಕಾದ ತನ್ನ... ಬಗ್ಗೆ ರಮೇಶ್‌ಕುಮಾರ್ ಅವಕಾಶ ಸಿಕ್ಕಾಗೆಲ್ಲ ಕಿ... ಇದ್ದಾರೆ.


ಕಾಗೋಡು


ರಮೇಶ್‌ಕುಮಾರ್


ಮಲಕಾರೆಡ್ಡಿ


ಕೋಳಿವಾಡ್

### ಜಯಚಂದ್ರರ ಘನತೆಗೆ ...

ಇತ್ತ ಹಾಸನದ ಮಟ್ಟಿಗೆ ಬಂದರೆ ದೇ... ಪಾಳೆಯ ಪಟ್ಟಿನ ವಿರುದ್ಧ ಆವತ್ತಿನಿಂದ ಈವ... ತೊಡೆತಟ್ಟಿಕೊಂಡೇ ಬಂದವರು ಅರಕಲಗೂಡಿ... ಮಂಜು. ಗಂಡಸಿ ಶಿವರಾಂರನ್ನು ದಿಕ್ಕು ದ... ಹಾಗೆ ಮಾಡಿದ ದೇವೇಗೌಡರ ಕುಟುಂಬಕ್ಕೆ... ನೆಲೆಯಿಂದಲೇ ಸೆಡ್ಡು ಹೊಡೆಯಬಲ್ಲ ವಾಲೇ ವ... ಹಾಸನದ ಮಟ್ಟಿಗೆ ಕಾಂಗ್ರೆಸ್ ಅಸ್ತಿತ್ವಕ್ಕಾದರು... ಮಾಡಲೇಬೇಕಿದೆ. ಹಾಗೆಂದು ಏಕಾಏಕಿ... ಮಂಜುವನ್ನು ಮಂತ್ರಿ ಮಾಡಿಬಿಟ್ಟರೆ ಅದು ... ವೈಪರೀತ್ಯಕ್ಕೆ ಕಾರಣವಾಗುತ್ತದೆ. ಅದಕ್ಕೆ ಸಿದ್ದು ಕ... ಪರಿಹಾರವೂ ಕುತೂಹಲಕಾರಿಯೆ. ಒಕ್ಕಲಿಗರ ... ಭೈರೇಗೌಡರನ್ನು ತೆರವುಗೊಳಿಸಿ ಆ ಜಾಗಕ್ಕೆ... ತರುವುದರಿಂದ ಸಮಸ್ಯೆ ಸಲೀಸಾದೀತು. ಆ... ಭೈರೇಗೌಡರ ಗತಿ?

ಅದಕ್ಕೂ ಸಿದ್ದು ಬಣದಲ್ಲಿ ಪರಿಹಾ... ಪರಮೇಶ್ವರ್‌ರಿಂದ ತೆರವಾದ ಕೆಪಿಸಿಸಿ ಅ... ಎಸ್.ಆರ್. ಪಾಟೀಲರನ್ನು ತರುವುದು ಮ... ಭೈರೇಗೌಡರನ್ನು ರಾಜ್ಯ ಕಾಂಗ್ರೆಸ್ಸಿನ ಕಾರ್ಯಾಧ್ಯಕ್ಷರನ್ನಾ...

ಕೃಷ್ಣ ಭೈರೇಗೌಡರಿಗೆ ಪರ್ಯಾಯ ಆ... ಸಿಕ್ಕಂತಾಯ್ತು. ಸಂಪುಟದಲ್ಲಿ ಒಕ್ಕಲಿಗರ ಪ್ರ... ಸರಿದೂಗಿದಂತಾಯ್ತು ಮತ್ತು ಹಾಸನದ ಕಾಂಗ್ರೆ... ವಾಲೇ ಮಂಜುವನ್ನು ಮಂತ್ರಿಗಿರಿಗೆ ತಂದಂತಾ... ಒಕ್ಕಲಿಗರ ಸಮತೋಲನದ ಪರಿಹಾರೋಪಾಯ... ಸರಿ. ಆದರೆ ಟಿ.ಬಿ. ಜಯಚಂದ್ರರ ಗೌರವ...

## ಅಂಬಿ: ಅಂಗೈಲಿ ಸಿಗರೇಟು ಪ್ಯಾಕು, ಶುರುವಾಯಿತು ಎಣ್ಣೇ ಘಾಟು!

ತಮ್ಮ ಆರಾಧ್ಯ ದೈವ ಅಂಬಿಯನ್ನು ಯಾವುದೇ ಕಾರಣಕ್ಕೂ ಸಂಪುಟದಿಂದ ಕೈಬಿಡಕೂಡದೆಂದು ಅಂಬಿ ಭಕ್ತರ ಹಿಂಡು ಉಗ್ರ ಕ್ರಮದ ಎಚ್ಚರಿಕೆಯನ್ನೇನೋ ಕೊಟ್ಟಿದೆ. ಅಂಬರೀಷ್ ಎಂಬ ತಲೆಶೂಲೆಯಿಂದ ಹುಷಾರಾಗಿಯೇ ತಲೆತೊಳೆದುಕೊಳ್ಳುವ ಹರಕತ್ತೂ ಸಿಎಂ ಪಾಲಿಗೆ ಅನಿವಾರ್ಯವಾಗಿಬಿಟ್ಟಿದೆ. ಸಮಸ್ಯೆಯಿರುವುದು ಅಂಬಿ ಭಕ್ತರಲ್ಲಾಗಲಿ, ಮಂಡ್ಯದ ಕಾಂಗ್ರೆಸ್ಸಿನಲ್ಲಾಗಲಿ ಅಥವಾ ಹೈಕಮಾಂಡ್‌ನಲ್ಲಾಗಲಿ ಅಲ್ಲ, ಅಂಬಿಯಲ್ಲೇ...!

ಅನಾರೋಗ್ಯಕ್ಕೆ ಬಿದ್ದು ಇನ್ನೇನು ಮುಗಿದೇಹೋಯಿತು ಎಂಬಂತಿದ್ದ ಅಂಬಿಯನ್ನು ಬದುಕಿಸಲು ಸರ್ಕಾರ ಪಟ್ಟ ಪಾಡು ಅಷ್ಟಿಷ್ಟಲ್ಲ. ಅಭಿಮಾನಿಗಳಾದಿಯಾಗಿ ಒಕ್ಕಲಿಗ ಲಾಬಿಕೋರರೆಲ್ಲ ಇಟ್ಟ ಕಣ್ಣೀರು, ಚೊಬ್ಬಟ್ಟ ರೀತಿ, ಒಂದಾ ಎರಡಾ? ಇದೆಲ್ಲದರ ಫಲಶ್ರುತಿಯೆಂಬಂತೆ ಸರ್ಕಾರ ಸಿಂಗಾಪುರ ಆಸ್ಪತ್ರೆಗೆಂದು ಕೋಟಿ ಕೋಟಿ ಸುರಿಯಿತು. ತಮಿಳು ಸೂಪರ್‌ಸ್ಟಾರ್ ರಜನಿಯೇ ಮುಂದೆ ನಿಂತು ಚಿಕಿತ್ಸೆಯ ಉಸ್ತುವಾರಿ ಹೊತ್ತಿದ್ದೂ ಆಯಿತು. ಕರ್ನಾಟಕದ ಬೇರೆ ಯಾರೇ ನಾಯಕ, ಹೋರಾಟಗಾರ, ಮಂತ್ರಿಗಳಿಗಿಲ್ಲದಂತೆ ಸಿಂಗಾಪುರಕ್ಕೊಯ್ದು ಆ ಪಾಟಿ ಸುರಿದು ಅಂಬಿಯನ್ನು ಬದುಕಿಸಿ ಬಂದ ಲಾಭ ಏನು ಗೊತ್ತೆ?

ಅಂಬಿ ಮತ್ತೆ ಕುಡಿತ ಶುರುವಿಟ್ಟಿದ್ದಾರಂತೆ. ಪ್ರಾಣ ಉಳಿಸಿದ ಡಾಕ್ಟರ್‌ಗಳು, ಫ್ಯಾಮಿಲಿ ವೈದ್ಯರು, ಹಿತೈಷಿಗಳು, ಅಭಿಮಾನಿಗಳು, ಸರ್ಕಾರ ಹಾಳಾಗಲಿ. ತಾನೊಬ್ಬ ಮಂತ್ರಿ ಎಂಬ ಪರಿವೆ ಇಲ್ಲದಿದ್ದರೆ ಕತ್ತೆ ಬಾಲ. ಕನಿಷ್ಠ ಪ್ರಾಣದ ಹಂಗಾದರೂ ಇರಬೇಕಿತ್ತಲ್ಲವೆ?

ಪ್ರತಿ ಸಂಜೆಯಾದರೆ ಸಾಕು ಅಂಬಿ ಮೊಬೈಲು ಬಂದ್ ಆಗುತ್ತದೆ. ಅವರಾಗಿಯೇ ಯಾರಿಗಾದರೂ ಫೋನಾಯಿಸಿದರೆಂದರೆ ಮಾತು ತೊದಲಿದಂತೆ ನಾಲಿಗೆ ಎಡವಿದಂತೆ ದನಿ ಹದಗೆಟ್ಟಂತೆ. ಅದು ಗುಂಡಿನ ಮತ್ತು, ಸಾಲದ್ದಕ್ಕೆ ಸಿಗರೇಟು ಮತ್ತೆ ಅವರ ಅಂಗೈನ್ನಲಂಕರಿಸಿದೆ. ಪ್ಯಾಕು ತುಂಬ ಸಿಗರೇಟು, ಅದಕ್ಕೊಂದೇ ವಿಶೇಷ ಲೈಟರು ಮಾನ್ಯ ವಸತಿ ಸಚಿವರ ಕರಕಮಲವನ್ನಲಂಕರಿಸಿವೆ. ಯಾವುದನ್ನು ಪ್ರಾಣಕ್ಕೆ ಕುತ್ತೆಂದು ವೈದ್ಯರು ಎಚ್ಚರಿಸಿದ್ದರೋ ಅದನ್ನೇ ಅಂಬಿ ಅಪ್ಪಿಕೊಂಡಿದ್ದಾರೆ. ಭಕ್ತಾದಿಗಳೇನೋ ಮಂತ್ರಿಗಿರಿಗಾಗಿ ಬೀದಿಗಿಳಿಯಬಹುದು. ಆದರೆ ಅಂಬಿಗೆ ತನ್ನ ಪ್ರಾಣದ ಬಗ್ಗೆಯೇ ಕನಿಷ್ಠ ಪರಿವೆ ಇಲ್ಲ. ಇನ್ನು ಮಂತ್ರಿಗಿರಿಯನ್ನು ಹೇಗೆ ನಿಭಾಯಿಸಿಯಾರು? ತನ್ನನ್ನು ನಂಬಿದ ಜನಕ್ಕೆ, ಜಿಲ್ಲೆಗೆ, ಅಭಿಮಾನಿಗಳಿಗೆಲ್ಲ ಯಾವ ನ್ಯಾಯ ಕಲ್ಪಿಸಲು ಸಾಧ್ಯ? ಬಹುಶಃ ಇದನ್ನು ಸೂಕ್ಷ್ಮವಾಗೇ ಅರಿತು ಎಸ್.ಎಂ. ಕೃಷ್ಣರ ತಮ್ಮ ಶಂಕರ್ ಪುತ್ರ ಗುರುಚರಣ್ ಮಂಡ್ಯ ಜಿಲ್ಲೆಯಿಂದ ಮತ್ತೊಬ್ಬರನ್ನು ಮಂತ್ರಿ ಮಾಡಿ ಎಂದು ಮುಖ್ಯಮಂತ್ರಿಗೆ ಮನವಿ ಕೊಟ್ಟಿದ್ದು! ಇದರರ್ಥ ಅಂಬಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದರ್ಥ ತಾನೆ?




# ಮೋಟಮ್ಮ ಬಂದರೆ ಉಮಾಶ್ರೀ ಗತಿ?




ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಸುಮಾ ವಸಂತ್ ಮತ್ತು ಮೋಟಮ್ಮ ಮಂತ್ರಿಗಳಾಗಿರಲಿಲ್ಲವೇ? ಇಬ್ಬರು ಮಹಿಳೆಯರು ಮಂತ್ರಿಗಳಾದರೆ ತಪ್ಪೇನು? ಅಷ್ಟೊಂದು ಗಂಡಸರು ಮಂತ್ರಿಗಳಾಗಿರುವಾಗ ಎರಡೋ ಮೂರೋ ಮಹಿಳೆಯರಷ್ಟೇ ಮಂತ್ರಿಗಳಾಗಿದ್ದರೆ ಬಂದ ಲಾಭವೇನು?

ಹೀಗೆ ಶುರುವಾಗುವ ಕಾಂಗ್ರೆಸ್ ಮಹಿಳಾ ...ಅಂತಿಮವಾಗಿ ಬಂದು ನಿಲ್ಲುವುದು ಉಮಾಶ್ರೀ ಬುಡಕ್ಕೆ. 'ಪಕ್ಷ ಬಯಸಿದ್ದೇ ... ನಾನು ಯಾವ ಕ್ಷಣಕ್ಕೂ ರಾಜೀನಾಮೆ ನೀಡಲು ಸಿದ್ಧ. ನನ್ನ ಮಂತ್ರಿಗಿರಿ ...ತ್ತೆ ಎಂಬ ಭಯವೂ ಇಲ್ಲ ಮಂತ್ರಿ ಪದವಿ ಶಾಶ್ವತ ಎಂಬ ಭ್ರಮೆಯೂ ...' ಎಂದು ಮೊನ್ನೆಯಷ್ಟೇ ಕಲಬುರ್ಗಿಯಲ್ಲಿ ಮಾತಿನ ಬಾಣ ಬಿಟ್ಟ ಉಮಾಶ್ರೀಗೆ ...ಮ್ಮನ ಭೀತಿ.

...ಮಾಶ್ರೀ ಜೊತೆ ಮೋಟಮ್ಮನನ್ನೂ ಮಂತ್ರಿಯಾಗಿಸುವ ಉಮೇದು ...ಡಿಗಿದೆ. ಪಾರ್ಟಿ ಮತ್ತು ಸೀನಿಯಾರಿಟಿಯಲ್ಲಿ ಮೋಟಮ್ಮ ಹಿರೀಕೆ ಮತ್ತು ...ಷ್ಟೆ ಪಕ್ಷದ ಸಂಘಟನೆಯಲ್ಲೂ ವಿಪರೀತ ದುಡಿಯುವಾಕೆ. ಮಹಿಳಾ ಸಮಾನತೆಯ ...ಲದಲ್ಲಿ ಕೇವಲ ಒಬ್ಬ ಮಹಿಳಾ ಮಂತ್ರಿಯೆಂಬ ಟೀಕೆಯಿಂದ ಬಚಾವಾಗುವುದಕ್ಕಾದರೂ ಮೋಟಮ್ಮನವರನ್ನು ಸಂಪುಟಕ್ಕೆ ತರುವ ದೂರಾಲೋಚನೆ ಹೈಕಮಾಂಡ್ ತಲೆ ಹೊಕ್ಕಿದೆ.

ಆದರೆ ಉಮಾಶ್ರೀ ಕಿತ್ತು ಆ ಜಾಗಕ್ಕೆ ಮೋಟಮ್ಮ ಬರಲಿದ್ದಾರೆಂದು ಅದ್ಯಾರು ಹುಯಿಲೆಬ್ಬಿಸಿದ್ದಾರೋ? ಅದಕ್ಕೆ ಉಮಾಶ್ರೀ ಪ್ರತಿಕ್ರಿಯೆಯೂ ದಿಟ್ಟತನದ್ದೇ. ಸಮಸ್ಯೆಯಿರುವುದು ಉಮಾಶ್ರೀ ಪುನರ್ವಸತಿಯಲ್ಲಾಗಲಿ ಮೋಟಮ್ಮನ ಅರ್ಹತೆಯಲ್ಲಾಗಲಿ ಅಲ್ಲ, ಬದಲಿಗೆ ಜಾತಿ ಸಮೀಕರಣದಲ್ಲಿ. ಪರಮೇಶ್ವರ್ ಸಂಪುಟಕ್ಕೆ ಬಂದ ಪಕ್ಷದಲ್ಲಿ ಮಹದೇವಪ್ಪ ಮತ್ತು ಶ್ರೀನಿವಾಸ್ ಪ್ರಸಾದ್ ಸೇರಿದಂತೆ ಬಲಗೈ ದಲಿತರ ಸಂಖ್ಯೆಯೇ ಮೂರಕ್ಕೇರುತ್ತದೆ. ಅಂಥಾದ್ದರಲ್ಲಿ ಮೋಟಮ್ಮ ಬಂದರೆಂದರೆ ಅದು ನಾಲ್ಕಕ್ಕೇರುತ್ತದೆ. ಶ್ರೀನಿವಾಸ್ ಪ್ರಸಾದ್ ಸ್ಪೀಕರ್ ಹುದ್ದೆಗೊಪ್ಪಿಕೊಂಡು ರೆವಿನ್ಯೂ ಖಾತೆಯನ್ನು ಪರಮೇಶ್ವರ್‌ಗೆ ಒಪ್ಪಿಸಿದರೂ ಬಲಗೈ ದಲಿತರ ಕೋಟಾ ಸರಿದೂಗುವುದಿಲ್ಲ. ಅಂಥಾದ್ದರಲ್ಲಿ ಮೋಟಮ್ಮನವರ ಜಾತಿಯನ್ನು ಲೆಕ್ಕಕ್ಕಿಟ್ಟುಕೊಳ್ಳದೆ ಪಕ್ಷಕ್ಕಾಗಿ ದುಡಿದು ಸಿನಿಯಾರಿಟಿಯನ್ನಷ್ಟೇ ಪರಿಗಣಿಸುವಷ್ಟು ವ್ಯವಧಾನ ಹೈಕಮಾಂಡ್‌ಗಿದೆಯೇ?

ಅಷ್ಟಕ್ಕೂ ಮೋಟಮ್ಮ ಕಾಂಗ್ರೆಸ್ ನಾಯಕಿಯೇ ಹೊರತು ಸ್ವಯಂಘೋಷಿತ ಜಾತಿ ನಾಯಕಿ ಅಲ್ಲವಲ್ಲ?

ಬಲಾಢ್ಯರಲ್ಲದೆ ಹೋದರೂ ಗೌರವಾನ್ವಿತರು ಮತ್ತು ಸಂಭಾವಿತರು. ಇಬ್ಬರಿಗೂ ಇದು ಕೊನೆಯ ಚುನಾವಣೆಯೇನೊ. ರಾಯರೆಡ್ಡಿ ಮತ್ತು ಮಲಕಾರೆಡ್ಡಿಯಂಥವರು ಮಂತ್ರಿಯಾಗದೆ ಹೋದರೆ ಆ ಭಾಗದಲ್ಲಿ ಕಾಂಗ್ರೆಸ್ ಇದ್ದೇನು ಫಲ ಸತ್ತೇನು ಫಲ?

ಇದನ್ನು ಅರಿತೇ ರಾಯರೆಡ್ಡಿ ಮತ್ತು ಮಲಕಾರೆಡ್ಡಿಯವರನ್ನು ಹೈಕಮಾಂಡ್ ಮಂತ್ರಿ ಮಾಡಹೊರಟಿದೆ. ಲಿಂಗಾಯತ ಕಾಂಗ್ರೆಸ್ ನಾಯಕರ ಪೈಕಿ ಶಾಮನೂರು ಶಿವಶಂಕರಪ್ಪಗೆ ವಿಪರೀತ ಅನಾರೋಗ್ಯ, ಶಿವರಾಜ್ ತಂಗಡಗಿಗೂ ಕೊಕ್ ಕೊಡುವ ಸಾಧ್ಯತೆಯಿದೆ. ಈ ಸಾಲಿಗೆ ಚಿಂಚನಸೂರ್ ಹೆಸರೂ ಸೇರ್ಪಡೆಯಾದರೆ ಅಚ್ಚರಿಯೇನಿಲ್ಲ. ನಿಷ್ಕ್ರಿಯರು, ಅಸಮರ್ಥರು, ಕೈಬಾಯಿ ಕೆಡಿಸಿಕೊಂಡವರು, ಭ್ರಷ್ಟರು, ದುಷ್ಟರನ್ನೆಲ್ಲ ಕಿತ್ತು ಹಾಕಿ ಆ ಜಾಗಕ್ಕೆ ಯೋಗ್ಯರನ್ನು, ಕಾರ್ಯಶೀಲರನ್ನು ತರುವುದು ಎಂದರೆ ಅದು ಮುಖ್ಯಮಂತ್ರಿಯೊಬ್ಬನ ಅಳಿವು ಉಳಿವಿನ ಪ್ರಶ್ನೆಯಿದ್ದಂತೆ. ಹೆಚ್ಚೂ ಕಮ್ಮಿ ಮೂರು ವರ್ಷಗಳ ಮಂತ್ರಿಯಾಗಿದ್ದು ಯಾವ ಘನಕಾರ್ಯವನ್ನೂ ಸಾಧಿಸದವರನ್ನು ಗೌರವದಿಂದಲೇ ಕೆಳಗಿಳಿಸುತ್ತಿದ್ದಾರೆ ಸಿದ್ದು. ಆದರೆ ಇದ್ಯಾವುದನ್ನು ತಾವಾಗಿ ಮಾಡಿದಂತೆ ಮಾಡದೆ ಹೈಕಮಾಂಡ್ ಮುಖೇನವೇ ಮಾಡಿಸುವುದು ಸಿದ್ದು ತಂತ್ರ.


ಹಾಗೆಯೇ ಕಾಗೋಡು, ರಮೇಶ್‌ಕುಮಾರ್, ರಾಯರೆಡ್ಡಿ


...ಹಾಗೆ ಕಾಯಬೇಕಲ್ಲವೇ? ತನ್ನನ್ನು ಮಂತ್ರಿ ...ವುದರ ಜೊತೆಜೊತೆಗೇ ತುಮಕೂರು ಉಸ್ತುವಾರಿ ...ಮುನ್ನಾಗಿಯೂ ಮಾಡಬೇಕೆಂಬ ಮತ್ತೊಂದು ...ಯನ್ನು ಪರಮೇಶ್ವರ್ ಇಟ್ಟಿದ್ದಾರೆ. ಕಾಂಗ್ರೆಸ್ ಮಟ್ಟಿಗೆ ...ಚಂದ್ರ ಪರಮೇಶ್ವರ್‌ಗಿಂತಲೂ ಹಿರೀಕ ಮತ್ತು ...ಮು. ಈತನಕ ಕಾಂಗ್ರೆಸ್ ಅಧ್ಯಕ್ಷನಾಗಿದ್ದು ಸಾಲ ...ತಿ ತುಮಕೂರು ಜಿಲ್ಲೆಯ ಉಸ್ತುವಾರಿಯನ್ನೂ ...ತ್ತಿರುವ ಪರಮೇಶ್ವರ್ ಹಠಮಾರಿತನಕ್ಕೆ ...ಚಂದ್ರರಂಥ ಹಿರೀಕರನ್ನು ಅವಮಾನಿಸಬಾರದಲ್ಲವೆ?


## ರಾಯರೆಡ್ಡಿ-ಮಲಕಾರೆಡ್ಡಿ


...ದಕ್ಕೂ ಸಿದ್ದು ಪರಿಹಾರೋಪಾಯವೆಂದರೆ, ...ಚಂದ್ರರನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಉಸ್ತುವಾರಿ ...ಮಾಡಿ ಪರಮೇಶ್ವರ್‌ಗೆ ತುಮಕೂರು ಒಪ್ಪಿಸುವುದು. ...ಜಯಚಂದ್ರ ಜಗ್ಗಬೇಕಲ್ಲ? 'ಇದೆಂಥಾ ನ್ಯಾಯಾರೀ....? ...ದು ಅಧಿಕಾರದಾಹ ಇರೋದೇ ಆದರೆ ಚಿಕ್ಕ ...ರ ಜಿಲ್ಲೆಗೆ ಅವರನ್ನೇ ಉಸ್ತುವಾರಿ ಮಾಡಿ. ನಾನ್ಯಾಕೆ ...ರು ಬಿಟ್ಟುಕೊಡಲಿ?' ಎಂದು ತಿರುಗೇಟು ...ದ್ದಾರೆ.

...ದ್ದು ಮುಖ್ಯಮಂತ್ರಿಯಾದ ಹೊಸದರಲ್ಲಿದ್ದ








ಪರಿಸ್ಥಿತಿಯೇ ಬೇರೆ, ಈಗಿರುವ ಪರಿಸ್ಥಿತಿಯೇ ಬೇರೆ. ಕುರುಬನಾದ ತಾನೇ ಮುಖ್ಯಮಂತ್ರಿಯಾಗಿರುವಾಗ ಮತ್ತೊಬ್ಬ ಕುರುಬ ಸಂಪುಟದಲ್ಲಿ ಏಕಿರಬೇಕೆಂಬ ಸಿದ್ದು ಆದರ್ಶವೇನಿದ್ದರೂ ಕೇಳಲಷ್ಟೇ ಚಂದ. ಹಾಗಂತ ಸಿದ್ದುಗಾಗಿ ಕುರುಬರೆಲ್ಲ ತ್ಯಾಗ ಮಾಡಲೇಬೇಕೆ? ಎಂದು ಕುರುಬರಲ್ಲೇ ಅಸಹನೆ ಭುಗಿಲೆದ್ದಿದೆ. ಅದಕ್ಕೆಂದು ಸಿದ್ದು ಕೊಂಚಮಟ್ಟಿಗೆ ತನ್ನ ಹಠ ಸಡಿಲಿಸಿದ ಫಲವೇ ಹೆಚ್.ವೈ. ಮೇಟಿ ಎಂಬ ಹಿರೀಕರಿಗೆ ಮಂತ್ರಿ ಪಟ್ಟ.

ಮೇಟಿ ಸಿದ್ದು ಪರಮಾಪ್ತರಷ್ಟೇ ಅಲ್ಲ, ಉತ್ತರ ಕನ್ನಡ ಭಾಗದ ಕುರುಬರಲ್ಲಿ ಸಂಭಾವಿತ ಮತ್ತು ಜನಾನುರಾಗಿ. ಸದ್ಯ ಕಾಂಗ್ರೆಸ್ ಮಟ್ಟಿಗೆ ಉತ್ತರ ಕನ್ನಡ ಅದರಲ್ಲೂ ಹೈದರಾಬಾದ್ ಕರ್ನಾಟಕ ಭಾಗದ ಇಬ್ಬರು ಪ್ರಭಾವಿ ಲಿಂಗಾಯತ ನಾಯಕರೆಂದರೆ ಅದು ಮಲಕಾರೆಡ್ಡಿ ಮತ್ತು ಬಸವರಾಜ ರಾಯರೆಡ್ಡಿ. ಶಾಮನೂರು ಟೈಪಿನ ಮಲಕಾ ರೆಡ್ಡಿ ಥರದ ಹಿರೀಕರನ್ನೂ ಸಂಭಾವಿತರನ್ನೂ ಮಂತ್ರಿ ಪದವಿಗೆ ತಂದು ಗೌರವಿಸುವುದು ಕೂಡ ಮಾಮೂಲಿನ ಕೆಲಸವೆ?

ಕಾಲ ಕೂಡಿ ಬಂದಿದೆ. ಹೊಟ್ಟೆ ತುಂಬಿದವರು ಇಳಿಯಲೇಬೇಕು. ಉಪವಾಸ ಕೂತು ಕಾದವರಿಗೆ ಮಣೆ ಹಾಕಲೇಬೇಕು.

**ರಾ. ಸೋಮನಾಥ್**




# ಬೂಸಿಗಳು ಸಾರ್, ಬೂಸಿಗಳು

...ಮ್ಮನ್ನು ಗೆಲ್ಲಿಸಿದರೆ ಸ್ವರ್ಗವನ್ನೇ ಧರೆಗಿಳಿಸುತ್ತೇವೆ ...ಬುರುಡೆ ಬಿಟ್ಟು ಮಂಕುಬೂದಿ ಎರಚಿ ಅಧಿಕಾರಕ್ಕೆ ...ರ ಅಸಲಿಯತ್ತು ಪೂರ್ತಿ ಬಯಲಾಗಿದೆ. ಅವರ ...ಬಣ್ಣಬಣ್ಣದ ಮಾತುಗಳಿಗೂ ಇಂದಿನ ವಾಸ್ತವಕ್ಕೂ ...ಅಗಾಧ ವ್ಯತ್ಯಾಸಗಳು ಒಂದೊಂದಾಗಿ ಮತದಾರರ ...ಕ್ಕೆ ಬರುತ್ತಲಿವೆ. ಉದಾಹರಣೆಗೆ ಇವತ್ತು ಸಾಮಾನ್ಯ ...ಬದುಕು ಹಿಂದಿಗಿಂತಲೂ ಹೆಚ್ಚು ದುಸ್ತರವಾಗಿ ...ಸಿದೆ. ಅವಶ್ಯಕ ಸಾಮಗ್ರಿಗಳ ಬೆಲೆ ದಿನೇ ದಿನೇ ...ದೆ. ಜನ ಕಲ್ಯಾಣ ಯೋಜನೆಗಳಿಗೆ ಕಳೆದ ...ಗಿಂತಲೂ ಕಡಿಮೆ ಅನುದಾನ ಒದಗಿಸಲಾಗಿದೆ. ...ಯ ವಹಿವಾಟು ಮಂತ್ರಕ್ಕೆ ಕುಸಿದಿದೆ. ...ರೊಂದಿಗಿನ ಸಂಬಂಧಗಳು ತೀರಾ ಹದಗೆಟ್ಟಿವೆ. ...ರ ಹಕ್ಕುಗಳ ಮೇಲೆ ಗದಾಪ್ರಹಾರ ನಡೆದಿದೆ. ...ಟ್ಟುತ್ತಿರುವ ಸಮಸ್ಯೆಗಳಿಗೆ ಯಾವ ಪರಿಹಾರವೂ ...ಲ್ಲ. ದಲಿತ, ಅಲ್ಪಸಂಖ್ಯಾತರ ಮೇಲೆ ದಾಳಿಗಳು ...... ಒಟ್ಟಾರೆಯಾಗಿ ಹೇಳುವುದಾದರೆ ಭರವಸೆಗಳ ...ನ ಘೋಷಣೆಗಳ ಬಲೂನುಗಳೆಲ್ಲವೂ ಠುಸ್ಸಾಗಿವೆ. ...ಕೆಲ ಉದಾಹರಣೆಗಳು ಇಲ್ಲಿವೆ:

## ರೂಪಾಯಿ ಮೌಲ್ಯ

...ದು: 2014ರ ಲೋಕಸಭಾ ಚುನಾವಣಾ ಪ್ರಚಾರ ...ಸಿದ್ದ ಕಾಲದಲ್ಲಿ ರೂಪಾಯಿ ಅಪಮೌಲ್ಯದ ವಿಚಾರ ಎತ್ತಿಕೊಂಡು ಪದೇಪದೇ ಮನಮೋಹನ್ ಸಿಂಗ್ ಸರ್ಕಾರವನ್ನು ಹಳಿಯುತ್ತಿದ್ದುದನ್ನೊಮ್ಮೆ ಜ್ಞಾಪಿಸಿಕೊಳ್ಳಿ. ಆಗ ಡಾಲರ್ ಬೆಲೆ ರೂ 58 ಇತ್ತು.

ಇಂದು: ಡಾಲರ್ ಬೆಲೆ ರೂ 67ಕ್ಕೆ ಇಳಿದಿದೆ.

## ಭಾರತ ಪಾಕಿಸ್ತಾನ ಸಂಬಂಧಗಳು

ಅಂದು: "ಯುಪಿಎ ಸರ್ಕಾರ ಪಾಕಿಸ್ತಾನದ ವಿಷಯದಲ್ಲಿ ದುರ್ಬಲ ನೀತಿ ಅನುಸರಿಸುತ್ತಿದೆ. ಭಾಜಪ ಅಧಿಕಾರಕ್ಕೆ ಬಂದರೆ ಗಡಿಯಾಚೆಗಿನ ದಾಳಿಗಳಿಗೆ ಮಂಗಳ ಹಾಡಲಿದೆ" ಎಂದು ಎರಡೂ ಕೈಎತ್ತಿ ನಾಟಕೀಯ ಶೈಲಿಯಲ್ಲಿ ಭಾಷಣ ಮಾಡುತ್ತಿದ್ದ ಮೋದಿ.

ಇಂದು: ಪಾಕಿಸ್ತಾನದಿಂದ ಗಡಿ ಉಲ್ಲಂಘನೆಗಳು ಹಿಂದಿಗಿಂತಲೂ ಜಾಸ್ತಿಯಾಗಿವೆ. 2014ರ ಮೇ ನಂತರ ಸುಮಾರು 700 ಉಲ್ಲಂಘನೆ ಪ್ರಕರಣಗಳು ನಡೆದಿವೆ.

## ಕಪ್ಪು ಹಣ

ಅಂದು: ಮೋದಿ ಉವಾಚ - ವಿದೇಶಗಳಲ್ಲಿ ಬಚ್ಚಿಟ್ಟಿರುವ ಕಪ್ಪು ಹಣವನ್ನೆಲ್ಲ ಭಾರತಕ್ಕೆ ಮರಳಿ ತರುವೆವು. ಪ್ರತಿಯೊಬ್ಬ ಭಾರತೀಯನ ಬ್ಯಾಂಕ್ ಖಾತೆಗೆ 10ರಿಂದ 15 ಲಕ್ಷ ರೂಪಾಯಿ ಜಮೆ ಮಾಡುವೆವು.

ಇಂದು: ಜನ ಬಾಯ್ಬಿಟ್ಟು ಕಾತರದಿಂದ ಕಾದದ್ದೇ ಬಂತು ಪಾಪ! ಮೋದಿ ಸರ್ಕಾರ ಭಾರಿ ಸಂಭ್ರಮದಿಂದ ತೆರೆಸಿದ ಸುಮಾರು 17 ಕೋಟಿ ಹೊಚ್ಚಹೊಸಾ ಬ್ಯಾಂಕ್ ಖಾತೆಗಳಿಗೆ ಮತ್ತು ಈಗಾಗಲೆ ಇರುವ ಖಾತೆಗಳಿಗೆ ಒಂದು ನಯಾ ಪೈಸೆಯೂ ಬಂದು ಬಿದ್ದಿಲ್ಲ! ಖುದ್ದು ಭಾಜಪ ಅಧ್ಯಕ್ಷ ಅಮಿತ್ ಶಾ ಒಪ್ಪಿಕೊಂಡಿರುವಂತೆ ಅದೊಂದು ಕೇವಲ ಚುನಾವಣೆ ಗೆಲ್ಲುವುದಕ್ಕೋಸ್ಕರ ಮಾಡಿದ ಹುರುಳಿಲ್ಲದ ಘೋಷಣೆಯಾಗಿತ್ತು, ಅವರದೇ ಸಂಸದ ನಿಶಿಕಾಂತ ದುಬೆ ಎಂಬಾತ "ವಿದೇಶಗಳಿಂದ ಕಪ್ಪು ಹಣ ತರಲು ಸಾಧ್ಯವಿಲ್ಲವೆಂದು ವಿತ್ತಮಂತ್ರಿ ಅರುಣ್ ಜೇಟ್ಲಿಗೂ ಗೊತ್ತಿದೆ" ಅಂತ ಗೇಲಿ ಮಾಡಿದ್ದಾನೆ.

## ತೈಲ ಬೆಲೆಗಳು

ಅಂದು: ಯುಪಿಎ ಸರ್ಕಾರದ ಕಾಲದಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲಬೆಲೆ ಏರಿದಂತೆ ನಮ್ಮಲ್ಲೂ ಪೆಟ್ರೋಲ್ ಡೀಸೆಲ್ ಬೆಲೆ ಏರಿಸುತ್ತಿದ್ದಾಗ ಭಾಜಪ ಮಂದಿ ದೇಶಾದ್ಯಂತ ಬೀದಿಗಿಳಿದು ಸರಣಿ ಪ್ರತಿಭಟನೆ ಮಾಡುತ್ತಿದ್ದರು.

ಇಂದು: ಜೂನ್ 2014ರಲ್ಲಿ 105 ಡಾಲರುಗಳಷ್ಟಿದ್ದ ತೈಲದ ಅಂತಾರಾಷ್ಟ್ರೀಯ ಬೆಲೆ ಈಗ 48 ಡಾಲರುಗಳಿಗೆ ಇಳಿದಿದೆ. ಆದರೆ ಮೋದಿ ಸರ್ಕಾರ ಇದಕ್ಕನುಗುಣವಾಗಿ ಭಾರತದಲ್ಲಿ ಬೆಲೆಗಳನ್ನು ಇಳಿಸಿದೆಯೇ? ಇಲ್ಲ, ಬದಲು ಲಾಭವನ್ನೆಲ್ಲ ತಾನೇ ಬಾಚುತ್ತಿದೆ.

## ಆಹಾರವಸ್ತುಗಳ ಬೆಲೆ

ಅಂದು: ಚುನಾವಣೆಗಳ ಕಾಲದಲ್ಲಿ ಮೋದಿ "ಸಾಕಪ್ಪಾ ಸಾಕು ಈ ಬೆಲೆ ಏರಿಕೆ, ಈ ಬಾರಿಯ ಮತ ಮೋದಿ ಸರ್ಕಾರಕ್ಕೆ" ಅಂತ ಹೋದಲ್ಲಿ ಬಂದಲ್ಲಿ ಘೋಷಣೆ ಕೂಗುತ್ತಿದ್ದ.

ಇಂದು: ಮೋದಿ ಪ್ರಧಾನಿ ಆದಾಗ ರೂ 25-30ರಷ್ಟಿದ್ದ ಈರುಳ್ಳಿ ಬೆಲೆ ಈಗ ರೂ 80ಕ್ಕೆ ತಲುಪಿದೆ. ತೊಗರಿ, ಉದ್ದಿನಂತಹ ಬೇಳೆಕಾಳುಗಳ ಬೆಲೆ ದುಪ್ಪಟ್ಟಾಗಿದೆ. ತರಕಾರಿ ಬೆಲೆಗಳೂ ಗಗನಕ್ಕೇರಿವೆ.

## ರೈಲುಯಾನ

ಅಂದು: ನಮ್ಮನ್ನು ಚುನಾಯಿಸಿದರೆ ಪ್ರಯಾಣಿಕರ ಸೌಕರ್ಯ ಹೆಚ್ಚಿಸುವೆವು, ಬುಲೆಟ್ ರೈಲುಗಳ ತರುವೆವು ಎಂದೆಲ್ಲ ಉದ್ದುದ್ದ ರೈಲುಬಿಟ್ಟಿದ್ದ ಮೋದಿ.

ಇಂದು: ಸೌಕರ್ಯ, ಸುರಕ್ಷತೆಯ ಮಟ್ಟಗಳಲ್ಲಿ ಯಾವೊಂದು ಸುಧಾರಣೆಯೂ ಆಗಿಲ್ಲ, ಆದರೆ ದರಗಳನ್ನು ಮಾತ್ರ ಶೇಕಡ 14ರಷ್ಟು ಏರಿಸಲಾಗಿದೆ. ಅದೂ ಸಾಲದೆಂಬಂತೆ ಐದು ರೂಪಾಯಿ ಇದ್ದ ಪ್ಲಾಟ್‌ಫಾರಂ ಟಿಕೆಟಿನ ದರವನ್ನು ಹತ್ತಕ್ಕೆ ಏರಿಸಲಾಗಿದೆ.

## ರೈತಾಪಿ ವರ್ಗ

ಅಂದು: ಯುಪಿಎ ಸರ್ಕಾರವನ್ನು ರೈತ ವಿರೋಧಿ ಎಂದು ದೂಷಿಸುತ್ತಾ ತನಗೆ ಮತ ಹಾಕಿದರೆ ರೈತರಿಗೆ ಸಕಲೈಶ್ವರ್ಯವನ್ನು ತಂದುಕೊಡುವೆನೆಂದು ಭರವಸೆಯ ಮೇಲೆ ಭರವಸೆ ನೀಡಿದ್ದ ಮೋದಿ.

ಇಂದು: ರೈತವಿರೋಧಿ ಭೂಸ್ವಾಧೀನ ಮಸೂದೆಯನ್ನು ಮೂರು ಮೂರು ಬಾರಿ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿದ ಕೀರ್ತಿ ಮೋದಿ ಸರ್ಕಾರಕ್ಕೆ ಸಲ್ಲುತ್ತದೆ. ರೈತ ಸಂಘಟನೆಗಳು ಮತ್ತು ಪ್ರತಿಪಕ್ಷಗಳ ತೀವ್ರ ಪ್ರತಿರೋಧದ ಫಲವಾಗಿ ಮಸೂದೆಯನ್ನು ಸದ್ಯ ವಾಪಾಸ್ ಪಡೆದುಕೊಳ್ಳಲಾಗಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ರೈತರ ಆತ್ಮಹತ್ಯೆಗಳು ಕೂಡ ಹಿಂದಿಗಿಂತ ಹೆಚ್ಚಿವೆ ಎಂದು ಅಂಕಿಅಂಶಗಳು ಹೇಳುತ್ತಿವೆ.

## ಡಿಜಿಟಲ್ ಇಂಡಿಯಾ

ಅಂದು: ತಮ್ಮ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕೈಗೆಟಕುವಂಥ ದರಗಳಲ್ಲಿ ಅಂತರ್ಜಾಲದ ಸವಲತ್ತನ್ನು ಒದಗಿಸಲಿದೆ ಎಂದು ಮೋದಿ ತನ್ನ ರಂಗುರಂಗಿನ ಚುನಾವಣಾ ಪ್ರಚಾರ ಭಾಷಣಗಳ ವೇಳೆ ಆಶ್ವಾಸನೆ ಕೊಟ್ಟಿದ್ದ.

ಇಂದು: ದತ್ತಾಂಶ ಬಳಕೆ ಮತ್ತು ಕರೆಗಳ ದರ ಒಂದೇ ಸಮನೆ ಏರುತ್ತಲಿದೆ. ಮೊಬೈಲ್ ಕಂಪನಿಗಳ ಲಾಭಗಳಿಕೆಗೆ ಕಡಿವಾಣವೇ ಇಲ್ಲದಂತಾಗಿದೆ. ಏರ್‌ಟೆಲ್ ಕಂಪನಿ ತನ್ನ 3ಜಿ ಅಂತರ್ಜಾಲದ ದರವನ್ನು 18%ದಷ್ಟು ಮತ್ತು 2ಜಿ ಅಂತರ್ಜಾಲದ ದರವನ್ನು 13%ದಷ್ಟು ಹೆಚ್ಚಿಸಿದೆ. ಎಲ್ಲಾ ಗ್ರಾಹಕರು ಕಾಲ್ ಡ್ರಾಪ್ ಸಮಸ್ಯೆಯಿಂದ ತತ್ತರಿಸುತ್ತಿದ್ದಾರೆ.

## ಆರೋಗ್ಯ ಸೇವೆಗಳು

ಅಂದು: ದೇಶದ ಸಾರ್ವಜನಿಕ ಆರೋಗ್ಯ ಸೇವಾ ಕ್ಷೇತ್ರವನ್ನು ಬಲಪಡಿಸಲು ಕ್ರಾಂತಿಕಾರಿ ಕ್ರಮಗಳನ್ನು ತೆಗೆದುಕೊಳ್ಳಲಿರುವೆನೆಂದು ಮೋದಿ ಸಾರಿದ.


ಇಂದು: ಆರೋಗ್ಯ ಸೇವಾ ಕ್ಷೇತ್ರಕ್ಕೆ ಒದಗಿಸಲಾಗುತ್ತಿದ್ದ ಅನುದಾನಗಳಲ್ಲಿ ದೊಡ್ಡ ಮಟ್ಟದ ಕಡಿತ ಮಾಡಲಾಗಿದೆ. ಹಣದ ಕೊರತೆಯಿಂದಾಗಿ ಎಚ್‌ಐವಿ/ಏಡ್ಸ್ ಕಾರ್ಯಕ್ರಮಗಳಿಗೆ ಹಿನ್ನಡೆ ಉಂಟಾಗಿದೆ.

## ಗೃಹಭಾಗ್ಯ

ಅಂದು: ಮೋದಿ ಸರ್ಕಾರ ಇತ್ತೀಚೆಗೆ ಮೂರು ಯೋಜನೆಗಳನ್ನು ಘೋಷಿಸಿದೆ: ಸ್ಮಾರ್ಟ್ ಸಿಟಿ, ಅಟಲ್ ಪುನರುಜ್ಜೀವನ ಕಾರ್ಯಕ್ರಮ ಮತ್ತು ದೇಶದ ಪ್ರತಿಯೊಬ್ಬ ಪ್ರಜೆಗೂ ಮನೆ.

ಇಂದು: ನಾಲ್ಕು ಟ್ರಿಲಿಯನ್ ರೂಪಾಯಿಗಳ ಅಂದಾಜು ಸಿದ್ಧವಾಗಿದೆ. ಘೋಷಣೆಗಳು ಹೊರಟಿವೆ. ಆದರೆ ಪ್ರಗತಿ ಮಾತ್ರ ಶೂನ್ಯ.

(ಆಧಾರ: www.catchnews.com)


ನಿರ್ದೇಶಕ ಮಾಜಿದ್

# ಪ್ರವಾದಿ ಸಿನಿಮಾಗೆ ಫತ್ವಾ ಫಜೀತಿ

ಇದು ಮೂಲಭೂತವಾದಿಗಳ ಮತ್ತೊಂದು ಮಂಗಾಟ. ಮೊನ್ನೆಯಷ್ಟೆ ಸತ್ಯಶೋಧಕ ಎಂ.ಎಂ.ಕಲಬುರ್ಗಿಯವರಿಗೆ ಗುಂಡಿಟ್ಟ ಕೃತ್ಯದ ಕುರಿತಂತೆ ಹಿಂದೂ ಸನಾತನವಾದಿಗಳ ಸುತ್ತ ಅನುಮಾನಗಳು ಇನ್ನು ಸುತ್ತುತ್ತಿರುವಾಗಲೆ ಈಗ ಇನ್ನೊಂದಷ್ಟು ಮೂಲ'ಭೂತ' ವಾದಿಗಳು ಹೊಸದೊಂದು ಫತ್ವಾ ರಾದ್ಧಾಂತ ಶುರು ಮಾಡಿವೆ. ಫಾರ್ ಎ ಚೇಂಜ್, ಈ ಬಾರಿ ತಮ್ಮ ನಾಲಗೆ ಹರಿಬಿಟ್ಟರೋದು ಮುಸ್ಲಿಂ ಮೂಲಭೂತವಾದಿಗಳು. ಅಂದಹಾಗೆ, ಮೂಲಭೂತವಾದಿಗಳು ಯಾವ ಧರ್ಮದವರೇ ಆಗಿರಲಿ, ಅವರ ರಕ್ತ ಮಾಂಸಗಳಷ್ಟೇ ಬೇರೆಬೇರೆ; ಅಂತರ್ಯದ ಅಸ್ಥಿ ಒಂದೇ!

ಮುಂಬೈ ಮೂಲದ ರಝಾ ಅಕ್ಯಾಡೆಮಿಯ ಮೊಹಮ್ಮದ್ ಸೈಯ್ಯದ್ ನೂರಿ, ಏಕಾಏಕಿ ಫತ್ವಾ ಒಂದನ್ನು ಹೊರಡಿಸಿದ್ದಾನೆ. ಅದೂ ಆಸ್ಕರ್ ವಿಜೇತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್, ಇರಾನ್‌ನ ಖ್ಯಾತ ಸಿನಿಮಾ ನಿರ್ದೇಶಕ ಮಾಝಿದ್ ಮಾಝಿದಿ ಮತ್ತು ಒಂದಷ್ಟು ಸಿನಿ ನಟರ ವಿರುದ್ಧ. ಅಷ್ಟಕ್ಕೂ ಇವರು ಮಾಡಿರುವ 'ಘನಘೋರ' ಅಪರಾಧವೆಂದರೆ ಪ್ರವಾದಿ ಮೊಹಮ್ಮದ್‌ರ ಕುರಿತು ಸಿನಿಮಾ ಮಾಡಿರೋದು! ಆಗಸ್ಟ್ 27ರಂದು ಇರಾನ್‌ನಲ್ಲಿ ತೆರೆಕಂಡು, ಇನ್ನು ಕೆಲವೇ ದಿನಗಳಲ್ಲಿ ಜಗತ್ತಿನಾದ್ಯಂತ ತೆರೆಗೆ ಅಪ್ಪಳಿಸಲು ಸಜ್ಜಾಗಿರುವ ದುಬಾರಿ ವೆಚ್ಚದ 'ಮೊಹಮದ್: ಮೆಸೆಂಜರ್ ಆಫ್ ಗಾಡ್' ಸಿನಿಮಾವೇ ಈ ಫತ್ವಾದ ಕೇಂದ್ರಬಿಂದು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಪ್ರಶಂಸೆ ಮತ್ತು ವಿಮರ್ಶೆಯನ್ನು ಗಳಿಸಿರುವ ಈ ಚಿತ್ರವು ಜಗತ್ತಿಗೆ ಇಸ್ಲಾಂನ ನಿಜವಾದ ಮಗ್ಗುಲನ್ನು ಪರಿಚಯಿಸುವ ಉದ್ದೇಶದಿಂದ ರೂಪ ತಳೆದಿರುವಂತದ್ದು. ಆದರೆ ಇಸ್ಲಾಂ ಧರ್ಮದ ಪ್ರಕಾರ ಅಲ್ಲಾಹರನ್ನಾಗಲಿ ಅಥವಾ ಖುದ್ದಾಸನ ಸಂದೇಶಕರಾದ ಪ್ರವಾದಿ ಮೊಹಮದ್‌ರನ್ನಾಗಲಿ ಭೌತಿಕ ರೂಪಕೊಟ್ಟು ಚಿತ್ರಿಸುವಂತಿಲ್ಲ; ಚಿತ್ರದಲ್ಲಿ ಪ್ರವಾದಿ ಮೊಹಮದ್‌ರ ಪಾತ್ರ ತೆರೆಯ ಮೇಲೆ ಚಲಿಸಾಡುವುದರಿಂದ ತಮ್ಮ ನಂಬಿಕೆಗೆ ಅಪಚಾರವಾಗಿದೆ ಅನ್ನೋದು ಸೈಯ್ಯದ್ ನೂರಿಯಂತಹ ಮೂಲಭೂತವಾದಿಗಳ ಆಂಬೋಣ.

ಮುಂಬೈ ಮೂಲದ ರಝಾ ಅಕ್ಯಾಡೆಮಿಗೂ ಮೊದಲೇ ಈಜಿಪ್ಟ್‌ನ ಅಲ್ ಅಝುರ್ ವಿವಿ, ಸೌದಿ ಅರೇಬಿಯಾದ ಮಹಾಮೌಲ್ವಿ ಅಬ್ದುಲ್ ಅಜೀಜ್ ಇಬ್ನ್ ಅಬ್ದುಲ್ಲಾ ಅಲ್ ಶೇಕ್, ಮುಸ್ಲಿಂ ವರ್ಲ್ಡ್ ಲೀಗ್ (ಎಂ.ಡಬ್ಲ್ಯೂ.ಎಲ್) ಮೊದಲಾದ ಸಂಘಟನೆ, ವ್ಯಕ್ತಿಗಳು ಕೂಡಾ ಈ ಸಿನಿಮಾದ ವಿರುದ್ಧ ಹರಿಹಾಯ್ದಿದ್ದುಂಟು. ಈ ಇಷ್ಟೂ ಮಂದಿಯ ಆರೋಪದ ಸಾರ ಒಂದೇ: ಪ್ರವಾದಿ ಮೊಹ್ಮದ್‌ರನ್ನು ಭೌತಿಕ ರೂಪ ನೀಡಿ ತೋರಿಸಲಾಗಿದೆ, ಆ ಮೂಲಕ ಖುರಾನ್‌ಗೆ ಅಪಚಾರ ಮಾಡಲಾಗಿದೆ.

## ಮಾಝಿದಿ ಮತ್ತು ಪ್ರವಾದಿ ಮೊಹ್ಮದ್

ಈ ಸಿನಿಮಾ ರೂಪಿಸುವಲ್ಲಿ ಮಾಝಿದ್ ಮಾಝಿದಿ ಎಂಬ ಸೃಜನಶೀಲ ಸಿನಿಮಾಂತ್ರಿಕನ ಕಾಳಜಿ, ಉದ್ದೇಶ, ಶ್ರಮಗಳನ್ನು ರಝಾ ಅಕ್ಯಾಡೆಮಿಯ ಸೈಯ್ಯದ್ ನೂರಿಯಂತವರು ಅರ್ಥಮಾಡಿಕೊಂಡಿದ್ದರೆ ಇಂತಹದ್ದೊಂದು ವಿವಾದ ಭುಗಿಲೇಳುತ್ತಲೇ ಇರಲಿಲ್ಲ. ಕುಚೋದ್ಯವೆಂದರೆ ಚಿತ್ರದ ವಿರುದ್ಧ ಹರಿಹಾಯ್ದಿರುವ ಅವರ್‍ಯಾರೂ ಚಿತ್ರವನ್ನು ನೋಡಿಯೇ ಇಲ್ಲ! (ಇರಾನ್ ಹೊರತುಪಡಿಸಿ ಬೇರಾವ ದೇಶದಲ್ಲೂ ಸಿನಿಮಾ ಇದುವರೆಗೆ ರಿಲೀಜ್ ಆಗಿಲ್ಲ). ಹೆಚ್ಚೆಂದರೆ ಯೂಟ್ಯೂಬ್‌ಗಳಲ್ಲಿ ಹರಿದಾಡಿರುವ ಟ್ರೇಲರ್‌ನ ಎರಡು-ಮೂರು ನಿಮಿಷದ ವೀಡಿಯೊ ತುಣುಕುಗಳೇ ಅವರ ಆರೋಪದ ಸೋರ್ಸ್‌ಗಳಾಗಿರಬಹುದು. ಅಸಲಿಗೆ ಮಾಝಿದಿ ಈ ಸಿನಿಮಾವನ್ನು ನಿರ್ದೇಶಿಸಿರುವ ನಿರ್ಣಯ ಮಾಡಿದ್ದೇ ಪಾಶ್ಚಾತ್ಯ ದೇಶಗಳಲ್ಲಿ ಇಸ್ಲಾಂ ಬಗೆಗಿರುವ ತಪ್ಪು ಪೂರ್ವಗ್ರಹ ಅಭಿಪ್ರಾಯಗಳನ್ನು ಹೋಗಲಾಡಿಸಿ, ಅದು ಶಾಂತಿ ಮತ್ತು ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಧರ್ಮ ಎನ್ನುವುದನ್ನು ಜಗತ್ತಿಗೆ ಸಾರಿ ಹೇಳಬೇಕೆನ್ನುವ ಸದುದ್ದೇಶದಿಂದ.

ಮುಸ್ಲಿಂ ಮೂಲಭೂತವಾದಿಗಳು ಆರೋಪಿಸುತ್ತಿರುವಂತೆ ಪ್ರವಾದಿ ಮೊಹ್ಮಮುದ್‌ರಿಗೆ ಆಗಲಿ, ಕುರ್‌ಆನ್‌ಗೆ ಆಗಲಿ ಅಥವಾ ಅಲ್ಲಾಹನಿಗೇ ಆಗಲಿ ಅಪಚಾರ ಆಗುವಂತದ್ದು ಚಿತ್ರದಲ್ಲಿ ಏನಿದೆ, ಏನಿಲ್ಲ ಎಂಬುದನ್ನು ಕೆದಕುವುದಕ್ಕೂ ಮುನ್ನ ನಿರ್ದೇಶಕ ಮಾಝಿದ್ ಮಾಝಿದಿಯ ಒಳಗೆ ಈ ಸಿನಿಮಾ ರೂಪುಗೊಂಡ ಬಗೆಯನ್ನು ಅರ್ಥಮಾಡಿ ಕೊಳ್ಳುವುದು ಒಳಿತು. ಸ್ವತಃ ಮಾಝಿದ್ ಮೂಲತಃ ಶಿಯಾ ಮುಸ್ಲಿಂ. ಟೆಹ್ರೇನ್ ಸಿಟಿಯ ಮಧ್ಯಮ ಕುಟುಂಬವೊಂದರಲ್ಲಿ ಹುಟ್ಟಿದ ಮಾಝಿದ್ ಬಾಲ್ಯದಿಂದಲೇ ರಂಗಕಲೆಯತ್ತ ಆಸಕ್ತಿ ಹೊಂದಿದ್ದಂತವ. ತನ್ನ ಹದಿನಾಲ್ಕನೇ ವಯಸ್ಸಿನಲ್ಲೇ ಹವ್ಯಾಸಿ ರಂಗಸಮೂಹಗಳ ಜೊತೆ ನಟನೆ ಶುರು ಮಾಡಿ 1979ರ ಇರಾನ್ ಕ್ರಾಂತಿಯ ನಂತರ ಸಿನಿಮಾಗಳ ನಟನೆಯಲ್ಲೂ



ತನ್ನನ್ನು ತೊಡಗಿಸಿಕೊಂಡಿದ್ದ. ಆದರೆ ಆತನೊಳಗಿದ್ದ ಸಂವೇದನಾಶೀಲ ವ್ಯಕ್ತಿ ಮಾಝಿದಿಯನ್ನು ನಟನೆಗಿಂತ ಹೆಚ್ಚಾಗಿ ನಿರ್ದೇಶನದತ್ತಲೇ ಎಳೆಯುತ್ತಿತ್ತು. ಫ್ಯಾಶನ್ ಅಥವಾ ಫೇಮ್‌ಗಿಂತ ಹೆಚ್ಚಾಗಿ ಬದುಕಿನ ವಾಸ್ತವತೆಗಳನ್ನು ತೆರೆದಿಡುವ ಸಿನಿಮಾ ಮಾಡಬೇಕೆನ್ನುವುದು ಮಾಝಿದಿಯ ಉಸಿರಾಗಿತ್ತು. 1981ರಲ್ಲಿ ಎಕ್ಸ್‌ಪ್ಲೋಸನ್ (ಎನ್‌ಫೆಜಾರ್) ಎಂಬ ಕಿರುಚಿತ್ರದ ಮೂಲಕ ನಿರ್ದೇಶನಕ್ಕಿಳಿದ ಮಾಝಿದಿಯ ನೈಜ ಪ್ರತಿಭೆಯನ್ನು ತೆರೆದಿಟ್ಟದ್ದು 1997ರಲ್ಲಿ ತೆರೆಕಂಡಂತಹ 'ಚಿಲ್ಡ್ರನ್ ಆಫ್ ಹೆವನ್' (ಬಚ್ಚೇಹ-ಎ ಆಸೆಮಾನ್) ಸಿನಿಮಾ. ಬಡತನವೇ ಹಾಸಿಹೊದ್ದು ಮಲಗಿದ್ದ ಕುಟುಂಬವೊಂದರಲ್ಲಿ ಹುಟ್ಟಿದ ಅಲಿ ಮತ್ತು ಜಹ್ರಾ ಎಂಬಿಬ್ಬರು ಅಣ್ಣತಂಗಿಯ ಸುತ್ತ ಹೆಣೆದುಕೊಂಡಿದ್ದ ಈ ಕಥೆ ಮಾಝಿದಿಯ ಕುಸುರಿಯಲ್ಲಿ ಅದೆಷ್ಟು ಅದ್ಭುತವಾಗಿ ನಿರೂಪಿಸಲ್ಪಟ್ಟಿತ್ತೆಂದರೆ 1998ರ ಆಸ್ಕರ್ ಅವಾರ್ಡ್‌ನ ಅತ್ಯುತ್ತಮ ವಿದೇಶಿ ಭಾಷಾ ಚಿತ್ರದ ಕೆಟಗರಿಯಲ್ಲಿ ನಾಮನಿರ್ದೇಶನಗೊಂಡಿತ್ತು. ತನ್ನ ಅಚಾತುರ್ಯದಿಂದ ತಂಗಿಯ ಹಳೆಯ ಶೂಗಳನ್ನು ಕಳೆದುಹಾಕುವ ಅಣ್ಣನ ವೇದನೆ, ಅಣ್ಣನಿಗೋಸ್ಕರ ಸತ್ಯವನ್ನು ಮುಚ್ಚಿಡಲು ಹೆಣಗಾಡುವ ತಂಗಿ, ಶಾಲೆಯಲ್ಲಿ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಬೆಳಗ್ಗೆ ತಂಗಿ ಮತ್ತು ಮಧ್ಯಾಹ್ನ ಅಣ್ಣ ಇಬ್ಬರೂ ಒಂದೇ ಜೊತೆ ಶೂಗಳನ್ನು ಹಂಚಿಕೊಳ್ಳುವ ಮಕ್ಕಳ ಅನಿವಾರ್ಯತೆ, ತಮ್ಮ ಸ್ನೇಹಿತೆಯ ಬಳಿಯೇ ಆ ಶೂಗಳಿದ್ದರೂ ಅವಳ ತಂದೆಯ ಅಸಹಾಯಕತೆ, ಬಡ ಕಂಡು ಮರುಗಿ ತ್ಯಾಗ ಮಾಡುವ ಆ ಮಕ್ಕಳ ಮ ತಂಗಿಯ ಶೂಗೋಸ್ಕರ ರನ್ನಿಂಗ್ ರೇಸ್‌ನಲ್ಲಿ ಓಡಿ ಮೊ ಬಹುಮಾನ ಗಳಿಸಿದರೂ ಶೂಗಳನ್ನು ಬಹುಮಾನಗಳ ಟ್ಟಿದ್ದ ಮೂರನೇ ಸ್ಥಾನಕ್ಕೆ ಕುಸಿಯಲಾಗದ ಅ ಪರಿತಪಿಸುವಿಕೆ ಇವೆಲ್ಲವನ್ನೂ ಮಾಝಿದಿ ಮನೋಜ್ಞ ಕಟ್ಟಿಕೊಟ್ಟಿದ್ದರು. ಪ್ರಶಸ್ತಿ ಗಿಟ್ಟಿಸಿಕೊಳ್ಳುವಲ್ಲಿ ಇಟಾಲಿ 'ಲೈಫ್ ಈಸ್ ಬ್ಯೂಟಿಫುಲ್' ಸಿನಿಮಾದ ಮುಂದೆ ಸೋತಿತಾದರು ಇರಾನ್‌ನಿಂದ ಆಸ್ಕರ್ ಪ್ರಶಸ್ತಿಗೆ ನಾಮಿನ ಆದ ಪ್ರಪ್ರಥಮ ಚಿತ್ರ ಎಂಬ ಹೆಗ್ಗಳಿಕೆಯನ್ನು ಬರೆದಿ ಅಲ್ಲದೇ ಸಿನಿಮಾ ಮಾಝಿದಿಯ ಸಾಮರ್ಥ್ಯವನ್ನು ಜಗತ್ತಿನ ಮುಂದೆ ತೆರೆದಿಟ್ಟಿತ್ತು.

'ದಿ ಕಲರ್ಸ್ ಆಫ್ ಪ್ಯಾರಡೈಸ್', 'ಬ್ಯಾರನ್', ವಿಲ್ಲೊ ಟ್ರಿ', 'ದಿ ಸಾಂಗ್ ಆಫ್ ಸ್ಪಾರೊ' ಮೊದ ಮಾನವೀಯ ನೆಲೆಗಟ್ಟಿನ ಚಿತ್ರಗಳನ್ನು ಕಟ್ಟಿಕೊಟ್ಟ ಮಾಝಿದ್ ಮಾಝಿದಿ ಜಗತ್ತಿನ ಶ್ರೇಷ್ಠ ನಿರ್ದೇಶಕ ಒಬ್ಬ. 2008ರಲ್ಲಿ ಬೀಜಿಂಗ್‌ನಲ್ಲಿ ಒಲಿಂ ಕ್ರೀಡಾಕೂಟ ನಡೆದಾಗ ಬೀಜಿಂಗ್ ಸಿಟಿಯ ಪರಿಚಯಪಡಿಸಲು ಚೀನಾ ಸರ್ಕಾರ ಕಿರುಚಿತ್ರವೊಂ ತಯಾರಿಸಲು ಜಗತ್ತಿನ ಶ್ರೇಷ್ಠ ಐದು ಜನ ನಿರ್ದೇಶಕ ಆಯ್ಕೆ ಮಾಡಿತ್ತು, ಅದರಲ್ಲಿ ಮಾಝಿದ್ ಮಾಝಿ ಕೂಡಾ ಒಬ್ಬರಾಗಿದ್ದರು. ತಮ್ಮ ಸಿನಿಮಾದಲ್ಲಿ ಸಂವೇ ಮತ್ತು ಮಾನವೀಯತೆಗಳನ್ನು ಸೆರೆಹಿಡಿಯುವ ಮಾಝಿ ಬದುಕಿನಲ್ಲೂ ಅವುಗಳನ್ನು ಅಳವಡಿಸಿ ಕೊಂಡಿದ ಹಾಗಾಗಿಯೇ ತಾಲಿಬಾನ್, ಅಲ್‌ಕೈದಾ, ಐಸಿಸ್‌ನಂ ಉಗ್ರವಾದಿ ಸಂಘಟನೆಗಳಿಂದಾಗಿ ಇಸ್ಲಾಂ ಧರ್ಮ ದಯೆ, ನೈತಿಕತೆ ಮತ್ತು ಮಾನವೀಯ ಮೌಲ್ಯ ಗೌಣವೆನಿಸಿ ಇಸ್ಲಾಂ ಆಕ್ರಮಣಶೀಲ ಧರ್ಮ ಗುರುತಿಸಲ್ಪಡುತ್ತಿರುವುದರ ಬಗ್ಗೆ ಮಾಝಿದಿಗೆ ಅ ಖೇದವಿತ್ತು. ಇದರಿಂದಾಗಿ ಪಾಶ್ಚಾತ್ಯ ಪ್ರಪಂಚದಲ್ಲಿ ಇಸ್ಲಾ ರೂಪುಗೊಳ್ಳುತ್ತಿರುವ ಪೂರ್ವಗ್ರಹದತ್ತಲೂ ಮಾಝಿ ಅಸಹನೆ ಇತ್ತು.

ಇಂದು ಮುಸ್ಲಿಂ ಮೂಲಭೂತವಾದಿಗಳು ಯ ಮಾಝಿದಿ, ಪ್ರವಾದಿ ಮೊಹ್ಮದ್‌ರಿಗೆ ಅಪಚಾರ ಮಾಡಿ ಅಂತ ಫತ್ವಾ ಹೊರಡಿಸಿ ಆರ್ಭಟಿಸುತ್ತಿವೆಯೋ ಮಾಝಿದಿ 2006ರಲ್ಲಿ ತನ್ನ 'ದಿ ವಿಲ್ಲೋ ಟ್ರೀ' ಸಿನಿ ಪ್ರದರ್ಶನ ಕಾಣಬೇಕಿದ್ದ ಡೆನ್ಮಾರ್ಕ್‌ನಲ್ಲಿ ನಡೆದ 1 ನ್ಯಾಟ್‌ಫಿಲ್ಮ್ ಫೆಸ್ಟಿವಲ್ ಅನ್ನು ಬಹಿಷ್ ಹೊರಬಂದಿದ್ದರು. ಯಾಕೆಂದರೆ ಸಿನಿಮೋ ನಡೆಯುವುದಕ್ಕೂ ಕೆಲ ತಿಂಗಳು ಮುನ್ನ ಡೆನ್ಮಾ ಮೂಲದ ಜಿಲ್ಯಾಂಡ್ಸ್-ಪೋಸ್ಟನ್ ಎಂಬ ಪತ್ರಿಕೆ ಪ್ರ ಮೊಹ್ಮದ್‌ರ ಕಾರ್ಟೂನ್‌ಗಳನ್ನು ಪ್ರಕಟಿಸಿ, ಇಸ ಧಾರ್ಮಿಕ ನಂಬಿಕೆಗೆ ಘಾಸಿ ಮಾಡಿತ್ತು. ಆಗ ಪ್ರತಿ ನೀಡಿದ್ದ ಮಾಝಿದಿ 'ನಾನು ದೇವರನ್ನು ನಂಬು ಮತ್ತು ಈ ನನ್ನ ನಂಬಿಕೆಯಲ್ಲೇ ನನ್ನ ಜೀವನದ ಕ್ಷಣವನ್ನೂ ಕಳೆಯುತ್ತೇನೆ. ಧರ್ಮ, ರೀತಿರಿವಾಜು ಇರಬಹುದು ಆದರೆ ನನ್ನಂತೆಯೇ ಇತರರೂ ಎ ನಾನು ಭಾವಿಸಿದ್ದೇನೆ. ಯಾವುದೇ ಧರ್ಮವನ್ನಾಗಲಿ ಅ ಬಿಂಬವನ್ನಾಗಲಿ ಅವಮಾನಿಸಿ ಧಾರ್ಮಿಕ ಭಾವನೆ ಅವಮಾನ ಮಾಡುವುದನ್ನು ನಾನು ವಿರೋಧಿಸು ನನ್ನ ಧಾರ್ಮಿಕ ಭಾವನೆಯನ್ನು ಗೌರವಿಸದ ನೆಲ ನನ್ನನ್ನು ಗೌರವಿಸಿದರೆ ಏನು ಪ್ರಯೋಜನ. ಹಾ ನಾನು ಈ ಸಿನಿಮೋತ್ಸವವನ್ನು ಬಹಿಷ್ಕರಿಸಿ ಹ ನಡೆಯುತ್ತಿದ್ದೇನೆ' ಎಂದಿದ್ದರು. ಪ್ರವಾದಿ ಮೊಹ್ಮದ್‌ರ ಇಷ್ಟೆಲ್ಲಾ ಭಾವನಾತ್ಮಕತೆ ಉಳ್ಳ ಮನುಷ್ಯ ಅದೇ ಪ್ರವಾದಿ ಅಪಚಾರವಾಗುವಂತೆ ಚಿತ್ರ ಮಾಡಲು ಸಾಧ್ಯವೇ?

## ತುದಿತವೇ ಸಿನಿಮಾವಾದಾಗ...

ಇಸ್ಲಾಂ ಮೂಲಭೂತವಾದಿ ಸಂಘಟನೆಗಳಿಂದ ಧ ಭಯೋತ್ಪಾದಕತೆಯ ಕಳಂಕ ಮೆತ್ತಿಕೊಳ್ಳುತ್ತಿರುವುದು ಇದೇ ಕಾರಣಕ್ಕೆ ಪಾಶ್ಚಾತ್ಯ ದೇಶಗಳಲ್ಲಿ ಇಸ್ಲಾಂ ಅಸಹನೆ, ಅವಹೇಳನ ದಟ್ಟಗೊಳ್ಳುತ್ತಿರುವುದನ್ನು ಕ ಮಾಝಿದಿಗೆ ಡ್ಯಾನಿಶ್ ಸಿನಿಮೋತ್ಸವ ಬಹಿಷ್ಕಾರದ ನಿ ಹೊಸ ಆಲೋಚನೆಯೊಂದನ್ನು ಹುಟ್ಟುಹಾಕಿತ್ತು. ಪ್ರ ಮೊಹ್ಮದ್ ಮತ್ತು ಇಸ್ಲಾಂನ ಮೂಲತತ್ವಗಳನ್ನು ಜ ಮನವರಿಕೆ ಮಾಡಿಕೊ ವಂತಹ ಸಿನಿಮಾವೊಂ ಮಾಡಬೇಕೆನ್ನುವ ಹೆಬ್ಬಯ ಮಾಝಿದಿಯಲ್ಲಿ ಶುರುವಾ ಅದು ಬಲು ನಾಜೂಕಿನ ಸವೆಂಬುದೂ ತಿಳಿದಿದ್ದ ಆತುರಕ್ಕೆ ಅಂತಹ ಪ್ರಾಜೆಕ್ಟ್‌ಗೆ ಮಾಝಿದಿ ಕೈಹಾಕ ಸತತ ಏಳು ವರ್ಷಗ ಇಸ್ಲಾಂನ ಶಿಯಾ ಸುನ್ನಿ ಧಾರ್ಮಿಕ ಮ ತರು, ಪುರಾತತ್ವಶಾಸ್ತ್ರ ಇತಿಹಾಸಕಾರರನ್ನು ಸಂಪರ್ಕಿಸಿ, ಚರ್ಚೆ ನಡೆಸಿ ಧಾ ನಂಬಿಕೆಗಳಿಗೆ ಎಲ್ಲೂ ಅಪಚಾರವಾಗದಂತೆ ರೂಪುರೇಷೆಯನ್ನು ಸಿದ್ಧಪಡಿಸಿದ್ದರು.

ಆಗ ಅವರ ಮುಂದೆ ಸವಾಲಾಗಿ ನಿಂತದ್ದೇ, ಖುರ ವ್ಯತಿರಿಕ್ತವಾಗಿ ಹೇಗೆ ಪ್ರವಾದಿಗಳಿಗೆ ರೂಪ ಕ ಪಾತ್ರವಾಗಿಸೋದು ಎಂಬ ಪ್ರಶ್ನೆ? ಧಾರ್ಮಿಕ ಮುಖ

## ಫತ್ವಾ, ರೆಹಮಾನ್ ಮತ್ತು ಘರ್‌ವಾಪಸಿ

'ಮೊಹಮದ್: ಮೆಸೆಂಜರ್ ಆಫ್ ಗಾಡ್' ಸಿನಿಮಾಕ್ಕೆ ಸಂಗೀತ ನೀಡಿದ ಕಾರಣಕ್ಕೆ ರಝಾ ಅಕ್ಯಾಡೆಮಿಯ ಮೊಹಮದ್ ಸಯ್ಯದ್ ನೂರಿ ತನ್ನ ಮೇಲೆ ಫತ್ವಾ ಹೊರಡಿಸಿರುವುದಕ್ಕೆ ಎ.ಆರ್.ರೆಹಮಾನ್ ಫೇಸ್‌ಬುಕ್‌ನಲ್ಲಿ ಪ್ರಬುದ್ಧವಾಗಿ ಪ್ರತಿಕ್ರಿಯಿಸಿದ್ದಾರೆ. ಆ ಪ್ರತಿಕ್ರಿಯೆ ಸಾರಾಂಶ ಹೀಗಿದೆ: "ಈ ಸಿನಿಮಾಕ್ಕೆ ಸಂಗೀತ ನೀಡುವ ತೀರ್ಮಾನವನ್ನು ನಾನು ಕೈಗೊಂಡಿದ್ದು ಒಳ್ಳೆಯ ಭಾವನೆಯಿಂದಲೇ ಹೊರತು, ಅಪರಾಧ ಮಾಡುವ ಉದ್ದೇಶದಿಂದ ಅಲ್ಲ. ನಾನು ಈ ಸಿನಿಮಾದ ನಿರ್ದೇಶನವನ್ನೂ ಮಾಡಿಲ್ಲ, ನಿರ್ಮಾಣವನ್ನೂ ಮಾಡಿಲ್ಲ. ಕೇವಲ ಸಂಗೀತ ನೀಡಿದ್ದೇನೆ ಅಷ್ಟೆ. ಈ ಸಿನಿಮಾಕ್ಕೆ ಕೆಲಸ ಮಾಡಿದ ನನ್ನ ಆಧ್ಯಾತ್ಮಿಕ ಅನುಭವಗಳು ತೀರಾ ನನ್ನ ಖಾಸಗಿಯವಾಗಿದ್ದು, ಅವುಗಳನ್ನು ಹಂಚಿಕೊಳ್ಳುವ ಇರಾದೆ ನನಗಿಲ್ಲ. ರಝಾ ಅಕ್ಯಾಡೆಮಿಯ ನೂರಿಯವರು ತಮ್ಮ ಸಂದೇಶದಲ್ಲಿ 'ಮುಂದೊಂದು ದಿನ ತಾನು ಅಲ್ಲಾಹನ ಎದುರು ನಿಂತುಕೊಳ್ಳುವ ಪರಿಸ್ಥಿತಿ ಬಂದಾಗ, ನನ್ನ ವಿರುದ್ಧ ಇಂತಹ ಸಿನಿಮಾ ನಿರ್ಮಾಣ ಆಗುತ್ತಿದ್ದಾಗ ನೀನೇಕೆ ತಡೆಯುವ ಪ್ರಯತ್ನ ಮಾಡಲಿಲ್ಲ ಅಂತ ನನ್ನನ್ನು ಕೇಳಬಹುದು. ಅದಕ್ಕಾಗಿ ನಾನು ಇವರ ವಿರುದ್ಧ ಫತ್ವಾ ಹೊರಡಿಸುತ್ತಿದ್ದೇನೆ' ಎಂದು ಹೇಳಿಕೊಂಡಿದ್ದಾರೆ. ನೂರಿಯವರು ಹೇಳಿದಂತೆ ಅಲ್ಲಾನ್ನು ಎದುರಿಸುವ ದಿನ ನನಗೂ ಬರಬಹುದಲ್ಲವೇ? ಆಗ ಅಲ್ಲಾಹನ 'ನಾನು ನಿನಗೆ ನಂಬಿಕೆ, ಪ್ರತಿಭೆ, ಹಣ, ಖ್ಯಾತಿ ಆರೋಗ್ಯ ಎಲ್ಲವನ್ನೂ ಕೊಟ್ಟೆ.... ಆದರೆ ನೀನೇಕೆ ನನ್ನ ಪ್ರೀತಿಯ ಮೊಹಮದ್ ಸಿನಿಮಾಕ್ಕೆ ಸಂಗೀತ ನೀಡಲಿಲ್ಲ? ನನ್ನ ಹೆಸರಲ್ಲಿ ಅಮಾಯಕ ಜನರನ್ನು ದಯೆಯಿಲ್ಲದೆ ಕೊಲ್ಲುವ ಕೃತ್ಯಗಳನ್ನು ತಪ್ಪಿಸಿ ಬಡವರನ್ನು ಉದ್ಧರಿಸುವ, ಮಾನವೀಯತೆಯಲ್ಲಿ ಬದುಕುವ, ಕರುಣೆ ತುಂಬಿದ ನನ್ನ ಸಂದೇಶಗಳನ್ನು ಸಾರಿಹೇಳುವ ಮೂಲಕ ಇಸ್ಲಾಂನ ಬಗೆಗಿರುವ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಿ ಮನುಷ್ಯತ್ವವನ್ನು ಬೆಸೆಯುವಂತಹ ಈ ಸಿನಿಮಾಕ್ಕೆ ನೀನು ಏಕೆ ಸಂಗೀತ ನೀಡಲಿಲ್ಲ?' ಎಂದು ನನ್ನನ್ನು ಪ್ರಶ್ನಿಸಬಹುದಲ್ಲವೆ?


ಇವತ್ತು ವಾಸ್ತವ ಪ್ರಪಂಚ ಮತ್ತು ಅವಾಸ್ತವಿಕ ಪ್ರಪಂಚದ ನಡುವೆ ಮಬ್ಬು ಕವಿದಿದೆ. ಇತ್ತೀಚಿನ ಕೆಲ ವರ್ಷಗಳಲ್ಲಿ ಪ್ರವಾದಿ ಮೊಹಮದ್‌ರಿಗೆ ಅಪಚಾರವಾಗುವಂತಹ, ಆಕ್ಷೇಪಾರ್ಹ, ಅಧಾರ್ಮಿಕ ಟೀಕೆಗಳು ಇಂಟರ್ನೆಟ್‌ನಲ್ಲಿ ಹರಿದಾಡುತ್ತಿರುವುದನ್ನು ನಾನೂ ಗಮನಿಸಿದ್ದೇನೆ. ಖಂಡಿತವಾಗಿಯೂ ಈ ಎಲ್ಲ ಅಸಹನೀಯ ಟೀಕೆಗಳಿಗೆ, ತಿಳಿವಳಿಕೆ ಕೊರತೆಯೇ ಕಾರಣ. ಇಂತಹವುಗಳಿಗೆ ನಾವು ಪ್ರೀತಿ ಮತ್ತು ದಯೆಯಿಂದ ಪ್ರತಿಕ್ರಿಯೆ ತೋರಬೇಕೆನ್ನುವುದು ನನ್ನ ಅಭಿಪ್ರಾಯ. ತಮ್ಮ ಗ್ರಹಿಕೆಯನ್ನು ವಿಶಾಲಗೊಳಿಸಿಕೊಳ್ಳಲು ಇಚ್ಛಿಸುವ ಜನರನ್ನು ನಾವು ದೃಶ್-ಶ್ರವಣ ಮಾಧ್ಯಮಗಳ ಮೂಲಕ ತಲುಪಬೇಕಿದೆ. ಧಾರ್ಮಿಕ ಸ್ವಾತಂತ್ರ್ಯವನ್ನು ರೂಢಿಸಿಕೊಂಡು ಬಂದಿರುವಂತಹ ಮತ್ತು ಗೊಂದಲ, ಹಿಂಸೆಗಳನ್ನು ಹತ್ತಿಕ್ಕಿ ಸಮುದಾಯಗಳು ಶಾಂತಿ-ಸೌಹಾರ್ದಯುತವಾಗಿ ಬಾಳುತ್ತಿರುವಂತಹ ಭಾರತದಲ್ಲಿ ಹುಟ್ಟುವುದಕ್ಕೆ ನಾವೆಲ್ಲ ಅದೃಷ್ಟ ಮಾಡಿದ್ದೇವೆ. ಅದನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಹೊಣೆ.

ನಾನು ಇಸ್ಲಾಂ ವಿದ್ವಾಂಸನಲ್ಲ, ನಾನು ಮಧ್ಯದ ಹಾದಿಯಲ್ಲಿ ನಡೆಯುತ್ತಿದ್ದೇನೆ, ತುಸು ಸಂಪ್ರದಾಯಸ್ಥ ಮತ್ತು ತುಸು ವಿಚಾರವಾದಿ. ನಾನು ಪೂರ್ವ ಮತ್ತು ಪಶ್ಚಿಮ ದೇಶಗಳನ್ನೂ ಕಂಡಿದ್ದೇನೆ. ಜನರ ವ್ಯಕ್ತಿತ್ವಗಳನ್ನು ತೀರ್ಮಾನಕ್ಕೊಳಪಡಿಸದೆ ಅವರು ಹೇಗಿದ್ದಾರೊ ಹಾಗೆಯೇ ಪ್ರೀತಿಸಲು ಯತ್ನಿಸುತ್ತೇನೆ. ಸಂಘರ್ಷಗಳನ್ನು ಉದಾರತೆ ಮತ್ತು ಗಾಂಭೀರ್ಯದಿಂದ ಬಗೆಹರಿಸಿಕೊಳ್ಳುವಂತಹ ವಾತಾವರಣ ನಿರ್ಮಾಣವಾಗಬೇಕೆ ವಿನಾಃ ಮಾತುಗಳ ಅಥವಾ ಕ್ರಿಯೆಗಳ ಹಿಂಸೆಗೆ ಅನುವು ಮಾಡಿಕೊಡಬಾರದು. ನಾವೆಲ್ಲಾ ಕ್ಷಮೆಗಾಗಿ ಬೇಡಿಕೊಳ್ಳಬೇಕಿದೆ, ಜಗತ್ತಿನಲ್ಲಿ ವೇದನೆಗೆ ತುತ್ತಾಗಿರುವವರ ಪರವಾಗಿ ನಮ್ಮ ಹೃದಯದಲ್ಲಿ ಹರಸಬೇಕಿದೆ, ನಾವು ವಾಸಿಸುತ್ತಿರುವ ದೇಶದ ಒಳಿತಿಗೆ ಪ್ರಾರ್ಥಿಸಬೇಕಿದೆ. ಹಾಗೆ ಪ್ರಾರ್ಥಿಸುವ ಮೂಲಕ ನಮ್ಮ ಪ್ರೀತಿಯ ಮೊಹಮದ್‌ರ ಉದಾತ್ತತೆ ಮತ್ತು ಪ್ರಬುದ್ಧತೆಗಳನ್ನು ನಾವೆಲ್ಲ ಪ್ರತಿಫಲಿಸಬೇಕಿದೆ."

ರೆಹಮಾನ್‌ರ ಮೇಲೆ ಮುಸ್ಲಿಂ ಮೂಲಭೂತವಾದಿಗಳು ಫತ್ವಾ ಹೊರಡಿಸಿರೋದು ಗೊತ್ತಾಗುತ್ತಿದ್ದಂತೆಯೇ ವಿಶ್ವ ಹಿಂದೂ ಪರಿಷತ್ ತನ್ನ ಸಮಯಸಾಧಕತನವನ್ನು ತೋರಿಸಿದೆ. ವಿ.ಎಚ್.ಪಿ.ಯ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್ "ಎ.ಆರ್. ರೆಹಮಾನ್‌ರು ಘರ್‌ವಾಪಸಿ ಮೂಲಕ ಹಿಂದೂ ಧರ್ಮಕ್ಕೆ ವಾಪಸಾಗುವುದಕ್ಕೆ ಇದು ಸುಸಮಯ. ಅವರು ವಾಪಾಸ್ ಬರುವುದಾದರೆ ಹಿಂದೂಗಳು ಎರಡೂ ಕೈಚಾಚಿ ಸ್ವಾಗತಿಸುತ್ತಾರೆ" ಎಂದಿದ್ದಾನೆ. ಅಸಲಿಗೆ ಕಳೆದ ವರ್ಷ ರಾಜ್‌ಕುಮಾರ್ ಹಿರಾನಿ 'ಪೀಕೆ' ಸಿನಿಮಾ ಮಾಡಿದ್ದಾಗ ಹಿರಾನಿ ಮತ್ತು ಅಮೀರ್ ಖಾನ್ ವಿರುದ್ಧ ಇದೇ ವಿಎಚ್‌ಪಿ ಪ್ರತಿಭಟನೆ ಮಾಡಿದ್ದಕ್ಕಿಂತ ರಝಾ ಅಕ್ಯಾಡೆಮಿಯ ಫತ್ವಾ ಭಿನ್ನವೇನಲ್ಲ ಎಂಬ ಸತ್ಯ ಎ.ಆರ್. ರೆಹಮಾನ್‌ಗೆ ಗೊತ್ತಿಲ್ಲದಿಲ್ಲ.

...ಮ ಇಸ್ಲಾಂಗೆ ವಿರುದ್ಧವಾದ ಕ್ರಿಯೆ ಎಂಬ ಎಚ್ಚರಿಕೆ ...ತು. ಆದಕ್ಕಿಂತಲೂ ಹೆಚ್ಚಾಗಿ ಇಸ್ಲಾಂನ ಶುದ್ಧ ...ಯಾಯಿಯಾಗಿದ್ದ ಮಾಝಿದಿಗೆ ಅಂತಹ ಉದ್ಧಟತನ ...ವುದು ಸುತಾರಾಂ ಇಷ್ಟವಿರಲಿಲ್ಲ. ಹಾಗಾಗಿ ಇಡೀ ... ಎಲ್ಲೂ ಪ್ರವಾದಿಗಳ ಪಾತ್ರದ ಮುಖವನ್ನು ...ದಂತೆ ಅವರ ಕೈ ಪಾದಗಳು, ಬೆನ್ನಿನಿಂದ ಆ ...ವನ್ನು ದೃಶ್ಯೀಕರಿಸುವ ಆಲೋಚನೆ ಮಾಝಿದಿಯ ...ಹೊಕ್ಕಿತ್ತು. ಈ ಆಲೋಚನೆಗೆ ಧಾರ್ಮಿಕ ...ತರುಗಳು ಸಹ ಸಮ್ಮತಿ ಸೂಚಿಸಿದ ಮೇಲಷ್ಟೆ ...ಲ್ಲಿ ಅಧಿಕೃತವಾಗಿ ಚಿತ್ರ ನಿರ್ಮಾಣ ಘೋಷಣೆ ...ತು. ಆ ವೇಳೆಗಾಗಲೆ ಚಿತ್ರಕಥೆ ತಯಾರಾಗಿದ್ದರು ... ಧಾರ್ಮಿಕ ಮತ್ತು ತಾಂತ್ರಿಕ ಸೂಕ್ಷ್ಮತೆಗಳನ್ನು ...ಕೊಳ್ಳುವವರೆಗೆ ಮಾಝಿದಿ ಆತುರ ತೋರಿರಲಿಲ್ಲ. ... ಮುತುವರ್ಜಿ ವಹಿಸಿದ ಮೇಲೂ ಮತ್ತೊಂದು ...ಎದುರಾಗಿತ್ತು. ಪ್ರವಾದಿ ಮೊಹ್ಮದ್‌ರ ಜೀವನದ ... ಇಸ್ಲಾಂನ ಬಗೆಗಿರುವ ಪ್ರಸ್ತುತ ತಪ್ಪು ಗ್ರಹಿಕೆಗಳನ್ನು ...ಹೋಗಲಾಡಿಸುವುದು ಉದ್ದೇಶವಾಗಿದೆಯಾದರು ಒಂದು ...ವ ಎರಡೂವರೆ ಗಂಟೆ ಸೀಮಿತ ಅವಧಿಯ ... ಮಿತಿಯಾಗಿ ಪ್ರವಾದಿಗಳ ಬದುಕನ್ನು ಚಿತ್ರೀಕರಿಸಿ ... ತನ್ನ ಉದ್ದೇಶ ಈಡೇರದೆ ಹೋಗಬಹುದು ...ಆತಂಕ ಕಾಡಲಾರಂಭಿಸಿತ್ತು. ಆಗ ತನ್ನ ಇಡೀ ...ವನ್ನು ಕೇವಲ ಒಂದು ಸಿನಿಮಾದೊಳಕ್ಕೆ ತುರುಕಿ ... ಡಾಕ್ಯುಮೆಂಟರಿ ಆಗಿಸುವುದು ಬೇಡ ಎನ್ನುವ ...ನಕ್ಕೆ ಬಂದ ಮಾಝಿದಿ ಮೂರು ಪ್ರತ್ಯೇಕ ಸಿನಿಮಾ ...ಕೆಗಳನ್ನು ಮಾಡುವ ಸಾಹಸಕ್ಕೆ ಕೈಹಾಕಿದ್ದರು. ... ಭಾಗದಲ್ಲಿ ಪ್ರವಾದಿ ಮೊಹ್ಮದ್‌ರ ಜನ್ಮಪೂರ್ವ ... ಮತ್ತು ಅವರು ಹುಟ್ಟಿದಂದಿನಿಂದ 13ನೇ ...ನವರೆಗಿನ ಕಾಲಘಟ್ಟವನ್ನು ಸಿನಿಮಾವಾಗಿಸಿದರೆ ... ಭಾಗದಲ್ಲಿ 13 ರಿಂದ 40ನೇ ವಯಸ್ಸಿನವರೆಗಿನ ... ಮೊಹ್ಮದ್‌ರ ಬದುಕನ್ನೂ ಹಾಗೂ ಮೂರನೇ ... 40 ರಿಂದಾಚೆಗೆ ಪ್ರವಾದಿಯಾಗಿ ಅವರು ...ಬೋಧಿಸಿದ ಕಾಲಘಟ್ಟವನ್ನು ತೋರಿಸುವುದು ...ದಿಯ ಕನಸು.

... ಬಿಡುಗಡೆ ಆಗಿರುವುದು ಪ್ರವಾದಿಗಳ ಬಾಲ್ಯವನ್ನು ...ವ ಮೊದಲ ಭಾಗ ಮಾತ್ರ. ಆರಂಭದಲ್ಲಿ ಇದಕ್ಕೆ ...ದ್ ಚೈಲ್ಡ್‌ಹುಡ್' ಎಂದು ಹೆಸರಿಡಲು ...ದ್ದು ಕೂಡಾ ಇದೇ ಕಾರಣಕ್ಕೆ. ನಂತರ ಅದನ್ನು ...ಯ್ತು. ಬರೋಬ್ಬರಿ 40 ಬಿಲಿಯನ್ ಅಮೆರಿಕನ್ ... ವೆಚ್ಚದ ಈ ಪ್ರಾಜೆಕ್ಟ್‌ಗೆ ನೂರ್-ಇ-ತಬಾನ್ ...ನಿರ್ಮಾಣ ಸಂಸ್ಥೆ ಹಣ ಹಾಕಿದೆ. ಇಡೀ ಕಥೆ ...ಶತಮಾನದ ಆಸುಪಾಸಿನಲ್ಲಿ ಸುಳಿದಾಡುವುದರಿಂದ ... 1400 ವರ್ಷಗಳಷ್ಟು ಹಿಂದಿನ ಮಕ್ಕಾ ಮತ್ತು ...ದ ಜನಜೀವನ, ಪರಿಸರವನ್ನು ರಿಕ್ರಿಯೇಟ್ ... ಜವಾಬ್ದಾರಿಯೂ ಮಝಿದಿ ಮೇಲೆ ಬಿದ್ದಿತ್ತು. ... ಸಂರಚನೆಯನ್ನು ತೋರಿಸುವಂತಹ ಪೈಂಟಿಂಗ್ ... ಕೆತ್ತನೆಗಳಾಗಲಿ ಲಭ್ಯವಿಲ್ಲದ್ದು ಸಹ ಚಿತ್ರತಂಡದ ...ಸವಾಲಾಗಿತ್ತು. ಪುರಾತತ್ವ ಇತಿಹಾಸಕಾರರು ಮತ್ತು



ಕ್ರೊಯೇಷಿಯಾದ ಖ್ಯಾತ ಕಲಾವಿನ್ಯಾಸಕ ಮಿಲ್ಜೆನ್ ಕ್ರೋಕಾ ಜೊಕೊವಿಕ್‌ರ ನೆರವಿನಿಂದ ಇರಾನ್‌ನ ರಾಜಧಾನಿ ಟೆಹ್ರೇನ್‌ನಿಂದ 80 ಕಿ.ಮೀ ದೂರದಲ್ಲಿರುವ ಕ್ವೋಮ್ ನಗರದ ಬಳಿ ಸುಮಾರು 100 ಹೆಕ್ಟೇರ್ ವಿಸ್ತೀರ್ಣದಲ್ಲಿ 6ನೇ ಶತಮಾನದ ಮಕ್ಕಾ, ಮದೀನಾ ನಗರಗಳನ್ನು ಪುನರ್‌ನಿರ್ಮಿಸಿ ಅಲ್ಲಿ ಚಿತ್ರೀಕರಣ ನಡೆಸಲಾಗಿದೆ. ಅದಕ್ಕೀಗ 'ಪ್ರೊಫೆಟ್ ಮೊಹ್ಮದ್ ಸಿನಿಮ್ಯಾಟಿಕ್ ಸಿಟಿ' ಎಂದು ಮರುನಾಮಕರಣ ಮಾಡಿ ಬೇರೆ ಸಿನಿಮಾ ಚಿತ್ರೀಕರಣಕ್ಕೆ ಮುಕ್ತವಾಗಿಸಲಾಗಿದೆ. ಮಕ್ಕಾದ ಕಅಬವನ್ನು (ಮುಸ್ಲಿಮರು ಆರಾಧಿಸುವ ಪವಿತ್ರ ಘನಾಕೃತಿಯ ಕಟ್ಟಡ) ರಿಕ್ರಿಯೇಟ್ ಮಾಡುವಾಗ ಸಣ್ಣಪುಟ್ಟ ವಿಚಾರಗಳಲ್ಲೂ ಮಾಝಿದಿ ವಹಿಸಿರುವ ಮುತುವರ್ಜಿಯೇ ಈಗ ಮೂಲಭೂತವಾದಿಗಳು ಎಬ್ಬಿಸಿರುವ ಅನಗತ್ಯ ವಿವಾದಗಳಿಗೆ ಉತ್ತರ ಕೊಡುತ್ತದೆ.

## ಮಾಝಿದಿಯ ಸಮರ್ಥನೆ

ಯಾವ ಇಸ್ಲಾಂ ಧರ್ಮದ ತಪ್ಪುಗ್ರಹಿಕೆಯನ್ನು ಹೋಗಲಾಡಿಸಿ ಮುಸ್ಲಿಮರು ಮತ್ತು ಮುಸ್ಲಿಮೇತರರಲ್ಲಿ ಇಸ್ಲಾಂ ಧರ್ಮದ ಮಾನವೀಯ ಮಗ್ಗುಲನ್ನು ಅರ್ಥ ಮಾಡಿಸಬೇಕೆಂದು ಮಾಝಿದ್ ಮಾಝಿದಿ ಈ ಸಿನಿಮಾ ಮಾಡಿದರೂ ಅದೇ ಇಸ್ಲಾಂ ಧರ್ಮದ ಹೆಸರಲ್ಲಿ ಕೆಲ ಮೂಲಭೂತವಾದಿಗಳು ದಾಳಿ ಮಾಡಿರುವುದು ಮಾಝಿದಿಯ ಹುಮ್ಮಸ್ಸನ್ನು ಕುಗ್ಗಿಸಿಲ್ಲ. ಇಸ್ಲಾಂನಲ್ಲೇ ಸುನ್ನಿ ಮತ್ತು ಶಿಯಾ ಎಂಬ ಒಳಪಂಗಡಗಳಿರುವುದು ಹೊಸತೇನೂ ಅಲ್ಲ. ಪ್ರಪಂಚದಾದ್ಯಂತ ಮುಸ್ಲಿಮರಲ್ಲಿ ಸುನ್ನಿ ಪಂಗಡದವರು 85-90% ಜನಸಂಖ್ಯೆ ಹೊಂದಿದ್ದರೆ 10-15% ಮಾತ್ರ ಶಿಯಾ ಪಂಗಡದವರಿದ್ದಾರೆ. ಆ ನಿಟ್ಟಿನಲ್ಲಿ ನೋಡಿದಾಗ ಮುಸ್ಲಿಮರಲ್ಲೇ ಶಿಯಾ ಪಂಗಡದವರು ಅಲ್ಪಸಂಖ್ಯಾತರು.

ಒಟ್ಟಾರೆ ಧಾರ್ಮಿಕತೆಯಲ್ಲಿ ಸಾಮ್ಯತೆ ಕಾಣಿಸಿದರೂ ಅವರ ಆಚರಣೆ, ಆರಾಧನೆ ರೀತಿಗಳಲ್ಲಿ ಒಂದಷ್ಟು ವ್ಯತ್ಯಾಸಗಳಿರುವುದರಿಂದ ಇವೆರಡೂ ಪಂಗಡಗಳ ನಡುವೆ ಆಗಿಂದಾಗ್ಗೆ ಕಲಹ ನಡೆಯುತ್ತಲೇ ಇರುತ್ತದೆ. ಅಂತಹ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿ ಶಿಯಾ ಮತ್ತು ಸುನ್ನಿ ಪಂಗಡಗಳಲ್ಲಿ ಐಕ್ಯತೆ ಮೂಡಿಸಬೇಕೆನ್ನುವುದು ಸಹಾ ಮಾಝಿದಿಯ ಈ ಸಿನಿಮಾದ ಉದ್ದೇಶವಾಗಿದೆ. ಆದರೆ ಮಾಝಿದಿ ಸ್ವತಃ ಶಿಯಾ ಅಲ್ಪಸಂಖ್ಯಾತ ಪಂಗಡಕ್ಕೆ ಸೇರಿರುವುದರಿಂದ, ಸುನ್ನಿ ಮುಸ್ಲಿಮರ ಭಾವನೆಗಳಿಗೆ ಧಕ್ಕೆಯಾಗುವಂತೆ ಪ್ರವಾದಿಗಳನ್ನು ತೋರಿಸಲಾಗಿದೆ ಎಂಬ ಪುಕಾರುಗಳೇ ಇಂದಿನ ವಿವಾದದ ಹಿಂದಿರುವ ಅಸಲಿಯತ್ತು. ಮುಂಬೈನ ರಝಾ ಅಕ್ಯಾಡೆಮಿ ಸೇರಿದಂತೆ ಮಾಝಿದಿಯ ಸಿನಿಮಾ ಮೇಲೆ ಫತ್ವಾದಂತಹ ದಾಳಿ ಮಾಡಿರುವ ಹಲವು ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಸುನ್ನಿ ಸಮುದಾಯಕ್ಕೆ ಸೇರಿದವು ಎಂಬುದನ್ನಿಲ್ಲಿ ಗಮನಿಸಬೇಕಿದೆ.

ತಮ್ಮ ಸಿನಿಮಾ ಮೇಲಿನ ಇಂತಹ ಆರೋಪಗಳಿಗೆಲ್ಲಾ ಮಾಝಿದಿಯ ಉತ್ತರ ಒಂದೇ 'ಮೊದಲು ಸಿನಿಮಾ ನೋಡಿ, ನಂತರ ಆರೋಪ ಮಾಡಿ. ನಾನು ಟೀಕಿಸುತ್ತಿರುವ ಎಲ್ಲಾ ಧಾರ್ಮಿಕ ನಾಯಕರುಗಳನ್ನು ಸಿನಿಮಾ ನೋಡುವಂತೆ ಆಹ್ವಾನಿಸುತ್ತೇನೆ. ಅವರು ಪೂರ್ವಗ್ರಹ ನಿರ್ಧಾರವಿಲ್ಲದೇ ಪ್ರಾಮಾಣಿಕವಾಗಿ ವೀಕ್ಷಿಸಿದ್ದೇ ಆದಲ್ಲಿ ಅವರು ಈ ಸಿನಿಮಾವನ್ನು ಖಂಡಿತ ಪ್ರೀತಿಸುತ್ತಾರೆ'. ಸಿನಿಮಾದಲ್ಲಿ ಇಸ್ಲಾಂ ಧರ್ಮಕ್ಕಾಗಲಿ, ಪ್ರವಾದಿಗಳಿಗಾಗಲಿ ಮುಜುಗರ ಆಗುವಂತಹ ಯಾವ ಸನ್ನಿವೇಶವೂ ಇಲ್ಲವೆನ್ನುವ ದೃಢತೆ ನಿರ್ದೇಶಕರಲ್ಲಿರುವುದು ಇದರಿಂದ ಸಾಬೀತಾಗುತ್ತದೆ. ಜೊತೆಗೆ ಟೀಕಾಕಾರರ ಮುಂದೆ ಒಂದು ಪ್ರಶ್ನೆಯನ್ನಿಡುವುದನ್ನು ಕೂಡಾ ಮಾಝಿದಿ ಮರೆತಿಲ್ಲ 'ಜೀಸಸ್ ಕ್ರೈಸ್ಟ್‌ನ ಕುರಿತ ಸುಮಾರು 200 ಸಿನಿಮಾಗಳು ತಯಾರಾಗಿವೆ, ಮೋಸಸ್‌ರ ಮೇಲೆ 120 ಚಿತ್ರಗಳು ಸಿದ್ಧವಾಗಿವೆ, ಇತರೆ ಪ್ರವಾದಿಗಳನ್ನೂ ಆಧರಿಸಿ 70 ಸಿನಿಮಾಗಳು ತೆರೆಕಂಡಿವೆ, ಬುದ್ಧನನ್ನು ಆಧರಿಸಿದ 42 ಚಿತ್ರಗಳು ಜನರನ್ನು ತಲುಪಿವೆ, ಆದರೆ ಇಸ್ಲಾಂನ ಪ್ರವಾದಿ ಮೊಹ್ಮದ್‌ರನ್ನು ಕುರಿತು ತಯಾರಾಗಿರೋದು ಇದುವರೆಗೂ ಕೇವಲ 2 ಸಿನಿಮಾಗಳು ಮಾತ್ರ. 40 ವರ್ಷಗಳ ಹಿಂದೆ ಮುಸ್ತಫಾ ಅಕ್ಕಡ್ ತಯಾರಿಸಿದ್ದ 'ಅಲ್ ರಿಸಾಲಾ' (ದಿ ಮೆಸೇಜ್) ಮತ್ತು ಇತ್ತೀಚಿನ ನನ್ನ 'ಮೊಹ್ಮದ್: ಮೆಸೆಂಜರ್ ಆಫ್ ಗಾಡ್' ಸಿನಿಮಾ. ಪ್ರವಾದಿಗಳನ್ನು ಆಧರಿಸಿ ಸಿನಿಮಾ ಮಾಡುವುದೇ ತಪ್ಪೆನ್ನುವುದಾದರೆ, ಇಸ್ಲಾಂ ಧರ್ಮ ತನ್ನ ಮೂಲ ಆಶಯಕ್ಕೆ ವ್ಯತಿರಿಕ್ತವಾಗಿ ಪರಿಗಣಿಸಲ್ಪಡುತ್ತಿರುವ ಈ ಹೊತ್ತಿನಲ್ಲಿ ನನ್ನ ಧರ್ಮದ ನೈಜ ರೂಪವನ್ನು ಪೂರ್ವಗ್ರಾಹಿ ಜಗತ್ತಿಗೆ ಒಬ್ಬ ನಿರ್ದೇಶಕನಾಗಿ ನಾನು ಪರಿಚಯಿಸುವುದಾದರು ಹೇಗೆ?'

ಸೃಜನಶೀಲ ಸಿನಿವಂತ ಮಾಝಿದ್ ಮಾಝಿದಿಯ ಈ ಪ್ರಶ್ನೆ ಮೂಲಭೂತವಾದಿಗಳಿಗೆ ಅರ್ಥವಾದೀತಾ...?

■ ವರದಿಗಾರ

## ರಝಾ ಅಕ್ಯಾಡೆಮಿ ಮತ್ತು ರಾದ್ಧಾಂತಗಳು

ಎ.ಆರ್. ರೆಹಮಾನ್ ಮತ್ತು ಮಾಝಿದ್ ಮಾಝಿದಿಯ ಮೇಲೆ ಫತ್ವಾ ಹೊರಡಿಸಿರುವ ಮುಂಬೈ ಮೂಲದ ರಝಾ ಅಕ್ಯಾಡೆಮಿ ಇಸ್ಲಾಮಿಕ್ ಸೂಫಿ ಸಂಸ್ಕೃತಿಯನ್ನು ಪ್ರಚುರಪಡಿಸುವ ಉದ್ದೇಶದಿಂದ ಸಂಘಟಿತವಾದ ಸುನ್ನಿ ಮುಸ್ಲಿಮರ ಒಂದು ವೇದಿಕೆ. ಮೊಹಮದ್ ಸೈಯ್ಯದ್ ನೂರಿ 1978ರಲ್ಲಿ ಇದನ್ನು ಸ್ಥಾಪಿಸಿದ್ದು ಈಗಲೂ ಆತನೇ ಅದರ ಸಂಸ್ಥಾಪಕ ಕಾರ್ಯದರ್ಶಿಯೆನಿಸಿದ್ದಾನೆ. ಸೂಫಿ ಪಂಥದ ಪ್ರಕಟಣೆಗಳ ಮೂಲಕ ಧರ್ಮ ಪ್ರಚಾರ ಮಾಡುವುದು ತನ್ನ ಉದ್ದೇಶ ಎಂದು ಅಕ್ಯಾಡೆಮಿ ಘೋಷಿಸಿಕೊಂಡಿದ್ದರೂ ಇಂಟೆಲಿಜೆನ್ಸ್ ಬ್ಯೂರೊ ಒಳಗೊಂಡಂತೆ ರಕ್ಷಣಾ ಸಂಸ್ಥೆಗಳು ಇದರ ಮೇಲೆ ಬೇರೆಯದೇ ಕಾರಣಕ್ಕೆ ಕಣ್ಣಿಟ್ಟಿವೆ. ಸುನ್ನಿ ಮುಸ್ಲಿಂ ಪಂಗಡಗಳಲ್ಲೇ ಮತ್ತೆರಡು ಭಾಗಗಳಿವೆ; ಒಂದು ಡಿಯೋಬಂಡಿ ಮತ್ತು ಬರೇಲ್ವಿ. ಡಿಯೋಬಂಡಿ ಒಳಪಂಗಡದವರಿಗೆ ದರ್ಗಾಗಳಲ್ಲಿ (ಸೂಫಿ ಸಂತರ ಸಮಾಧಿಗಳು) ಪ್ರಾರ್ಥನೆ ಸಲ್ಲಿಸುವುದಕ್ಕೆ ಸಮ್ಮತವಿಲ್ಲ, ಆದರೆ ಬರೇಲ್ವಿ ಒಳಪಂಗಡಕ್ಕೆ ಇವು ಕೇಂದ್ರ ಆರಾಧನಾ ಸ್ಥಳಗಳು. ಬರೇಲ್ವಿ ಪಂಗಡಕ್ಕೆ ಈ ಹೆಸರು ಬಂದದ್ದು ಇಸ್ಲಾಂ ವಿದ್ವಾಂಸ ಅಹ್ಮದ್ ರಝಾ ಖಾನ್‌ರಿಂದಾಗಿ, ಅವರು ಬರೇಲಿಯಲ್ಲಿ ನೆಲೆಸಿದ್ದರಿಂದ ಆ ಪಂಗಡದ ಅನುಯಾಯಿಗಳಿಗೆ ಬರೇಲ್ವಿ ಎಂಬ ಹೆಸರು ಬಂದಿತು ಎನ್ನಲಾಗಿದೆ. 1904ರಲ್ಲಿ ರಝಾ ಖಾನ್‌ರು ಮಂಜರ್-ಇ-ಇಸ್ಲಾಂ ಅನ್ನು ಸ್ಥಾಪಿಸಿದ್ದರು, ಅದೀಗ ಬರೇಲ್ವಿ ಪಂಗಡದ ಪ್ರಧಾನ ಆರಾಧನಾ ಸ್ಥಳವಾಗಿ ಪರಿವರ್ತನೆಯಾಗಿದೆ. ಈ ಬರೇಲ್ವಿ ಪಂಗಡದ ಇಸ್ಲಾಂ ಅನುಯಾಯಿಯೇ ಆದ ಸೈಯದ್ ನೂರಿ 1978ರಲ್ಲಿ ಮುಂಬೈಗೆ ಬಂದು ಹುಟ್ಟುಹಾಕಿದ್ದೇ ಈ ರಝಾ ಅಕ್ಯಾಡೆಮಿ.




ರಝಾ ಅಕ್ಯಾಡೆಮಿ ವಿವಾದಕ್ಕೀಡಾಗುತ್ತಿರುವುದು ಇದೇ ಮೊದಲೇನಲ್ಲ. 11 ಆಗಸ್ಟ್ 2012ರಂದು ಆಜಾದ್ ಮೈದಾನದಲ್ಲಿ ನಡೆದ ಕೋಮುಗಲಭೆಗೂ ಇದೇ ಅಕ್ಯಾಡೆಮಿ ಕಾರಣ ಎಂದು ಪೊಲೀಸರು ಆರೋಪಿಸಿದ್ದಾರೆ. ಅಸ್ಸಾಂ ಮತ್ತು ಮ್ಯಾನ್ಮಾರ್‌ನಲ್ಲಿ ಮುಸ್ಲಿಮರ ಮೇಲೆ ನಡೆಯುತ್ತಿದ್ದ ದೌರ್ಜನ್ಯಗಳನ್ನು ಪ್ರತಿಭಟಿಸುವುದಕ್ಕಾಗಿ ಅಂದು ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಮರು ಭಾಗವಹಿಸಿದ್ದ ಪ್ರತಿಭಟನೆಯನ್ನು ರಝಾ ಅಕ್ಯಾಡೆಮಿ ಆಯೋಜಿಸಿತ್ತು. ಪರಿಸ್ಥಿತಿ ಪೊಲೀಸರ ನಿಯಂತ್ರಣ ಮೀರಿ ಪ್ರತಿಭಟನಾಕಾರರು ಹಿಂಸಾಚಾರಕ್ಕೆ ಇಳಿದಿದ್ದಲ್ಲದೆ ಪೊಲೀಸರ ವಾಹನಗಳ ಮೇಲೆ ದಾಳಿ ಮಾಡಿದ್ದರು. ಅಕ್ಯಾಡೆಮಿ ಸೈಯ್ಯದ್ ನೂರಿಯ ಪ್ರಚೋದನಾಕಾರಿ ಭಾಷಣವೇ ಅದಕ್ಕೆ ಕಾರಣ ಎನ್ನಲಾಗುತ್ತಿದೆ. ಇದಕ್ಕೂ ಮುನ್ನ ಅಕ್ಯಾಡೆಮಿ ಇರುವ ಮುಂಬೈನ ಭಿವಂಡಿ ಬಜಾರ್‌ನಲ್ಲಿ 2006ರಲ್ಲಿ ಗಲಭೆ ನಡೆದು ಇಬ್ಬರು ಪೊಲೀಸರು ಸಾವನ್ನಪ್ಪಿದ್ದಕ್ಕೂ ಇದೇ ಅಕ್ಯಾಡೆಮಿಯನ್ನು ಆರೋಪಿಯನ್ನಾಗಿಸಲಾಗಿದೆ. ಧರ್ಮ ಪ್ರಚಾರ ಮತ್ತು ಕೋಮುಪ್ರಚೋದನೆಯ ಆರೋಪಗಳ ಹೊರತಾಗಿ ಕೆಲವೊಮ್ಮೆ ರಾಷ್ಟ್ರೀಯತೆಯನ್ನು ಪ್ರದರ್ಶಿಸಿದ ಇದೇ ಅಕ್ಯಾಡೆಮಿಯು ಅಚ್ಚರಿ ಉಂಟುಮಾಡಿದ್ದೂ ಇದೆ. 26/11 ಭಯೋತ್ಪಾದನಾ ದಾಳಿಯ ವೇಳೆ ಸೆರೆಸಿಕ್ಕಿದ್ದ ಉಗ್ರ ಅಜ್ಮಲ್ ಕಸಬ್‌ನನ್ನು ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿರುವ ಮುಂಬೈನ ಭೆಂಡಿ ಬಜಾರ್ ಚೌಕದಲ್ಲಿ ಸಾರ್ವಜನಿಕವಾಗಿ ನೇಣಿಗೆ ಹಾಕಬೇಕು ಎಂಬ ಅಭಿಪ್ರಾಯವನ್ನೂ ಅಕ್ಯಾಡೆಮಿ ಹೊರಹಾಕಿತ್ತು.

ಫತ್ವಾ ಹೊರಡಿಸುವಂತಹ ಜಮಾಜ್-ಎ-ಇಸ್ಲಾಮಿ, ಜಮೀಯತ್ ಅಹ್ಲ್-ಇ-ಹದಿತ್ ಮತ್ತು ತಬ್ಲಿಘಿ ಜಮಾತ್‌ನಂತಹ ಸಂಘಟನೆಗಳೇ ಈ ಸಿನಿಮಾದ ವಿರುದ್ಧ ಧ್ವನಿ ಎತ್ತದೇ ಇರುವಾಗ ರಝಾ ಅಕ್ಯಾಡೆಮಿ ಫತ್ವಾ ಹೊರಡಿಸಿರೋದು ಪಬ್ಲಿಸಿಟಿಯ ಗಿಮಿಕ್ ಇರಬಹುದೆಂದೇ ಅಂದಾಜಿಸಲಾಗುತ್ತಿದೆ.

## 1976ರ ಸಿನಿಮಾಕ್ಕೂ ಇದೇ ಗತಿ!

...ವಾದಿ ಮೊಹಮದ್‌ರನ್ನು ಕೇಂದ್ರವಾಗಿಸಿಕೊಂಡ ಚಿತ್ರ ಇದೇ ಮೊದಲೇನಲ್ಲ, 1976ರಲ್ಲೇ ಮುಸ್ತಾಫಾ ...'ಅಲ್ ರಿಸಾಲಾ' ಎಂಬ ಅರೇಬಿಕ್ ಸಿನಿಮಾ ನಿರ್ದೇಶಿಸಿ ಬಿಡುಗಡೆ ಮಾಡಿದ್ದರು. 1977ರಲ್ಲಿ ಅದೇ ಸಿನಿಮಾ ...ಸೇಜ್' ಎಂಬ ಇಂಗ್ಲಿಷ್ ಅವತರಣಿಕೆಯಲ್ಲಿ ಬಿಡುಗಡೆಯಾಗಿತ್ತು. ಆಗಲೂ ಸಹ ಇದೇ ರೀತಿ ಮುಸ್ಲಿಂ ...ಭೂತವಾದಿಗಳಿಂದ ಪ್ರತಿರೋಧ ವ್ಯಕ್ತವಾಗಿದ್ದುಂಟು. ಚಿತ್ರವಿನ್ನೂ ನಿರ್ಮಾಣದ ಹಂತದಲ್ಲಿದ್ದಾಗಲೆ ಸಿನಿಮಾದಲ್ಲಿ ...ಮೊಹಮದ್‌ರನ್ನು ಚಿತ್ರಿಸುವುದಲ್ಲದೆ ಆ ಪಾತ್ರವನ್ನು ಚಾರ್ಲ್‌ಟನ್ ಹೆಸ್ಟೋನ್ ಅಥವಾ ಪೀಟರ್ ಓ'ಟೂಲ್ ...ಕ್ರಿಶ್ಚಿಯನ್ ನಟರಿಂದ ಮಾಡಿಸಲಾಗುತ್ತಿದೆ ಎಂಬ ಗಾಳಿಸುದ್ದಿ ಎದ್ದು ಗಲಭೆಗೆ ಕಾರಣವಾಗಿತ್ತು. ಕೊನೆಗೆ ...ಧರ್ಮದ ಮೌಲ್ವಿಗಳನ್ನು ತಮ್ಮ ತಾಂತ್ರಿಕ ಸಲಹೆಗಾರರನ್ನಾಗಿ ನೇಮಕ ಮಾಡಿಕೊಂಡ ನಿರ್ದೇಶಕ, ಇಸ್ಲಾಂಗೆ ...ಪ್ರವಾದಿಗಳಿಗೆ ಅಪಚಾರವಾಗದಂತೆ ಸಿನಿಮಾ ತಯಾರಿಸುತ್ತೇನೆ ಎಂಬ ಭರವಸೆ ನೀಡಿದ ಮೇಲಷ್ಟೆ ಚಿತ್ರೀಕರಣ ಮುಂದುವರೆದದ್ದು. ಕೊನೆಗೆ ಆ ಮೌಲ್ವಿಗಳೂ ನಿರ್ದೇಶಕ ಅಕ್ಕಡ್‌ರೊಂದಿಗೆ ಭಿನ್ನಾಭಿಪ್ರಾಯ ಬಂದು ಚಿತ್ರತಂಡದಿಂದ ಹೊರನಡೆದಾಗ ಮೊರಕ್ಕೋ ಸರ್ಕಾರ, ಚಿತ್ರೀಕರಣ ನಡೆಸಲು ನೀಡಿದ್ದ ಅನುಮತಿಯನ್ನೇ ರದ್ದು ಮಾಡಿತ್ತು. ಕೊನೆಗೆ ಲಿಬಿಯಾದ ಮುಅಮ್ಮರ್ ಗಡಾಫಿಯ ಪ್ರಾಯೋಜಕತ್ವದಲ್ಲಿ ಸಿನಿಮಾ ನಿರ್ಮಾಣ ಪೂರ್ಣಗೊಂಡಿತ್ತಾದರು ಚಿತ್ರ ತಯಾರಕರಿಗೆ ಗಡಾಫಿಯಿಂದ ಹೊಸ ರಾಜಕೀಯ ಮತ್ತು ಪ್ರಾಯೋಗಿಕ ಸಮಸ್ಯೆಗಳು ಸುತ್ತಿಕೊಂಡಿದ್ದವು. ಹಾಗೂಹೀಗೂ ಚಿತ್ರೀಕರಣ ಮುಗಿಸಿ ಅಮೆರಿಕಾದ ವಾಷಿಂಗ್ಟನ್ ಡಿ.ಸಿ.ಯಲ್ಲಿ ಚಿತ್ರದ ಪ್ರೀಮಿಯರ್ ಶೋ ನಡೆಯಬೇಕೆನ್ನುವಾಗ, ಪ್ರವಾದಿ ಮೊಹಮದ್‌ರ ಪಾತ್ರವನ್ನು ಆಂತೋಣಿ ಕ್ವಿನ್ ಎಂಬ ಅಮೆರಿಕ ಕ್ರಿಶ್ಚಿಯನ್ ನಟ ನಿರ್ವಹಿಸಿದ್ದಾನೆ ಎಂಬ ತಪ್ಪುಗ್ರಹಿಕೆಯಲ್ಲಿ (ಆಂತೋಣಿ ಕ್ವಿನ್ ನಿರ್ವಹಿಸಿದ್ದು ಪ್ರವಾದಿ ಮೊಹಮದ್‌ರ ಚಿಕ್ಕಪ್ಪ ಹಮ್ಜಾ ಎನ್ನುವ ಪಾತ್ರವನ್ನು) ಚಿತ್ರ ಪ್ರದರ್ಶನವಾಗುವ ಥಿಯೇಟರ್ ಕಟ್ಟಡವನ್ನೇ ಸ್ಫೋಟಿಸುತ್ತೇವೆ ಎಂಬ ಬೆದರಿಕೆ ಕೆಲ ಮುಸ್ಲಿಂ ಮೂಲಭೂತವಾದಿಗಳಿಂದ ಬಂದಿತ್ತು, ಅಂತಹ ಅನಾಹುತ ನಡೆಯದೇ ಹೋದರೂ, ಈ ಎಲ್ಲಾ ಕೀಕಲಾಟಗಳಿಂದಾಗಿ ಚಿತ್ರ ಬಾಕ್ಸಾಫೀಸ್‌ನಲ್ಲಿ ಗಟ್ಟಿಗೆ ನಿಂತುಕೊಳ್ಳಲಾಗಲಿಲ್ಲ.




## 'ಫತ್ವಾ ಅನ್ನೋದು ಸೆಕ್ಸಿ ಪದವಾಗಿದೆ'



ಎ.ಆರ್. ರೆಹಮಾನ್ ವಿರುದ್ಧ ಫತ್ವಾ ಹೊರಡಿಸಿರುವುದಕ್ಕೆ ಪ್ರತಿಕ್ರಿಯೆ ನೀಡಿರುವ ಖ್ಯಾತ ಚಿತ್ರ ಸಾಹಿತಿ ಜಾವೇದ್ ಅಖ್ತರ್ ಫತ್ವಾದ ನೈಜ ಅರ್ಥ ಮತ್ತು ಪ್ರಸ್ತುತ ರಂಜನೀಯತೆಯನ್ನು ಹೀಗೆ ಬಿಡಿಸಿಟ್ಟಿದ್ದಾರೆ: "ಇತ್ತೀಚಿನ ದಿನಗಳಲ್ಲಿ ಫತ್ವಾ ಅನ್ನೋದು ಬಹಳಷ್ಟು ಜನರ ಪಾಲಿಗೆ, ಮುಖ್ಯವಾಗಿ ಮಾಧ್ಯಮದವರಿಗೆ, ಬಲು ಪ್ರಧಾನ ಸಂಗತಿಯಾಗಿದೆ. ಯಾವುದೇ ಬಗೆಯ ಹೇಳಿಕೆಗಳನ್ನೂ ಸುಲಭವಾಗಿ ಫತ್ವಾ ಅಂತ ಕರೆದುಬಿಡುತ್ತಿದ್ದಾರೆ. ಮಾಧ್ಯಮದವರಿಗೆ ಫತ್ವಾ ಅನ್ನೋದು ಸೆಕ್ಸಿ ಪದವಾಗಿಬಿಟ್ಟಿದೆ. ಆದರೆ ಬಹಳಷ್ಟು ಜನಕ್ಕೆ ಫತ್ವಾ ಎಂಬುದರ ಅರ್ಥವೇ ಗೊತ್ತಿದ್ದಂತಿಲ್ಲ. ಇದು ಮುಸ್ಲಿಂರ ಒಂದು ಸಂಪ್ರದಾಯವಷ್ಟೆ. ನಿಮಗೆ ಯಾವುದೇ ಒಂದು ಸಮಸ್ಯೆ ಬಾಧಿಸುತ್ತಿದ್ದಾಗ ಧಾರ್ಮಿಕ ಮುಖಂಡ ಖಾಜಿಯ ಬಳಿ ಹೋಗುತ್ತೀರಿ. ನಿಮ್ಮ ಸಮಸ್ಯೆಯನ್ನು ಬರೆದುಕೊಟ್ಟು ಈ ವಿಷಯದ ಕುರಿತಂತೆ ನಿಮ್ಮ ಮತ್ತು ಇಸ್ಲಾಂ ಪ್ರಕಾರ ಅಭಿಪ್ರಾಯವೇನು, ನಾನೀಗ ಏನು ಮಾಡಬೇಕು ಎಂದು ಕೇಳುತ್ತೀರಿ. ಆತ ನಿಮಗೊಂದು ಉತ್ತರ ಕೊಡುತ್ತಾನೆ ಮತ್ತು ಕೊನೆಯಲ್ಲಿ 'ಇದು ನನಗನ್ನಿಸಿದ್ದು ಮಾತ್ರ, ದೇವರಿಗೆ ಮಾತ್ರ ಚೆನ್ನಾಗಿ ಗೊತ್ತು' ಎಂದು ಬರೆಯುತ್ತಾನೆ. ಇದೇ ಸಮಸ್ಯೆಯನ್ನಿಟ್ಟುಕೊಂಡು ಮತ್ತೊಬ್ಬ ಖಾಜಿಯ ಬಳಿ ಹೋಗುತ್ತೀರಿ. ಆಗ ಆತ ಮೊದಲನೇ ಖಾಜಿ ನೀಡಿದ್ದಕ್ಕಿಂತ ವಿಭಿನ್ನವಾದ ಸಲಹೆಯನ್ನು ನೀಡಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಫತ್ವಾಗಳಿಗೆ ಸುಗ್ರೀವಾಜ್ಞೆ ಅಥವಾ ಮರಣಶಾಸನದಂತಹ ಛಾಯೆಯನ್ನು ಆರೋಪಿಸಲಾಗುತ್ತಿದೆ. ಫತ್ವಾಗಳ ಕುರಿತು ನಾವು ಅಷ್ಟಾಗಿ ಗಮನ ಕೊಡದಿರುವುದೇ ಲೇಸು. ಕೆಲ ವರ್ಷಗಳ ಕೆಳಗೆ ಒಂದು ಟಿವಿ ಚಾನೆಲ್ ಫತ್ವಾಗಳ ಕುರಿತು ಕುಟುಕು ಕಾರ್ಯಾಚರಣೆ ನಡೆಸಿತ್ತು, ಅದರಲ್ಲಿ ಬಹಿರಂಗವಾದಂತೆ ಕೆಲ ಖಾಜಿಗಳು 10 ಸಾವಿರಕ್ಕಿಂತಲೂ ಕಡಿಮೆ ಹಣಕ್ಕೆಲ್ಲ ಫತ್ವಾಗಳನ್ನು ಹೊರಡಿಸುತ್ತಿದ್ದುದು ಬಹಿರಂಗವಾಗಿತ್ತು, ಮಾರುಕಟ್ಟೆಯಲ್ಲಿ 10 ಸಾವಿರಕ್ಕೆ ಬಿಕರಿಯಾಗುವ ಸರಕೊಂದು 18 ಕೋಟಿ ಜನರ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರಬಲ್ಲದೆ? ನಾವು ಫತ್ವಾಗಳನ್ನು ನಿರ್ಲಕ್ಷಿಸಬೇಕಷ್ಟೆ."

# ಮೈಷುಗರ್-ಮಹಿಷಾಸುರರ ಮುಷ್ಟಿಯಲ್ಲಿ...

06

3. ಕೋ ಜೆನ್ ವಿಭಾಗದ ಮಿನರಲ್ ನೀರಿನ ಘಟಕದ ದುರಸ್ತಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ತರಿಸಿಕೊಳ್ಳಲು ಮಾನ್ಯರು 95 ಲಕ್ಷದ 50 ಸಾವಿರ ರೂಪಾಯಿಗಳಿಗೆ ಆರ್ಡರ್ ಕೊಟ್ಟಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದ ಆರ್ಡರ್ ಆದರೂ ಅದರಲ್ಲಿ ಯಾವ ಕಂಪನಿಯ ಸಾಮಗ್ರಿ, ಇತ್ಯಾದಿ ವಿವರಗಳನ್ನು ನಮೂದಿಸಿರುವುದಿಲ್ಲ. ಹೀಗಾಗಿ ತರಿಸಲಿರುವ ಸಾಮಗ್ರಿ ಕಳಪೆಯೇ ಆಗಿರುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಈ ದುರಸ್ತಿ ಸಾಮಗ್ರಿಗಳನ್ನು ಅತ್ಯಂತ ಶ್ರೇಷ್ಠ ಕಂಪನಿಗಳೆಂದು ಹೆಸರು ಮಾಡಿರುವ ಯೋಕೊಗಾಮ, ಟಾಟಾ ಹನಿವೆಲ್, ರೋಸ್‌ಮನ್ ಇಂಡಿಯಾ ಮುಂತಾದ ಕಂಪನಿಗಳಿಂದ ತರಿಸಿಕೊಂಡರೂ ಅದರ ಬೆಲೆ ಸುಮಾರು 60 ಲಕ್ಷಗಳಷ್ಟಾಗುತ್ತದೆ.

ಹೀಗೆ ಪಟ್ಟಿ ಮಾಡುತ್ತಾ ಹೋದರೆ ಲೆಕ್ಕವೇ ಇಲ್ಲ. ಈ ಕೂಟದ ಇಂಥಾ ಹಗ್ಗಣದ ನಡವಳಿಕೆ ಹಾಳಾಗಲಿ, ಕಂಪನಿ ಸರಿಯಾಗಿ ಕಾರ್ಯ ನಿರ್ವಹಿಸುವಂತಾದರೂ ಮಾಡಿದ್ದಾರೆಯೆ? ಅದೂ ಇಲ್ಲ. ಈ ಅವಧಿಯಲ್ಲಿ ಕಂಪನಿಯ ಇಡೀ ಇತಿಹಾಸದಲ್ಲೇ ಅತಿ ಕಡಿಮೆ ಅವಧಿಗೆ ಕಾರ್ಯ ನಿರ್ವಹಿಸಿದೆ. 2014-15ನೇ ಸಾಲಿನಲ್ಲಿ ಈವರೆಗೆ ನಿಗದಿತವಾಗಿ 254 ದಿನಗಳು ಕಾರ್ಯ ನಿರ್ವಹಿಸಬೇಕಿತ್ತು. ಆದರೆ ಕೆಲಸ ಮಾಡಿದ್ದು ಕೇವಲ 57% ಮಾತ್ರ. ಇದರಿಂದಾಗಿ ಕಂಪನಿಗೆ ಅಂದಾಜು 7 ಕೋಟಿ ರೂಪಾಯಿ ನಷ್ಟವಾಗಿದೆ.

ಮತ್ತೊಂದು ಕಡೆ ಇದು ರೈತರಿಗೂ ನಷ್ಟವುಂಟುಮಾಡಿದೆ. ಸಕಾಲದಲ್ಲಿ ಕಬ್ಬು ಅರೆಯದೆ ಹೋದರೆ ಕಬ್ಬು ತೂಕ ಕಳೆದುಕೊಳ್ಳುತ್ತದೆ, ಮತ್ತೊಂದೆಡೆ ಸಕ್ಕರೆ ಇಳುವರಿಯೂ ಕಡಿಮೆಯಾಗುತ್ತದೆ.

ತಮ್ಮ ಇಂಥ ದಂಧೆಗಳನ್ನು ಸುಗಮಗೊಳಿಸಿಕೊಳ್ಳಲು ಎಂ.ಡಿ ಮಹಾದೇವ ತನ್ನದೇ ಕೂಟವೊಂದನ್ನು ರಚಿಸಿಕೊಂಡಿದ್ದಾನೆ. ಈ ದುಷ್ಟಕೂಟದ ದಳಪತಿಯೇ ಹೇಮಂತಕುಮಾರ್. ಈತ ಹಾಲಿ ಕೋ-ಜೆನ್ ಪ್ಲಾಂಟ್‌ನ ಮುಖ್ಯಸ್ಥ. ಈತನನ್ನು ಸಾಮಗ್ರಿ ಖರೀದಿ ವ್ಯವಹಾರಗಳಿಗೆ ಇನ್‌ಚಾರ್ಜ್ ವಹಿಸಲಾಗಿದೆ. ಕಂಪನಿಯ ಹಣವನ್ನು ಎರಡೂ ಕೈಯಲ್ಲಿ ಮುಕ್ಕಿ ಕೊಬ್ಬಿರುವ ಈ ಹೇಮಂತ ಕುಮಾರ್‌ನ ಸೊಕ್ಕು, ಆಟಾಟೋಪ ಇಡೀ ಮೈಷುಗರ್‌ನಲ್ಲಿ ಜನಜನಿತ. ಮೈಷುಗರ್ ಆವರಣದಲ್ಲಿ ಪ್ರವೇಶಿಸಿರುವ ಪ್ರತಿಯೊಂದು ಜೀವಿಗೂ ಈತನ ಪೊಗರು ಚಿರಪರಿಚಿತ. ಈತನ ವರ್ತನೆ ಯಾವುದೇ ಅಂಡರ್‌ವರ್ಲ್ಡ್ ಗೂಂಡಾಗಳಿಗಿಂತ ಕಡಿಮೆಯೇನಿಲ್ಲ. ಎಂಡಿ ನನ್ನ ಪರವಾಗಿದ್ದಾರೆ, ಸ್ವತಃ ಮಿನಿಸ್ಟರೇ ನಮಗೆ ಬೆಂಬಲಕ್ಕಿದ್ದಾರೆ, ನೀವ್ಯಾರೂ ಏನೂ ಕಿ.... ಆಗೋಲ್ಲ ಎಂಬುದು ಈತ ಸದಾ ಬಳಸುವ ಅಚ್ಚುಮೆಚ್ಚಿನ ವಾಕ್ಯ.

ಇಂಥಾ ಹೇಮಂತ ಕುಮಾರ್ ಎಂಬ ಶನಿಯ ಕಿರುಕುಳದಿಂದ ಕಾರ್ಮಿಕರು ರೋಸಿಹೋಗಿರುವ ಸನ್ನಿವೇಶದಲ್ಲಿ ಕೆಲವು ತಿಂಗಳುಗಳ ಹಿಂದೆ ಒಂದು ಆಕಸ್ಮಿಕ



ಘಟನೆ ಸಂಭವಿಸಿತು. ದುರಹಂಕಾರವೇ ರೂಪ ತಳೆದಂತಿರುವ ಈ ಹೇಮಂತ್‌ಕುಮಾರ್ ಎಂಬ ಪ್ರಾಣಿ ಮತ್ತೊಂದು ವಿಭಾಗದಲ್ಲಿರುವ ತನ್ನ ಆಪ್ತರೊಬ್ಬರಿಗೆ ಲ್ಯಾಂಡ್ ಲೈನ್‌ನಲ್ಲಿ ಫೋನ್ ಮಾಡಿದ್ದಾನೆ. ಆ ಸಂದರ್ಭದಲ್ಲಿ ಅವರು ಆಸನದಲ್ಲಿದ್ದ ಕಾರಣ ಅಟೆಂಡರ್ ಸುಬ್ಬಣ್ಣ ಫೋನ್ ಅಟೆಂಡ್ ಮಾಡಿ "ಹಲೋ, ಯಾರು?" ಅಂದಿದ್ದಾರೆ. ಅತ್ತ ಕಡೆಯಿಂದ ಫೋನ್ ಕಟ್ ಮಾಡಿದ ಹೇಮಂತ ಕೂಡಲೇ ಧಾವಿಸಿ ಬಂದವನೇ "ನನ್ನನ್ನೇ ಯಾರು ಎಂದು ಪ್ರಶ್ನೆ ಮಾಡುತ್ತೀಯಾ? ನಿನಗೆಷ್ಟಲೇ ಸೊಕ್ಕು" ಎಂದು ನಿಂದಿಸಿ ಆ ಬಡಪಾಯಿ ಅಟೆಂಡರ್ ಸುಬ್ಬಣ್ಣನನ್ನು ವಾಚಾಮಗೋಚರವಾಗಿ ನಿಂದಿಸಿದ್ದಾನೆ.

ಈ ಘಟನೆಯಿಂದ ತೀವ್ರವಾಗಿ ನೊಂದ ಸುಬ್ಬಣ್ಣ ಮಾನ್ಯ ಎಂಡಿ ಸಾಹೇಬರಿಗೆ ದೂರು ಕೊಟ್ಟಿದ್ದಾರೆ. ಹೇಳಿಕೇಳಿ ಎಂಡಿ ಮಹಾದೇವನೇ ಈ ಹೇಮಂತಕುಮಾರ್‌ನ ಗಾಡ್‌ಫಾದರ್. ಈತ ಗೂಳಿಯಂತೆ ಕೊಬ್ಬಿ ಮೆರೆಯಲು ಅನುವು ಮಾಡಿಕೊಟ್ಟಿರುವುದೇ ಇದೇ ಎಂಡಿ. ಹೀಗಿರುವಾಗ ಆತನ ಮೇಲೆ ಕ್ರಮ ತೆಗೆದುಕೊಳ್ಳುವುದು ಎಂದರೆ ಹೇಗೆ? ಕಾರ್ಮಿಕರು ತೀವ್ರವಾಗಿ ಪ್ರತಿಭಟಿಸಿದರು. ಸುಬ್ಬಣ್ಣನ ಮೇಲೆ ಹೇಮಂತ್‌ನ ಆಟಾಟೋಪವನ್ನು ಕಣ್ಣಾರೆ ಕಂಡಿದ್ದ, ಅದೇ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ನಂದಿನಿ ಎಂಬ ಯುವತಿ ಸಾಕ್ಷ್ಯ ಹೇಳಲು ಮುಂದೆ ಬಂದರು.

ಇದನ್ನು ತಿಳಿದು ಕೆಂಡಾಮಂಡಲವಾದ ಹೇಮಂತಕುಮಾರ್ ಮರುದಿನವೇ, ಅಂದರೆ ಕಳೆದ ಏಪ್ರಿಲ್ 25ರಂದು ನಂದಿನಿ ಎಂಬ ಯುವತಿಯನ್ನು ತನ್ನ ಚೇಂಬರ್‌ಗೆ ಕರೆಸಿಕೊಂಡು, ಅವಾಚ್ಯವಾಗಿ ನಿಂದಿಸಿದ್ದಾನೆ. ತನ್ನ ವಿರುದ್ಧ ಮಾತಾಡಿದರೆ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಬೆದರಿಕೆ ಹಾಕಿದ್ದಾನೆ. ಆಕೆಯ ಕೈಯಲ್ಲಿರುವ ಫೋನ್‌ನಲ್ಲಿ ಇದನ್ನು ರೆಕಾರ್ಡ್ ಮಾಡುತ್ತಿರಬಹುದು ಎಂದು ಅನುಮಾನಗೊಂಡ ಈ ಪ್ರಾಣಿ ಆಕೆಯ ಫೋನ್ ಕಸಿದುಕೊಳ್ಳಲು ಹಿಡಿದು ಎಳೆದಾಡಿದ್ದಾನೆ. ಈ ದೌರ್ಜನ್ಯದ ಬಗ್ಗೆ ಯುವತಿ ಎಂಡಿ ಸಾಹೇಬರಿಗೆ ದೂರು ಕೊಟ್ಟಳು. ಆದರೆ ಪರಿಣಾಮ ಮಾತ್ರ ಶೂನ್ಯ.

ಈ ದುಷ್ಟಜಂತುವನ್ನು ಸ್ವತಃ ಎಂಡಿ ಮಹಾದೇವನೇ ರಕ್ಷಣೆ ಮಾಡುತ್ತಿರುವುದರಿಂದ ಈತನಿಂದ ತಮಗೆ ಮುಕ್ತಿಯಿಲ್ಲವೆಂದು ಮೊದಲೇ ರೋಸಿಹೋಗಿದ್ದ ಕಾರ್ಮಿಕರು ಮರುದಿನ ಹೇಮಂತನ ಕಚೇರಿಯ ಬಳಿ ಜಮಾಯಿಸಿದ್ದಾರೆ. ಅದೇ ಸಂದರ್ಭಕ್ಕೆ ಆ ಯುವತಿಯ ಬಂಧುಗಳೂ ಬಂದು ಸೇರಿಕೊಂಡಿದ್ದಾರೆ. ಅಕ್ಕ ಪಕ್ಕದಲ್ಲಿದ್ದ ರೈತರೂ ಜೊತೆಗೂಡಿದ್ದಾರೆ. ವಾದವಿವಾದ ತಾರಕಕ್ಕೇರಿ ಇನ್ನೇನು ಈ ಗುಂಡ್ರುಗೂಳಿಗೆ ಧರ್ಮದೇಟು ಬೀಳಬೇಕು ಎನ್ನುವಷ್ಟರಲ್ಲಿ ಎಂಡಿ ಸಾಹೇಬರ ಆಣತಿಯ ಮೇರೆಗೆ ಪೊಲೀಸ್ ಪಡೆ ತಮ್ಮ ಆಪ್ತಮಿತ್ರನ ರಕ್ಷಣೆಗೆ ಧಾವಿಸಿ ಬರಬೇಕೆ? ಅದೃಷ್ಟ ಗಟ್ಟಿಯಾಗಿದ್ದುದರಿಂದ ಈತ ಏಟು ತಿನ್ನದೇ ಬಚಾವಾದ.

ಈ ಘಟನೆಯ ನಂತರ ಎಂಡಿ ಮಹಾದೇವನ ದುಷ್ಟಕೂಟ ಮತ್ತೊಂದು ರೀತಿಯ ಪಂಚರಂಗಿ ಆಟ ಹೂಡಿತು. ತನ್ನ ಮೇಲೆ ಪ್ರಾಣಾಂತಿಕ ಹಲ್ಲೆ ಮಾಡಿದ್ದಾರೆಂದು ಆರೋಪಿಸಿ ಹೇಮಂತ್ ಒಂದು ಕಂಪ್ಲೇಂಟು ಗೀಚಿಕೊಟ್ಟ. ಎಂಡಿಯವರಿಂದ ಪ್ರಸಾದ ಸ್ವೀಕರಿಸಿದ ಪೊಲೀಸರು ಅದನ್ನು ಮತ್ತಷ್ಟು ಉತ್ಪ್ರೇಕ್ಷೆ ಮಾಡಿ ಕೇಸು ಜಟಿಲಗೊಳಿಸಿದರು. ಜೊತೆಗೆ ಮೂಳೆ ಮುರಿತ, ಹೆಡ್ ಇಂಜುರಿ ಇತ್ಯಾದಿ ಎಲ್ಲವನ್ನೂ ಸೇರಿಸಿ, ವೈದ್ಯಕೀಯ ದಾಖಲೆಗಳನ್ನೂ ಸೃಷ್ಟಿಸಿದರು.

10 ಜನ ಕಾರ್ಮಿಕರ ಮೇಲೆ ಎಫ್‌ಐಆರ್ ದಾಖಲಾಯಿತು. ಹೀಗೆ ಎಫ್‌ಐಆರ್‌ನಲ್ಲಿ ದಾಖಲಾದವರು ಯಾರು ಗೊತ್ತೆ? ಈ ದುಷ್ಟಕೂಟದ ಭ್ರಷ್ಟಾಚಾರ ಮತ್ತು ಕಿರುಕುಳದ ವಿರುದ್ಧ ಮೊದಲಿನಿಂದಲೂ ಹೋರಾಡುತ್ತಾ ಬಂದಿದ್ದ ಕಾರ್ಮಿಕರು. ಇದೇ ಎಫ್‌ಐಆರ್ ಅನ್ನು ನೆಪವಾಗಿರಿಸಿಕೊಂಡು ಎಂ.ಡಿ. ಮಹಾದೇವ 7 ಜನ ಕಾರ್ಮಿಕರನ್ನು ಕಾನೂನುಬಾಹಿರವಾಗಿ ಏಕಾಏಕಿ ಡಿಸ್‌ಮಿಸ್ ಮಾಡಿಯೇ ಬಿಟ್ಟ. ಮತ್ತೂ ಸೋಜಿಗದ ಸಂಗತಿಯೆಂದರೆ ಎಫ್‌ಐಆರ್‌ನಲ್ಲಿ ಹೆಸರಿಲ್ಲದ [illegible] ಕಾರ್ಮಿಕನನ್ನು ಕೂಡ ಇದೇ ಆರೋಪದಡಿ ಡಿಸ್[illegible] ಮಾಡಿದ್ದಾನೆ.

ವಾಸ್ತವದಲ್ಲಿ ಯಾವುದೇ ಕಾರ್ಮಿಕರನ್ನು [illegible] ಡಿಸ್‌ಮಿಸ್ ಮಾಡಲು ಆತನಿಗೆ ಯಾವ ಅಧಿಕಾ[illegible] ಇಲ್ಲ. ಮೊದಲಿಗೆ ನೋಟಿಸ್ ಜಾರಿಯಾಗಬೇಕು, [illegible] ಕೈಗೊಳ್ಳಬೇಕು. ಮೇಲುನೋಟಕ್ಕೆ ತಪ್ಪು ಸಾಬೀತ[illegible] ಕೇವಲ ಸಸ್ಪೆಂಡ್ ಮಾಡಬಹುದೇ ವಿನಃ ಡಿಸ್[illegible] ಮಾಡುವ ಅಧಿಕಾರ ಯಾರಿಗೂ ಇಲ್ಲ. ಈ ಕಾನೂನ[illegible] ಕೆಎಎಸ್ ಪರೀಕ್ಷೆ ಬರೆದು ಪಾಸಾಗಿ, ನಂತರ ಐ[illegible] ದರ್ಜೆಗೆ ಬಡ್ತಿ ಪಡೆದುಕೊಂಡಿರುವ ಮಹಾದೇವ [illegible] ಮೂರ್ಖ ಅಧಿಕಾರಿಗೆ ಗೊತ್ತಿಲ್ಲವೆ? ಖಂಡಿತ ಗೊ[illegible] ತಮ್ಮ ಅವ್ಯವಹಾರಗಳನ್ನು ಬಯಲಿಗೆಳೆಯುತ್ತಿ[illegible] ಕಾರ್ಮಿಕರನ್ನು ಮಟ್ಟ ಹಾಕಲು ಎಲ್ಲ ಕಾನೂನುಗ[illegible] ಬದಿಗೊತ್ತಿ ಅಧಿಕಾರ ಮದದಿಂದ ಮೆರೆಯುತ್ತಿದ್ದಾರೆ.

ಮೈಷುಗರ್‌ನಲ್ಲಿ ನಡೆಯುತ್ತಿರುವ ಈ [illegible] ಅವ್ಯವಹಾರಗಳಿಗೆ ಪರೋಕ್ಷ ಕುಮ್ಮಕ್ಕು ಕೊ[illegible] ಬಂದಿರುವುದು ಹಾಲಿ ಇದರ ಅಧ್ಯಕ್ಷರಾಗಿರುವ [illegible] ಸಚಿವ ಮಹದೇವ ಪ್ರಸಾದ್ ಎಂಬುದು ಇಲ್ಲಿನ ಕಾ[illegible] ಒಕ್ಕೊರಲಿನ ಅಭಿಪ್ರಾಯ. ಕಂಪನಿಯ ಅಧ್ಯಕ್ಷ, [illegible] ಹಾಗೂ ಈ ಮೆಟೀರಿಯಲ್ ಮೆನೇಜರ್ ಎಂಬ [illegible] ಹೇಮಂತ್ ಎಲ್ಲರೂ ಸ್ವಜಾತಿ ಬಂಧುಗಳು ಎಂಬ[illegible] ಕೇವಲ ಕಾಕತಾಳೀಯ ಎಂದರೆ ಯಾರಾದ[illegible] ನಂಬುತ್ತಾರೆಯೆ?

ಹೀಗೆ ನ್ಯಾಯ ಕೇಳಿದ ಕಾರ್ಮಿಕರ ಮೇಲೆ ಪೊ[illegible] ಕೇಸು / ಡಿಸ್‌ಮಿಸ್ ಮುಂತಾದ ಕಿರುಕುಳ [illegible] ದುಷ್ಟ ಆಡಳಿತ ಮಂಡಳಿಯ ನಿರ್ಧಾರವನ್ನು ವಿರೋ[illegible] ಕಾರ್ಮಿಕರು ಕಾರ್ಖಾನೆಯ ಒಳಗಡೆಯೇ ಕೆಲಸ [illegible] ಪ್ರತಿಭಟನೆ ಮಾಡುತ್ತಿದ್ದಾರೆ. ಕೆಲಸದಿಂದ ವಜಾ [illegible] ಕಾರ್ಮಿಕರು ಮತ್ತು ಇತರ ನಾಗರಿಕರು ಕಾರ್ಖಾ[illegible] ಹೊರಗಡೆ ಪ್ರತಿಭಟನೆ ನಡೆಸುತ್ತಿದ್ದಾರೆ. ಮತ್ತೊಂದೆಡೆ [illegible] ಅರೆಯುವುದು ಪ್ರಾರಂಭವಾಗುತ್ತದೋ ಇಲ್ಲವೋ [illegible] ರೈತರು ಆತಂಕಗೊಂಡಿದ್ದಾರೆ. ಈ ಮಧ್ಯೆ ಎಂಡಿ ಮಹ[illegible] ಟ್ರೈನಿಂಗ್ ಹೆಸರಿನಲ್ಲಿ ಹೋಗಿರುವುದರಿಂದ ಮ[illegible] ಭ್ರಷ್ಟ ಅಧಿಕಾರಿ ಅಯ್ಯಪ್ಪ ಹಾಲಿ ಇನ್‌ಚಾ[illegible] ತೆಗೆದುಕೊಂಡಿದ್ದಾರೆ.

ಮಂಡ್ಯದ ಹಾಲಿ ಜಿಲ್ಲಾಧಿಕಾರಿ ಸದ್ಯ ಈ [illegible] ಬೆಳವಣಿಗೆಗಳನ್ನು ಅಸಹಾಯಕರಾಗಿ ವೀಕ್ಷಿಸುತ್ತಿ[illegible] ಯಾಕೆಂದರೆ ಈ ದುಷ್ಟಕೂಟದ ವಿರುದ್ಧ ಏನಾ[illegible] ಕ್ರಮ ತೆಗೆದುಕೊಳ್ಳುವುದೆಂದರೆ ನೇರವಾಗಿ ಸಚಿವರೇ [illegible] ನಿಲ್ಲುತ್ತಾರೆಂಬುದು ಇದಕ್ಕೆ ಕಾರಣವಿರಬಹ[illegible] ಮತ್ತೊಂದ್ಕಡೆ ಮಂಡ್ಯದ ಗಂಡು ಇದ್ಯಾವುದ[illegible] ಸಂಬಂಧವಿಲ್ಲದಂತೆ ತಮ್ಮದೇ ಲೋಕದಲ್ಲಿ ತೇಲುತ್ತಿ[illegible]

ಹೀಗಿರುವಾಗ ಮೈಷುಗರ್ ಸಕ್ಕರೆ ಕಾರ್ಖಾನೆ[illegible] ಉಳಿಸಿಕೊಳ್ಳಲು ಮುಂದೆ ಬರುವವರು ಯಾರು?

ಸಚಿವ ಮಹದೇವ ಪ್ರಸಾದ್ ಎಚ್ಚರಗೊಳ್ಳ[illegible] ಸಿಎಂ ಸಿದ್ದರಾಮಯ್ಯ ಇತ್ತ ಗಮನ ಹರಿಸುತ್ತಾರೆಯ[illegible]

• ದೊಡ್ಡಿಪಾಳ್ಯ ನರಸಿಂಹಮೂ[illegible]

# ನೇಪಾಳದಲ್ಲಿ ಹೊಸ ಸಂವಿಧಾನ...

03

"ಅಂಬೇಡ್ಕರರ ಸಂಸದೀಯ ಬದುಕಿನ ಅನುಭವವನ್ನು ಸಾರಸಂಗ್ರಹಿಸಿ ನೋಡುವುದಾದರೆ ಅಂಬೇಡ್ಕರ್ ಕಾಂಗ್ರೆಸ್ಸಿನ ವಿರೋಧಿಯಾಗಿದ್ದಾಗ ಅವರ ಬೆಂಬಲಿಗರನ್ನೆಲ್ಲಾ ಸೋಲಿಸಿ ಅವರು 'ಸಂವಿಧಾನ ಸಭೆ'ಗೆ ಕೂಡ ಆಯ್ಕೆಯಾಗದಂಥ ಪರಿಸ್ಥಿತಿಯನ್ನು ಕಾಂಗ್ರೆಸ್ ಪಕ್ಷ ನಿರ್ಮಿಸಿತ್ತು. 'ಸಂವಿಧಾನ ಸಭೆ'ಯಲ್ಲಿ ಏಕಾಂಗಿಯಾದ ಅವರು ಕಾಂಗ್ರೆಸ್‌ನೊಂದಿಗೆ ಸಹಕರಿಸುವ ತೀರ್ಮಾನವನ್ನು ತೆಗೆದುಕೊಂಡ ನಂತರ ಖುದ್ದು ತಾನೇ ಅವರನ್ನು ಆಯ್ಕೆ ಮಾಡಿಸಿತು. ಅವರನ್ನು ಸಂವಿಧಾನ ಕರಡು ರಚನೆಯ ಅಧ್ಯಕ್ಷರನ್ನಾಗಿ ಮಾಡಿ, ಅವರ ಸೇವೆಯನ್ನು ಪೂರ್ತಿಯಾಗಿ ಬಳಸಿಕೊಂಡು, ಅವರ ಪ್ರಸ್ತಾಪಗಳನ್ನು ಹೆಚ್ಚೂಕಮ್ಮಿ ಪೂರ್ತಿಯಾಗಿ ತಿರಸ್ಕರಿಸಿತು. ಅವರಿಗೆ ಆಡಳಿತಾತ್ಮಕ ಖಾತೆಗಳ್ಯಾವುವನ್ನೂ ನೀಡದೆ, ಕೇವಲ ಅಲಂಕಾರಿಕ ಕಾನೂನು ಮಂತ್ರಿಯನ್ನಾಗಿ ಮಾಡಿ ವಂಚಿಸಿತು. ಕ್ಯಾಬಿನೆಟ್‌ನಲ್ಲಿ ಅವರನ್ನು ಒಳಗೊಂಡರೂ ಶಾಸನಗಳನ್ನು ರೂಪಿಸುವ ಕಮಿಟಿಗಳಲ್ಲಿ ಸೇರಿಸಿಕೊಳ್ಳದೆ ಅವರ ಉಪಸ್ಥಿತಿಯನ್ನು ನಾಮಮಾತ್ರಗೊಳಿಸಿತು. ಅವರ ಕನಸಿನ ಹಿಂದೂ ಕೋಡ್ ಬಿಲ್ ಅನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳುತ್ತಾ, ಚರ್ಚೆಯನ್ನು ಎಳೆದಾಡಿ ಕೊನೆಗೆ ಕೈಬಿಟ್ಟಿತು. ಅದನ್ನು ಪ್ರತಿಭಟಿಸಿ, ಸರ್ಕಾರವನ್ನು ಖಂಡಿಸಿ [illegible] ಅಂಬೇಡ್ಕರರು ಸ್ವತಂತ್ರವಾಗಿ ಚುನಾವಣೆಯನ್ನು [illegible] ಕಾಂಗ್ರೆಸ್ಸು ತನ್ನ ಅನುಯಾಯಿ [illegible] ಮುಂದಿಟ್ಟುಕೊಂಡು ಅಂಬೇಡ್ಕರರನ್ನು [illegible] ಶಾಸನ ಸಭೆಗೆ ಮತ್ತೆ ಬರದಂತೆ



ತಡೆಗಟ್ಟಿತು."

ಹೋಗಲಿ ಅಂಬೇಡ್ಕರ್ ಅವರ ಸೋಲಿಗೆ ಕಾಂಗ್ರೆಸ್ ಕಾರಣವಲ್ಲ, ಎಫ್‌ಪಿಟಿಪಿ ಚುನಾವಣಾ ಮಾದರಿಯೂ ಕಾರಣವಲ್ಲ, ಬದಲಾಗಿ ಅವರು ಜನಪ್ರಿಯತೆಯನ್ನು ಕಳೆದುಕೊಂಡಿದ್ದು ಕಾರಣವಾ ಎಂದು ನೋಡಿದರೆ ಇನ್ನೊಂದು ಅಚ್ಚರಿ ಗೊತ್ತಾಗುತ್ತದೆ. ಅದನ್ನು ನೂರ್ ಅವರು ಅದೇ ಲೇಖನದಲ್ಲಿ ಹೀಗೆ ದಾಖಲಿಸಿದ್ದಾರೆ:

"ಅಂಬೇಡ್ಕರರ ಈ ಸೋಲನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು? ಅವರಿಗೆ ಜನಬೆಂಬಲ ಕಡಿಮೆಯಾಯಿತು ಎಂದೆ? ಖಂಡಿತ ಅಲ್ಲ. ಹಾಗೆ ನೋಡಬೇಕೆಂದರೆ ಆಗ ಅಂಬೇಡ್ಕರ್ ಜನಪ್ರಿಯತೆಯ ಉತ್ತುಂಗದಲ್ಲಿ ಇದ್ದರು. ಆದರೂ ಸೋಲನ್ನು ಅನುಭವಿಸಬೇಕಾಯಿತು. ವಾಸ್ತವದಲ್ಲಿ ಇದು ಅಂಬೇಡ್ಕರರ ಸೋಲಾಗಿರಲಿಲ್ಲ, ಬದಲಿಗೆ ಅದು ಪೂನಾ ಒಪ್ಪಂದದಲ್ಲಿನ ಮಾದರಿಯಂತೆ ಜಾರಿಗೆ ತರಲಾದ, ಯಾವುದನ್ನು ಅಂಬೇಡ್ಕರ್ ನಿರಂತರವಾಗಿ ವಿರೋಧಿಸುತ್ತಾ ಬಂದರೋ ಅಂತಹ ಕುತಂತ್ರಮಯಿ ಪ್ರಸ್ತುತ ಚುನಾವಣಾ ಮಾದರಿಯ ವಿಜಯವಾಗಿತ್ತು. 'ಹಿಂದೂಗಳ 'ಆಯ್ಕೆ'ಯ ವ್ಯಕ್ತಿಯಾಗದಿರಲು ಮತ್ತು ಅವರ ಕೈಯಲ್ಲಿನ ಸಾಧನವಾಗದಿರಲು ಒಪ್ಪದ ಯಾವ ಅಸ್ಪೃಶ್ಯನೂ ಹಿಂದೂಗಳು ಹಲವಾರು ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿರುವ ಮಿಶ್ರ ಮತಕ್ಷೇತ್ರದಲ್ಲಿ ಚುನಾಯಿತನಾಗಲು ಸಾಧ್ಯವೇ ಇಲ್ಲ' ಎಂಬ ಅಂಬೇಡ್ಕರರ ದಾರ್ಶನಿಕ ನುಡಿ ಸ್ವಯಂ ಅಂಬೇಡ್ಕರರ ವಿಚಾರದಲ್ಲೂ ನಿಜವಾಗಿತ್ತು."

ಇದು ಬರೀ ಅಂಬೇಡ್ಕರ್ ಅವರಿಗೆ ಅಂದು ಆದ ಅನ್ಯಾಯ ಮಾತ್ರವಲ್ಲ, ಅಥವಾ ಇಂದಿಗೂ ದಲಿತರಿಗೆ ಆಗುತ್ತಿರುವ ಮೋಸವೂ ಅಲ್ಲ, ಬದಲಾಗಿ ಇಲ್ಲಿನ ಎಲ್ಲಾ ದಮನಿತ ಅಲ್ಪಸಂಖ್ಯಾತ, ಶೋಷಿತ ಸಮುದಾಯ[illegible] ಆಗುತ್ತಿರುವ ಅನ್ಯಾಯ. ಹಾಗಾದರೆ ಇದನ್ನು [illegible] ಮಾಡುವುದು ಹೇಗೆ?


ಒಂದು ಮಾರ್ಗ ನೇಪಾಳ ಈಗ ಜಾರಿಗೆ ತಂ[illegible] ಸಂವಿಧಾನದಂತೆ ಇಲ್ಲೂ ಸಮುದಾಯ ಆ[illegible] ಮತದಾನದ ಕ್ರಮವನ್ನು ಜಾರಿಗೆ ತರುವುದು. [illegible] ಮಾಡಿದಾಗ ಇಲ್ಲಿ ದಲಿತರಿಗೆ, ಮುಸಲ್ಮಾನರಿಗೆ, ರೈ[illegible] ಕಾರ್ಮಿಕರಿಗೆ, ವಿವಿಧ ಭಾಷಾ ಅಲ್ಪಸಂಖ್ಯಾತರಿಗೆ [illegible] ಹಂಗೂ ಇಲ್ಲದ ಪ್ರಾತಿನಿಧ್ಯ ಸಿಗುತ್ತದಲ್ಲದೆ, ಎಲ್ಲ [illegible] ಜಾತಿ, ಸಮುದಾಯಗಳಿಗೆ ದನಿಯೂ ಸಿಗುತ್ತದೆ.

ಅಷ್ಟು ಮಾಡಿದ ಮಾತ್ರಕ್ಕೆ ಇಲ್ಲಿ ಸಮಾನ ಸಮಾ[illegible] ನಿರ್ಮಿಸಲು ಸಾಧ್ಯವಾಗುವುದು ಎಂಬ [illegible] ಇಟ್ಟುಕೊಳ್ಳುವ ಅಗತ್ಯವಿಲ್ಲ. ಅಂತಹ ಒಂದು ಪಯ[illegible] ವ್ಯವಸ್ಥೆಯ ಜೊತೆಗೆ ಇನ್ನೂ ಹಲವಾರು [illegible] ಕಾರ್ಯಕ್ರಮಗಳು ಮತ್ತು ಯೋಜನೆಗಳ ಅವಶ್ಯಕತೆ[illegible] ಇರುತ್ತದೆ.


ನಿಜವಾಗಲೂ ಅಂಬೇಡ್ಕರ್ ಅವರ [illegible] ಸಮಾಜವನ್ನು ನಾವು ಇಲ್ಲಿ ಸ್ಥಾಪಿಸಲು ಇಚ್ಛಿಸಿದರೆ, [illegible] ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ[illegible] ಮುಟ್ಟಬೇಡಿ' ಎಂದು ಧೋರಣೆಯನ್ನು ಕೈಬಿಟ್ಟು, [illegible] ಎಫ್‌ಪಿಟಿಪಿ ಚುನಾವಣೆ ಮಾದರಿಯನ್ನು [illegible] ವಿರೋಧಿಸಿದ್ದರೋ ಅದನ್ನು ನಾವೂ ವಿರೋಧಿಸುತ್ತ [illegible] ಆಶಿಸಿದ್ದ 'ಸಮುದಾಯ ಆಧಾರಿತ' ಪದ್ಧತಿ [illegible] ಬರುವಂತೆ ಹೋರಾಟ ಮಾಡಬೇಕಿದೆ.

• ಗೌರಿ ಲಂಕೇ[illegible]


# ಪತ್ರಶೋಧಕರನ್ನು ಕೊಂದವರು ಯಾರು?



ಗೋವಿಂದ ಪನ್ಸಾರೆ



ನರೇಂದ್ರ ದಾಭೋಲ್ಕರ್



ಡಾ। ಕಲಬುರ್ಗಿ

ಮಹಾರಾಷ್ಟ್ರದ ಖ್ಯಾತ ವಿಚಾರವಾದಿ ನರೇಂದ್ರ ದಾಭೋಲ್ಕರ್‌ರನ್ನು ಗುಂಡಿಟ್ಟು ಕೊಂದ ಹಂತಕರ ಪತ್ತೆ ಇದುವರೆಗೆ ಆಗಿಲ್ಲ. ಆದರೆ ಮತ್ತೋರ್ವ ವಿಚಾರವಾದಿ ಕಾಮ್ರೇಡ್ ಗೋವಿಂದ ಪನ್ಸಾರೆಯವರ ಹತ್ಯೆಗೆ ಸಂಬಂಧಿಸಿ ಶಂಕಿತ 'ಸನಾತನ ಸಂಸ್ಥೆ'ಯ ಕಾರ್ಯಕರ್ತನಾದ ಸಮೀರ್ ವಿಷ್ಣು ಗಾಯಕ್‌ವಾಡ್ ಎಂಬಾತನನ್ನು ಮಹಾರಾಷ್ಟ್ರ ಪೊಲೀಸರ ವಿಶೇಷ ತನಿಖಾ ತಂಡವೊಂದು ಇದೇ ಸೆಪ್ಟೆಂಬರ್ 16ರ ತಡರಾತ್ರಿ ಸಾಂಗ್ಲಿ ಪಟ್ಟಣದಲ್ಲಿ ಬಂಧಿಸಿರುವುದಾಗಿ ತಿಳಿದುಬಂದಿದೆ. ಈತ ಹತ್ಯೆಯ ಸಂಚು ರೂಪಿಸಿದವರಲ್ಲೊಬ್ಬ ಮತ್ತು ಈತ ಹಾಗೂ ಈತನ ಕುಟುಂಬ 1998ರಿಂದಲೂ 'ಸನಾತನ ಸಂಸ್ಥೆ'ಯ ಸಕ್ರಿಯ ಸದಸ್ಯರೆಂದು ತನಿಖಾ ತಂಡದ ನೇತೃತ್ವ ವಹಿಸಿದ ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಈ ಮಾಹಿತಿ ತಿಳಿಯುತ್ತಲೆ ಕರ್ನಾಟಕದ ಸಿಐಡಿ ಅಧಿಕಾರಿಗಳೂ ಸಹ ಡಾ। ಕಲಬುರ್ಗಿಯವರ ಕೊಲೆಗೆ ಸಂಬಂಧಿಸಿದಂತೆ ಈತನ ವಿಚಾರಣೆ ನಡೆಸಲು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಈ ಸಂದರ್ಭದಲ್ಲಿ ಈ 'ಸನಾತನ ಸಂಸ್ಥೆ' ಎಂಬ ಸಂಘಟನೆಯ ಶೈಲಿ ಮತ್ತು ಇತಿಹಾಸವನ್ನು ಒಂದಿಷ್ಟು ಕೆದಕಬೇಕಾದ ಅವಶ್ಯಕತೆ ಇದೆ.

ಭಾವುಕ ಭಕ್ತರಲ್ಲಿ ಪೂಜ್ಯ ಭಾವನೆ ಮೂಡಿಸುವಂತಹ ಹೆಸರನ್ನು ಇಟ್ಟುಕೊಂಡಿರುವ ಸಂಸ್ಥೆಯೊಂದು ತೆರೆಮರೆಯಲ್ಲಿ ವಿಧ್ವಂಸಕಾರಿ ಚಟುವಟಿಕೆಗಳಲ್ಲಿ ತೊಡಗಿರಬಹುದು ಎಂದರೆ ಯಾರೂ ಅದನ್ನು ಸುಲಭದಲ್ಲಿ ನಂಬುವುದಿಲ್ಲ. ಆದರೆ ಸತ್ಯಾಂಶಗಳನ್ನು ಮುಂದಿಟ್ಟಾಗಲಷ್ಟೆ ಪ್ರಖರ ಸತ್ಯದ ದರ್ಶನ ಆಗುತ್ತದೆ. ಆಧ್ಯಾತ್ಮಿಕತೆಯ ಸೋಗಿನಲ್ಲಿ ನಡೆದಿರುವಂತಹ ದುಷ್ಕೃತ್ಯಗಳ ಕುರಿತ ವರದಿಗಳು ಮತ್ತು ಲೇಖನಗಳು ಹಲವಾರು ರಾಷ್ಟ್ರೀಯ ಮಟ್ಟದ ಮಾಧ್ಯಮಗಳಲ್ಲಿ ಈಗಾಗಲೆ ಪ್ರಕಟವಾಗಿವೆ. ಇಂದು ಕರ್ನಾಟಕವೂ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿರುವ ಈ ಸಂಘ ಪರಿವಾರದ ಅಂಗಸಂಸ್ಥೆ ಆರಂಭವಾದುದು 1990ರಲ್ಲಿ. ಇದರ ರಾಷ್ಟ್ರೀಯ ಮುಖ್ಯಕಚೇರಿ ಇರುವುದು ಗೋವಾದ ಪೋಂಡಾದಲ್ಲಿರುವ ಸನಾತನ ಆಶ್ರಮದಲ್ಲಿ. ಗೋವಾ ರಾಜ್ಯದ ನೋಂದಣಿ ದಾಖಲೆಗಳಲ್ಲಿ 'ಸನಾತನ ಸಂಸ್ಥೆ' ಒಂದು ಚಾರಿಟೆಬಲ್ ಟ್ರಸ್ಟ್‌ಯೆಂದು ದಾಖಲಿಸಲ್ಪಟ್ಟಿದೆ. ಈ ಸಂಸ್ಥೆ ಪುಣೆ, ಸಿಂಧುದುರ್ಗ, ಕೊಲ್ಹಾಪುರ, ಸಾಂಗ್ಲಿ ಮೊದಲಾದ ಕಡೆಗಳಲ್ಲಿ ಸಕ್ರಿಯವಾಗಿದೆ. ಅದರ ಶಾಖೆಗಳು ಆಸ್ಟ್ರೇಲಿಯಾದ ಸಿಡ್ನಿ ಮತ್ತು ಮೆಲ್ಬೋರ್ನ್ ನಗರಗಳಲ್ಲಿ, ಅಮೆರಿಕದ ನ್ಯೂ ಜೆರ್ಸಿ ಮತ್ತು ದುಬೈ ಮುಂತಾದೆಡೆಗಳಲ್ಲಿಯೂ ಕಾರ್ಯಾಚರಿಸುತ್ತಿವೆ.

ಈ ಸಂಸ್ಥೆಯ ವತಿಯಿಂದ ಗೋವಾ, ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಕರ್ನಾಟಕಗಳಲ್ಲಿ 'ಸನಾತನ ಪ್ರಭಾತ' ಎಂಬ ಒಂದು ನಿಯತಕಾಲಿಕವನ್ನು ಪ್ರಕಟಿಸಲಾಗುತ್ತಿದ್ದು ಅದರಲ್ಲಿ 'ಹಿಂದೂ ರಾಷ್ಟ್ರ ಸ್ಥಾಪನೆಗಾಗಿ ಸಾಪ್ತಾಹಿಕ" ಎಂಬ ಧ್ಯೇಯವಾಕ್ಯವನ್ನು ಕಾಣಬಹುದು. ಸಂಸ್ಥೆ ಪ್ರಕಟಿಸುವ ವಾರ್ಷಿಕ 'ಸನಾತನ ಪಂಚಾಂಗ'ದಲ್ಲಿ 'ಜಾತಿ-ಪ್ರಾಂತ್ಯಗಳನ್ನು ಮರೆತು ಧರ್ಮಬಂಧುತ್ವ ಜಾಗೃತಗೊಳಿಸೋಣ ! ರಾಷ್ಟ್ರ ಮತ್ತು ಧರ್ಮದ ಉತ್ಕರ್ಷಕ್ಕಾಗಿ ಹಿಂದೂರಾಷ್ಟ್ರವನ್ನು ಸ್ಥಾಪಿಸೋಣ !!' ಎಂದು ಕರೆಕೊಡಲಾಗಿದೆ. ಇಷ್ಟು ಮಾತ್ರವಲ್ಲ, 'ಲವ್ ಜಿಹಾದ್' ಮತ್ತು 'ಮತಾಂತರ' (ಪ್ರಕಾಶನ: 2011) ಎಂಬ ಪ್ರಚೋದನಕಾರಿ ಪುಸ್ತಕಗಳ ಸಾವಿರಾರು ಪ್ರತಿಗಳನ್ನು ಮುದ್ರಿಸಿ ಸಂಚಾರಿ ಮಳಿಗೆಗಳ ಮೂಲಕ ಊರೂರುಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಹಿಂದೂ ರಾಷ್ಟ್ರ ಎರಬಂದು ಸಂಪೂರ್ಣ [illegible]ಬಾಹಿರವೆಂದು ಮಹಾರಾಷ್ಟ್ರದ MCOCA ನ್ಯಾಯಾಲಯ ಹೇಳಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

## ಥಾಣೆ, ಪನ್ವೆಲ್ ಮತ್ತು ವಾಶಿ ಸ್ಫೋಟಗಳು

2008ರಲ್ಲಿ ಮಹಾರಾಷ್ಟ್ರದ ಥಾಣೆ, ಪನ್ವೆಲ್ ಮತ್ತು ವಾಶಿಗಳಲ್ಲಿ ಬಾಂಬ್ ಸ್ಫೋಟಿಸಿದ ಅಪರಾಧಕ್ಕಾಗಿ ಈ ಸಂಸ್ಥೆಯ ಕಾರ್ಯಕರ್ತರಾದ ರಮೇಶ್ ಗಡ್ಕರಿ ಮತ್ತು ವಿಕಮ್ ಭಾವೆ ಎಂಬವರಿಗೆ ಮುಂಬಯಿ ನ್ಯಾಯಾಲಯವೊಂದು (2011ರಲ್ಲಿ) ಹತ್ತು ವರ್ಷಗಳ ಸಜೆ ವಿಧಿಸಿದೆ. ಮಿಕ್ಕ ನಾಲ್ವರು ಖುಲಾಸೆಗೊಂಡಿದ್ದಾರೆ. ಪನ್ವೆಲ್, ವಾಶಿ, ಥಾಣೆ, ರತ್ನಗಿರಿ ಮೊದಲಾದ ಕಡೆಗಳಲ್ಲಿ [illegible] ನಡೆಸುತ್ತಿದ್ದ ಸ್ಫೋಟಗಳ [illegible] ಸಂಸ್ಥೆಯ [illegible] ಮೊದಲು ಪತ್ತೆ [illegible] ಅಂದು ಮಹಾರಾಷ್ಟ್ರ ಎಟಿಎಸ್‌ನ ಮುಖ್ಯಸ್ಥರಾಗಿದ್ದ ದಿವಂಗತ ಹೇಮಂತ ಕರ್ಕರೆ. ಮಾಲೇಗಾಂವ್ [illegible] ಸ್ಫೋಟಗಳನ್ನು ನಡೆಸಿದವರೂ ಕೇಸರಿ ಉಗ್ರರು [illegible]

ಯಾರೆಂದು ಇಂದಿಗೂ ನಿಗೂಢವಾಗಿ ಉಳಿದಿದೆ.

## ಮೀರಜ್ ಕೋಮು ಗಲಭೆ

2009ರ ಸೆಪ್ಟಂಬರ್ ತಿಂಗಳಲ್ಲಿ ಮಹಾರಾಷ್ಟ್ರದ ಮೀರಜ್‌ನಲ್ಲಿ ನಡೆದ ಕೋಮು ಗಲಭೆಯ ಹಿಂದೆಯೂ 'ಸನಾತನ ಸಂಸ್ಥೆ'ಯ ಕೈಚಳಕ ಇತ್ತೆನ್ನಲಾಗಿದೆ. ಗಲಭೆಗೆ ಮುನ್ನ ಕೋಮು ವಿಷಪೂರಿತ ಲೇಖನಗಳಿದ್ದ 'ಸನಾತನ ಪ್ರಭಾತ'ದ ಪ್ರತಿಗಳನ್ನು ಹಂಚಲಾಗಿತ್ತು. ಇವುಗಳಲ್ಲೊಂದು ಲೇಖನ 'ಲವ್ ಜಿಹಾದ್' ಕುರಿತಾಗಿತ್ತು. ಆ ಲೇಖನದಲ್ಲಿ "…. ಪಾಕಿಸ್ತಾನಿ ಉಗ್ರರ ತಂಡಗಳು ಭಾರತದಾದ್ಯಂತದಿಂದ ಸುಮಾರು 4000 ಮತ್ತು ಕೇವಲ ಕೇರಳ ರಾಜ್ಯವೊಂದರಿಂದಲೆ ಸುಮಾರು 500 ಹಿಂದೂ ಯುವತಿಯರನ್ನು ಅಪಹರಿಸಿವೆ. ಆ ಯುವತಿಯರನ್ನೆಲ್ಲ ಬಲಾತ್ಕಾರದಿಂದ ಮತಾಂತರಗೊಳಿಸಿ ಅವರಿಗೆ ಆತ್ಮಾಹುತಿ ಮತ್ತು ಭಯೋತ್ಪಾದಕ ಕೃತ್ಯಗಳಲ್ಲಿ ತರಬೇತಿ ನೀಡಲಾಗುತ್ತಿದೆ ಎಂದು ಪೊಲೀಸರು ಶಂಕಿಸುತ್ತಿದ್ದಾರೆ….." ಇವೇ ಮುಂತಾದ ಆಧಾರರಹಿತ ಮಾಹಿತಿಗಳನ್ನು ನೀಡಲಾಗಿತ್ತು. ಈ ಕೋಮು ವಿಷಪೂರಿತ ಲೇಖನಗಳಿಗೂ ಗಲಭೆಗೂ ಸಂಬಂಧ ಇರುವುದನ್ನು ಕಂಡುಕೊಂಡ ಮೀರಜ್ ಪೊಲೀಸರು ಅಂದು 'ಸನಾತನ ಪ್ರಭಾತ'ದ ಗೋವಾ ಆವೃತ್ತಿಯ ಸಂಪಾದಕನಾದ ಪೃಥ್ವಿರಾಜ್ ಹಜಾರೆಯನ್ನು ಬಂಧಿಸಿದ್ದರು.

## ಮಡಗಾಂವ್ ಸ್ಫೋಟ

ಇದೇ 'ಸನಾತನ ಸಂಸ್ಥೆ'ಯ ಕಾರ್ಯಕರ್ತರು ನಂತರ ಗೋವಾದ ಮಡಗಾಂವ್‌ನ ಶಾಂತದುರ್ಗಾ ಮಂದಿರದಲ್ಲಿ ಬಾಂಬ್ ಸ್ಫೋಟಿಸಲು ಸಂಚು ನಡೆಸಿದ್ದರು. ಸ್ಫೋಟದ ಆರೋಪವನ್ನು ಮುಸಲ್ಮಾನರ ತಲೆಗೆ ಕಟ್ಟುವುದು ಅವರ ಉದ್ದೇಶವಾಗಿತ್ತು. ಆದರೆ 16 ಅಕ್ಟೋಬರ್ 2009ರಂದು ಸ್ಕೂಟರ್‌ನಲ್ಲಿ ಬಾಂಬ್ ಸಾಗಿಸುತ್ತಿದ್ದಾಗ ಅಕಸ್ಮಾತ್ತಾಗಿ ಬಾಂಬ್ ಸ್ಫೋಟಿಸಿ ಮಾಲ್‌ಗೌಂಡ ಪಾಟೀಲ್ ಮತ್ತು ಯೋಗೇಶ್ ನಾಯಕ್ ಎಂಬ ಇಬ್ಬರು ಕಾರ್ಯಕರ್ತರು ಸಾವಿಗೀಡಾದರು. ಈ ಸಂಬಂಧ ವರ್ನಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ (ಅಪರಾಧ ಸಂಖ್ಯೆ: 114/2009 u/s 121A, 122, 123 IPC r/w 16,17,18 of Unlawful Activities Prevention Act 2008 and sec 4 & 5 of Explosive Substance Act 1908). ತನಿಖೆ ಆರಂಭಿಸಿದ ಗೋವಾ ಪೊಲೀಸರಿಗೆ ಸಂಸ್ಥೆಯ ಸದಸ್ಯರು ಕಳೆದ ಸುಮಾರು ನಾಲ್ಕು ವರ್ಷಗಳಿಂದ ಶಸ್ತ್ರಾಸ್ತ್ರ ತರಬೇತಿ ಪಡೆಯುತ್ತಿದ್ದ ಬಗ್ಗೆ, ಅಮೋನಿಯಂ ನೈಟ್ರೇಟ್‌ನಂತಹ ಸ್ಫೋಟಕಗಳನ್ನು ಖರೀದಿಸಿರುವ ಬಗ್ಗೆ ಪುರಾವೆಗಳು ಲಭ್ಯವಾಗಿವೆ. ಮಾಲೆಗಾಂವ್ ಮತ್ತಿತರ ಸ್ಫೋಟ ಪ್ರಕರಣಗಳಲ್ಲಿ ಆರೋಪಿಯಾಗಿರುವ 'ಅಭಿನವ್ ಭಾರತ್' ಮತ್ತು 'ಸನಾತನ ಸಂಸ್ಥೆ' ನಡುವೆ ಸಂಪರ್ಕಗಳಿದ್ದ ವಿಚಾರ ತಿಳಿಯುತ್ತಲೆ ತನಿಖೆಯನ್ನು ಭಯೋತ್ಪಾದಕ ಕೃತ್ಯಗಳ ತನಿಖೆಗೆಂದೇ ಇರುವ ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಹಸ್ತಾಂತರಿಸಲಾಯಿತು. ಈ 'ಅಭಿನವ್ ಭಾರತ್' ಸಂಘಪರಿವಾರದ ಮತ್ತೊಂದು ಅಂಗಸಂಸ್ಥೆಯಾಗಿದೆ. ಗೋವಾ ಪೊಲೀಸರ ಪ್ರಕಾರ ಮಾಲ್‌ಗೌಂಡ ಪಾಟೀಲ್ ಮತ್ತು 'ಅಭಿನವ್ ಭಾರತ್'ನ ಸಾಧ್ವಿ ಪ್ರಜ್ಞಾಸಿಂಗ್ ಠಾಕುರ್ ಫೋನ್ ಮೂಲಕ ಸಂಭಾಷಿಸುತ್ತಿದ್ದರು. ಆತ ಮತ್ತೊಬ್ಬ ಆರೋಪಿಯಾದ ಲೆ। ಕ। ಪುರೋಹಿತ್ ಜೊತೆ ಕೂಡ ಮಾತನಾಡುತ್ತಿದ್ದ ಎನ್ನಲಾಗಿದೆ. ಪಾಟೀಲ್ ದೇಶಾದ್ಯಂತ 70ಕ್ಕೂ ಅಧಿಕ ಬ್ಯಾಂಕ್ ಖಾತೆ ಹೊಂದಿರುವ ಟ್ರಸ್ಟ್ ಒಂದರ ನಿರ್ವಾಹಕ ಟ್ರಸ್ಟಿ ಆಗಿದ್ದ. ಧರ್ಮದ ಹೆಸರಲ್ಲಿ ಸಂಗ್ರಹಿಸಿದ ದುಡ್ಡನ್ನೆಲ್ಲ ಆತನ ಖಾತೆಗಳಲ್ಲಿ ಜಮಾ ಮಾಡಲಾಗುತ್ತಿತ್ತು. ಆ ಹಣವನ್ನು ಯಾವ ಉದ್ದೇಶಗಳಿಗಾಗಿ ವಿನಿಯೋಗಿಸಲಾಗಿದೆ ಎಂಬುದರ ಬಗ್ಗೆ ತನಿಖೆ ನಡೆದಿದೆ. ಆರೋಪಿಗಳಲ್ಲೊಬ್ಬನಾದ ಧನಂಜಯ್ ಅಷ್ಟೇಕರ್ ಎಂಬವನು ಅಂತರ್ಜಾಲದಿಂದ ಮಾಹಿತಿಗಳನ್ನು ಪಡೆದುಕೊಂಡು ಬಾಂಬ್‌ಗಳನ್ನು ತಯಾರಿಸಿದ್ದನೆಂದು ಎನ್‌ಐಎ ಅಧಿಕಾರಿಗಳು ತಿಳಿಸಿದ್ದಾರೆ. ನಂತರ 2010ರಲ್ಲಿ 'ಸನಾತನ ಸಂಸ್ಥೆ'ಯ 11 ಸದಸ್ಯರ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದೆ.

## ದಾಭೋಲ್ಕರ್ ಮತ್ತು ಪನ್ಸಾರೆಯವರ ಹತ್ಯೆ

ಮಹಾರಾಷ್ಟ್ರದಲ್ಲಿ ಮೂಢನಂಬಿಕೆ ವಿರೋಧಿ ಮಸೂದೆಯನ್ನು ಬೆಂಬಲಿಸುತ್ತಿದ್ದ ಸಾಮಾಜಿಕ ಕಾರ್ಯಕರ್ತರಿಗೆ ಆಗಾಗ ಬೆದರಿಕೆ ಕರೆಗಳನ್ನು ಮಾಡುತ್ತಿದ್ದವರು 'ಸನಾತನ ಸಂಸ್ಥೆ'ಯ ಸದಸ್ಯರೆಂದು ಭಾವಿಸಲಾಗಿದೆ. ಮೂಢನಂಬಿಕೆ ವಿರೋಧಿ ಮಸೂದೆಯನ್ನು ಬೆಂಬಲಿಸಿದುದಕ್ಕಾಗಿ ಮತ್ತು ತನ್ನನ್ನೊಂದು ತೀವ್ರಗಾಮಿ ಹಿಂದೂತ್ವವನ್ನು ಉತ್ತೇಜಿಸುವ ಕುಪಂಥವೆಂದು ಕರೆದುದಕ್ಕಾಗಿ ಇದೇ 'ಸನಾತನ ಸಂಸ್ಥೆ' ದಾಭೋಲ್ಕರ್ ವಿರುದ್ಧ ಎಫ್‌ಐಆರ್ ದಾಖಲಿಸಿತ್ತು. 2009ರಲ್ಲಿ ಗೋವಾದಲ್ಲಿ ತನ್ನ ವಿರುದ್ಧ ಭಾಷಣ ಮಾಡಿದ ಪನ್ಸಾರೆ ಮೇಲೆ ರೂ 10 ಕೋಟಿ ಮಾನನಷ್ಟ ಮೊಕದ್ದಮೆಯೊಂದನ್ನು ಹೂಡಿತ್ತು. ತದನಂತರ ಪನ್ಸಾರೆಯವರಿಗೆ ಬಂದಿದ್ದ ಬೆದರಿಕೆ ಪತ್ರವೊಂದರಲ್ಲಿ "ತುಮ್‌ಚಾ ದಾಭೋಲ್ಕರ್ ಕರೂಂ ಕಾ?" (ನಿನ್ನ ಗತಿಯೂ ದಾಬೋಲ್ಕರ್‌ನಂತೆ ಆಗಬೇಕೇ?) ಎಂದು ಬರೆಯಲಾಗಿತ್ತು. 2009ರ ಮಡಗಾಂವ್ ಸ್ಫೋಟ ಪ್ರಕರಣದ ಆರೋಪಪಟ್ಟಿಯಲ್ಲಿ ಹೆಸರಿಸಲ್ಪಟ್ಟಿರುವ ಸಂಸ್ಥೆಯ ನಾಲ್ವರು ಸದಸ್ಯರ ವಿರುದ್ಧ ಇಂಟರ್‌ಪೋಲ್ ನೋಟಿಸ್ ಜಾರಿಯಾಗಿದೆ ಎಂದು ತಿಳಿದುಬಂದಿದೆ. ಇವರು ಪುಣೆ, ಸಾಂಗ್ಲಿ, ಕೊಲ್ಹಾಪುರ ಮತ್ತು ಮೂಲ್ಕಿಯವರು ಎನ್ನಲಾಗಿದ್ದು ತನಿಖಾ ಸಂಸ್ಥೆಗಳ ಅಭಿಪ್ರಾಯದಲ್ಲಿ ದಾಭೋಲ್ಕರ್, ಪನ್ಸಾರೆ ಹತ್ಯೆಗಳಲ್ಲಿ ಪಾಲ್ಗೊಂಡವರು ಇವರೇ ಆಗಿರಬಹುದು. ಇವರಿಬ್ಬರ ಹಂತಕರ ಪತ್ತೆಯಾದಲ್ಲಿ ಕಲಬುರ್ಗಿಯವರನ್ನು ಕೊಂದವರು ಯಾರೆಂಬ ರಹಸ್ಯವೂ ಬಯಲಾಗಬಹುದೇ?

**● ಸುರೇಶ್ ಭಟ್ ಬಾಕ್ರಬೈಲ್**

*ಆಕರಗಳು:*

1. 'ಕಮ್ಯೂನಲಿಸಂ ಕಾಂಬ್ಯಾಟ್' ಮಾಸಿಕದ ಜುಲೈ-ಆಗಸ್ಟ್ 2008ರ ಆವೃತ್ತಿಯಲ್ಲಿ *'Sequel of terror'* ಎಂಬ ಲೇಖನ.
2. 20.10.2009ರ 'ದ ಹಿಂದೂ' ಪತ್ರಿಕೆಯಲ್ಲಿ ಪ್ರವೀಣ್ ಸ್ವಾಮಿಯವರ *'Behind Sanatan Sanstha's spiritual veil, a militarist face'* ಎಂಬ ಲೇಖನ.
3. 12.3.2015ರಂದು *http://www.dailyo.in* ನಲ್ಲಿ ರಾಣಾ ಅಯೂಬ್ ಲೇಖನ
4. ಅಂತರ್ಜಾಲ ತಾಣಗಳಲ್ಲಿ ಈ ಕೆಳಗಿನ ಹೆಡ್‌ಲೈನ್ ವರದಿಗಳು:- *Times of India:*

- *23.10.2009: 'SIT raids Sanatan Sanstha offices'*
- *11.11.2009: 'Sanatan Prabhat' editor held'*
- *17.12.2009: 'Goa blast: Malgonda Patil linked to two more Hindu organisations'.*
- *4.1.2010: 'Margao blast: CBI has found clues against Sanatan Sanstha'.*
- *18.5.2010: '11 Sanatan Sanstja men chargesheeted, Hindu Outfit Linked To Margao, Other Blasts'.*

*Afternoon Despatch - Courier:*

- *22.2.2012: 'Sanatan Members Arrested' Hindustan Times*
- *20.7.2010: 'Accused SS members were terrorists: Goa'. QuamiAwaz:*
- *31.8.2011: 'Sanatan Sanstha terrorists get 10 years RI in terror case'. Indian Express:*
- *21.12.2009: 'Sanstha men in Goa had Sadhvi, Purohit links'. nerve.in:*
- *26 May 2010: 'Sanatan Sanstha members Googled bomb circuit diagrams'*

●

## ಕಲಬುರ್ಗಿ ಎಂಬ ನಿತ್ಯ ಸತ್ಯ

ಸತ್ಯವನು ಕೊಲ್ಲಲಿಕೆ ಬಂದಿರುವ ಹೇಡಿ
ಕೊಂದದ್ದು ಬರೆ ದೇಹ ಮಾತ್ರವೇ ನೋಡಿ
ತಲೆತಲಾಂತರದಿಂದ ಕೊಂದದ್ದು ಎಲ್ಲ
ದೇಹವೇ ಖಂಡಿತವು ಸತ್ಯವನ್ನಲ್ಲ.

### ಊಹೆಯೆಂಬ ಖೆಡ್ಡ

ಮನುಷ್ಯತ್ವಕ್ಕಿಂತಲೂ ಹಿರಿದೆಂಬುದಿಲ್ಲ
ಇದೆಯೆಂದು ಹೇಳುವರು ಬರೆ ಊಹಿಸಲ್ಲ
ಸಂಚೆಂಬ ಖೆಡ್ಡದೊಳು ಬಿದ್ದವರು ಜಾರಿ
ಎದ್ದಿಲ್ಲ ನವೆನವೆದು ಸೇರಿಹರು ಗೋರಿ.

### ಸತ್ಯ

ಸತ್ಯಕ್ಕೆ ಸಾವಿಲ್ಲ ಅನ್ನುವುದು ಸತ್ಯ
ಸತ್ಯವಂತಗೆ ಮಾತ್ರ ಸುಖವಿಲ್ಲ ನಿತ್ಯ
ಧರ್ಮಾಂಧ ಮತಾಂಧ ಹಿಡಿದೆತ್ತಿಗನ್ನು
ಹತ್ತುತ್ತಿಹ ಕಂಡಿರಾ ಸತ್ಯವಂತನ ಬೆನ್ನು!

### ಗೊತ್ತಪ್ಪಾ ಗೊತ್ತು

ದೇವರಿಲ್ಲದ ಸತ್ಯ ಕೆಲವರಿಗೆತ್ತು
ಹೇಳರೋ ಹೇಳಿದರೆ ಗಳಿಕೆಗೇ ಕುತ್ತು
ಅರಿಯದಿಹ ಮುಗ್ಧರೇ ಈ ಜನರ ಸೊತ್ತು
ಸುಳ್ಳಾಡಿ ಮಾಡಿಟ್ಟುಕೊಂಡಿಹರು ತೊತ್ತು.

### ಮಾಂಸಮಯ


ದನದ ಮಾಂಸದಿಂದ ಹುಟ್ಟಿ ಬಂದಿರುವ ಹಾಲು
ಬಳಸದವ ಯಾರಿಹನು ಹೇಳಯ್ಯ ಹೇಳು?
ಹಾಲು ಮೊಸರು ಬೆಣ್ಣೆ ತುಪ್ಪವೂ ಕೂಡ
ಮಾಂಸಮಯ ಈ ಸತ್ಯ ಬಚ್ಚಿಡಲು ಬೇಡ

### ಎಂಥ ವಿಚಿತ್ರ!

ಕೋಳಿ ಕುರಿ ದನ ತಿಂಬ ದೇವನಿಗೆ ಅಂಜು
ದೂರಕ್ಕೆ ಇಟ್ಟಿರ್ಪೆ [illegible]
[illegible]
[illegible]

● [illegible]

# 'ಅಚ್ಛೇದಿನ್' ಆಮಿಷದಲ್ಲಿ ಅಸಮಾನತೆಯತ್ತ ದಾಪುಗಾಲು



ಘಟನೆ ಒಂದು : ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬ ತನ್ನ ಸೆಡಾನ್ ಕಾರನ್ನು ರಸ್ತೆಬದಿಯಲ್ಲಿ ನಿಲ್ಲಿಸಿದ. ಪಕ್ಕದ ಫುಟ್‌ಪಾತ್‌ನಲ್ಲಿದ್ದ ತಿಂಡಿಗಾಡಿಯಲ್ಲಿ ಒಂದಷ್ಟು ಕರಿದ ತಿಂಡಿಗಳನ್ನು ಕಟ್ಟಿಸಿಕೊಂಡ. ಮತ್ತೊಂದಿಷ್ಟು ಮೆಣಸಿನಕಾಯಿ ಬಜ್ಜಿ ಇತ್ಯಾದಿಗಳನ್ನು ಅಲ್ಲೇ ನಿಂತು ತಿಂದ. 620 ರೂಪಾಯಿ ಬಿಲ್ ಆಯಿತು. 700 ರೂಪಾಯಿ ಕೊಟ್ಟು ಕಾರಿನ ಕಡೆ ಹೆಜ್ಜೆ ಹಾಕಿದ. ತಿಂಡಿ ಗಾಡಿಯವನು 80 ರೂಪಾಯಿ ಹಿಂತಿರುಗಿಸಲು ಹೋದರೆ, 'ಬೇಡ. ಇಟ್ಕೊ' ಅಂತ ಹೇಳಿ. ಹಣ ತೆಗೆದುಕೊಳ್ಳದೆ ಹೊರಟೇಹೋದ.

ಘಟನೆ ಎರಡು: ನನ್ನ ಮನೆಗೆ ನನ್ನ ಸಮೀಪದ ಬಂಧುವೊಬ್ಬರು ಆಗಮಿಸಿದ್ದರು. ಲೋಕಾಭಿರಾಮ ಮಾತಾಡುತ್ತ ಅವರು, 'ಇನ್ನೊಂದು ಕಾರ್ ತಗೋಬೇಕೂಂತಿದೀನಿ' ಅಂದರು. ಅವರು ಒಂಟಿ ಜೀವಿ. ಹೆಂಡತಿ ಬದುಕಿಲ್ಲ, ಮಕ್ಕಳಿಬ್ಬರು ಡಾಕ್ಟರ್‌ಗಳಾಗಿದ್ದು, ಡಾಕ್ಟರ್‌ಗಳನ್ನೇ ಮದುವೆಯಾಗಿ ಅಮೆರಿಕಾದಲ್ಲಿದ್ದಾರೆ. ಈ ನನ್ನ 'ಒಂಟಿಜೀವಿ ಬಂಧು'ವಿನ ಬಳಿ ಈಗಾಗಲೇ ಒಂದು ಕಾರು, ಒಂದು ಸ್ಕೂಟರು ಇದೆ. ಇನ್ನೊಂದು ಕಾರು ಬೇಕಂತೆ! ಸಮಾಜದ ಆರ್ಥಿಕ ಅಸಮಾನತೆ ಹಾಗೂ ಪರಿಸರ ಮಾಲಿನ್ಯಕ್ಕೆ ಅವರು ನೀಡುತ್ತಿರುವ ಕಾಣಿಕೆಯ ಬಗ್ಗೆ ಅವರಿಗೆ ತಿಳಿ ಹೇಳಿದೆ. ನಾನು ತಿಳಿ ಹೇಳುತ್ತಿದ್ದಾಗ ಅವರು ತೂಕಡಿಸುತ್ತಿದ್ದರು!

ಘಟನೆ ಮೂರು : ನನ್ನ ಮನೆಯ ಹೊರಗೆ ಕೆಲವು ಹೂಗಿಡಗಳಿವೆ. ಒಂದು ಬೆಳಗ್ಗೆ ವಯಸ್ಕನೊಬ್ಬ ತನ್ನ ಅಪ್ರಾಪ್ತ ವಯಸ್ಸಿನ ಮಗನೊಡನೆ ಬಂದು, ಆ ಗಿಡಗಳ ಕೆಳಗಿನ ಕಳೆ ಕಿತ್ತು ಮಣ್ಣನ್ನು ಕೆತ್ತಿ ಹದಮಾಡಿಕೊಡುವುದಾಗಿ ಹೇಳಿದ. ಅಧರ ಅವಶ್ಯಕತೆ ಇರಲಿಲ್ಲವಾದರೂ, ಬಡವನಾದ ಅವನಿಗೆ ನಾಲ್ಕು ಕಾಸು ಹುಟ್ಟಲಿ ಎಂಬ ಉದ್ದೇಶದಿಂದ ನಾನು, 'ಸರಿ' ಎಂದೆ. ಅವನ ಮಗನೂ ತಂದೆ ಜೊತೆ ಸೇರಿ ಕೆಲಸ ಮಾಡಲು ಮುಂದಾದಾಗ, ಬಾಲಕನನ್ನು ತಡೆದ ನಾನು, ಆತನನ್ನು ಕೆಲಸಕ್ಕೆ ಹಚ್ಚದೆ ಓದಿಸಬೇಕೆಂದು ಆತನ ತಂದೆಗೆ ಹೇಳಿದೆ. ಸುಮ್ಮನಿದ್ದ. ನಾನು ಮನೆಯೊಳಗೆ ನಡೆದೆ. ಅಷ್ಟು ಹೊತ್ತಿಗೆ, ಮನೆಯೆದುರಿನ ಬೇಕರಿಯಲ್ಲಿ ಯುವಕನೊಬ್ಬ ಒಂದಷ್ಟು ತಿನಿಸುಗಳನ್ನು ಖರೀದಿಸಿ, ಆ ಪೈಕಿ ಕೆಲವು ಬ್ರೆಡ್ ಚೂರುಗಳನ್ನು ಅಲ್ಲಿದ್ದ ಬೀದಿನಾಯಿಯ ಮುಂದೆ ಎಸೆದುಹೋದ. ಇದನ್ನು ಗಮನಿಸಿದ ಈ ಬಾಲಕ, ಆ ಯುವಕನು ಕಣ್ಮರೆಯಾದ ತಕ್ಷಣ ಓಡಿಹೋಗಿ, ನಾಯಿಯಿಂದ ಸ್ವಲ್ಪ ದೂರ ಬಿದ್ದಿದ್ದ ಬ್ರೆಡ್ ಚೂರುಗಳನ್ನು ಎತ್ತಿಕೊಂಡು ಗಬಗಬನೆ ತಿನ್ನತೊಡಗಿದ! ನಾಯಿ 'ಬವ್' ಎಂದು ಗದರಿತು. ತಂದೆಯ ಬಳಿಗೆ ಓಡಿಬಂದ. ಇದನ್ನೆಲ್ಲ ಗಮನಿಸುತ್ತ ತಂದೆಯು ತನ್ನ ಪಾಡಿಗೆ ತಾನು ಕಳೆ ಕೀಳುವ ಕೆಲಸ ಮುಂದುವರಿಸಿದ್ದ.

ಮೇಲಿನ ಮೂರೂ ಘಟನೆಗಳೂ ಬೆಂಗಳೂರಿನ ನನ್ನ ನಿವಾಸದ ಪರಿಸರದಲ್ಲಿ ಈಚೆಗಷ್ಟೇ ನಡೆದಂಥವು. ಈ ಘಟನೆಗಳು ಇಂದಿನ ಭಾರತದ ವಿಷಮ ಪರಿಸ್ಥಿತಿಯನ್ನು ಬಿಂಬಿಸುತ್ತವೆ. ಅಗತ್ಯಕ್ಕಿಂತ ಹೆಚ್ಚು ಸಂಪಾದಿಸುತ್ತಿರು... ಒಂದು ಕಡೆ; ಎರಡು ಹೊತ್ತಿನ ಕೂಳಿಗೂ ಪರಿತಪಿಸು... ವರ್ಗ ಇನ್ನೊಂದು ಕಡೆ. ದೇಶದ ಪ್ರತಿಶತ 6... ಸಂಪತ್ತು, ಪ್ರತಿಶತ 10ರಷ್ಟಿರುವ ಈ ಶ್ರೀ... ಕೈಯಲ್ಲಿದ್ದರೆ, ಪ್ರತಿಶತ 60ರಷ್ಟಿರುವ ಬಡವರ್ಗದ ... ಇರುವುದು ದೇಶದ ಕೇವಲ ಪ್ರತಿಶತ 2ರಷ್ಟು ... ಮಾತ್ರ! ಅಂದಾಗ, ಆ ಬಾಲಕನ ದುರವಸ್ಥೆಗೆ, ಅ... ಸಮಾಜದ ತೀವ್ರ ಆರ್ಥಿಕ ಅಸಮಾನತೆಗೆ ಆ ಸಾಫ್... ಇಂಜಿನಿಯರ್ ಮತ್ತು ಆ ನನ್ನ ಬಂಧು ಇಂತ... ನೇರ ಕಾರಣರಲ್ಲವೆ? ಅಗತ್ಯಕ್ಕಿಂತ ಹೆಚ್ಚಿನ ಗ... ಕಾನೂನು ಪ್ರಕಾರ ಅಪರಾಧವಲ್ಲದಿದ್ದರೂ, ... ದೃಷ್ಟಿಯಿಂದ ಮತ್ತು ಸಾಮಾಜಿಕ ನೆಲೆಯಿಂದ ... ತಾನೆ? ಮಾನವೀಯತೆಯ ದೃಷ್ಟಿಯಿಂದ ನೋ... ಅಪರಾಧವೇ ತಾನೆ?

ವಿಪರ್ಯಾಸವೆಂದರೆ, 'ಅಚ್ಛೇ ದಿನ್'ಗಳನ್ನು ಕ... ಹೊರಟಿರುವ ನಮ್ಮ 'ಪ್ರಧಾನ ಸೇವಕ'ನೂ ದೇಶ... ಆರ್ಥಿಕ ಅಸಮಾನತೆಗೆ ಪುಷ್ಟಿ ನೀಡುತ್ತಿರುವುದು ... ಹಿಡುವಳಿದಾರರು, ಕೃಷಿ ಕಾರ್ಮಿಕರು, ಕೈಗಾರಿಕಾನಿರತರು, ಕುಶಲ ಕರ್ಮಿಗಳು ಇವರುಗಳ... ತುಂಬಿರುವ ಈ ದೇಶದಲ್ಲಿ ಇವರನ್ನೆಲ್ಲ ಬ್ಯಾಂಕ್ ಇನ್ಶೂರೆನ್ಸ್‌ಗಳಿಗೆ ಸೀಮಿತಗೊಳಿಸಿ, ಬೃಹತ್ ಉದ್ಯ... ಪ್ರೋತ್ಸಾಹಿಸಲು ಹೊರಟಿರುವ 'ಪ್ರಧಾನ ಸೇ... ಸೇವಾಕಾರ್ಯವು ಬಡವ-ಬಲ್ಲಿದ ನಡುವಿನ ಅಂತ... ಮತ್ತಷ್ಟು ಹೆಚ್ಚಿಸಿ. ಸಾಮಾಜಿಕ ಕ್ಷೋಭೆಯ... ಮಾಡುವುದು ಖಂಡಿತ. ಎಗ್ಗಿಲ್ಲದ ಖಾಸಗೀಕರಣ, ... ಬಂಡವಾಳದ ಹೆಚ್ಚಳ, ಈ 'ಪ್ರಧಾನ' (ನ) ಕ್ರಮ... ಸದ್ಯಕ್ಕೆ ಮಾತ್ರ ದೇಶದ ಉತ್ಪಾದನೆ ಮತ್ತು ರಫ್...

# ವಿವಾಹಪ್ರಾಯ ಮತ್ತು ಧರ್ಮಸಂರಕ್ಷಣೆ

ಎರಡು ವರ್ಷಗಳ ಹಿಂದೆ ಕೆಲವು ಮುಸ್ಲಿಂ ಸಂಘಟನೆಗಳು ಕೋಝಿಕೋಡಿನಲ್ಲಿ ಸಭೆ ಸೇರಿ, 1978 ರಲ್ಲಿ ಹೆಣ್ಣುಮಕ್ಕಳ ವಿವಾಹ ಪ್ರಾಯ 18 ವರ್ಷ ಎಂದು ತೀರ್ಮಾನಿಸಿ ರೂಪಿಸಿದ ಬಾಲ್ಯವಿವಾಹ ನಿಯಂತ್ರಣ ನಿಯಮ, ತಮ್ಮ ಧಾರ್ಮಿಕ ನಿಯಮದ ಮೇಲೆ ನಡೆದ ಹಸ್ತಕ್ಷೇಪವೆಂದೂ ಆದರ ವಿರುದ್ಧ ತಾವು ಶ್ರೇಷ್ಠ ನ್ಯಾಯಾಲಯಕ್ಕೆ ಹೋಗುವೆವೆಂದೂ ತೀರ್ಮಾನಿಸಿದ್ದಾರೆ. ಇದಕ್ಕಾಗಿ ಕೇರಳದ ಮುಸ್ಲಿಂ ಮೌಲವಿಯೋರ್ವರ ನೇತೃತ್ವದಲ್ಲಿ ಸಭೆ ಸೇರಿ ಈ ವಿಷಯವನ್ನು ಮುಸ್ಲಿಂ ವ್ಯಕ್ತಿ ನಿಯಮ ರಕ್ಷಣಾ ಸಮಿತಿಗೆ ತಿಳಿಸಲಾಗಿದೆ. (ಸೆಪ್ಟೆಂಬರ್ 21, 2013).

ಅದರ ವಿವರಣೆ ಈ ಕೆಳಗಿನಂತಿದೆ:


ಇಸ್ಲಾಂ ಧಾರ್ಮಿಕ ನಿಯಮಸಂಹಿತೆ (ಶರಿಯತ್) ಹೆಣ್ಣುಮಕ್ಕಳ ವಿವಾಹ ಪ್ರಾಯಕ್ಕೆ ಪರಿಧಿ ಇಟ್ಟಿಲ್ಲ, 1937 ರ ಮುಸ್ಲಿಂ ವ್ಯಕ್ತಿ ನಿಯಮ ಅರ್ಜಿ ಕಾಯಿದೆಯ ಅನುಸಾರ ವಿವಾಹ, ವಿವಾಹ ವಿಚ್ಛೇದನ, ಆಸ್ತಿಹಕ್ಕು ಮುಂತಾದ ವಿಷಯಗಳಲ್ಲಿ ಸ್ವರಿತ ಧಾರ್ಮಿಕ ನಿಯಮಗಳನ್ನು ಅನುಸರಿಸಬಹುದು. ಈ ವಿಷಯದಲ್ಲಿ ಆ ಅಧಿಕಾರಗಳನ್ನು ಮರುಸ್ಥಾಪಿಸಬೇಕು.

ಕ್ಷುಲ್ಲಕ ಹಾಗೂ ಉಪಯುಕ್ತವಾದ ಹಲವಾರು ವಿಷಯಗಳಲ್ಲಿ ಇಸ್ಲಾಮೀ ಪರವೂ ಕರ್ಮಶಾಸ್ತ್ರ ಪರವೂ ಆದ ಹಲವಾರು ವಿಷಯಗಳ ಕುರಿತು ಪರಸ್ಪರ ಹೋರಾಡುವ ಈ ಧಾರ್ಮಿಕ ಸಂಘಟನೆಗಳು ಈ ವಿಷಯದಲ್ಲಿ ಒಗ್ಗಟ್ಟಾಗಿವೆ! ಹೆಣ್ಣುಮಕ್ಕಳ ಪ್ರಾಯದ ವಿಷಯದ ನಿರ್ಬಂಧವನ್ನು ಕಿತ್ತೆಸೆದು ಬಾಲ್ಯವಿವಾಹ ನಡೆಸಿದರೆ ಮಾತ್ರ ಯಥಾರ್ಥ ಮುಸಲ್ಮಾನನಾಗಿ ಬದುಕಲು ಸಾಧ್ಯ!

ಈ ಎಲ್ಲಾ ಸಂಘಟನೆಗಳ ಭಾಷಾ ಶೈಲಿಗಳಲ್ಲಿ ಚಿಕ್ಕಪುಟ್ಟ ವ್ಯತ್ಯಾಸಗಳು ಮಾತ್ರ ಇವೆಯಷ್ಟೇ ಹೊರತು ಆಳದಲ್ಲಿ ಎಲ್ಲವೂ ಒಂದೇ ರೀತಿಯಲ್ಲಿವೆ. 18 ವರ್ಷ ಪೂರ್ತಿಯಾಗುವ ಮೊದಲೇ ವಿವಾಹ ಮಾಡಿ ಕಳುಹಿಸಿಕೊಟ್ಟ ಹಲವಾರು ಹೆಣ್ಣುಮಕ್ಕಳು ಎಂತೆಂತಹ ತೊಂದರೆಗಳನ್ನನುಭವಿಸುತ್ತಾರೆ ಎಂಬ ಕುರಿತು ಇವರು ಚಿಂತಿಸುವುದಿಲ್ಲ, ವಿಚ್ಛೇದಿತೆಯ ಜೀವನಾಂಶದ ಕಾರಣ ಶಾಬಾನು ಮೊಕದ್ದಮೆಯಲ್ಲಿ ಶ್ರೇಷ್ಠ ನ್ಯಾಯಾಲಯ ತೀರ್ಪು ನೀಡಿದಾಗ (1985) ಈ ವಿಷಯ ಬೆಳಕಿಗೆ ಬಂತು. ಈ ವಾಸ್ತವ ವಿಷಯಕ್ಕಿರುವ ಒಂದು ಹೊಸ ಗುರುತಾಗಿ ಈಗ ಈ ತೀರ್ಮಾನವಾಗಿದೆ!

35 ವರ್ಷಗಳ ಹಿಂದೆ ಬಾಲ್ಯವಿವಾಹದ ನಿಯಂತ್ರಣ ನಿಯಮ (1978) ಲೋಕಸಭೆಯಲ್ಲಿ ಅನುಮೋದನೆಗೊಂಡಿತು. ಅಂದೆಂದೂ ಇರದಿದ್ದ ಇಂತಹ ಧಾರ್ಮಿಕ ಸಮಸ್ಯೆ ಇಂದು ಚಿಗುರಿದ್ದು ಹೇಗೆ?

ವಿಷಯ ಸರಳವಾಗಿದೆ. ಕಾಲುಶತಮಾನಕ್ಕೆ ಮೊದಲೇ ನಾವು ಗುಳಿ ತೋಡಿ ಮುಚ್ಚಿ ಹಾಕಿದ್ದೇವೆಂದುಕೊಂಡಿದ್ದ ದುರಾಚಾರಗಳಲ್ಲಿ ಒಂದಾದ 'ಅರಬಿ ಕಲ್ಯಾಣಂ' (ಕೋಝಿಕ್ಕೋಡಿಗೆ ಬಂದ ಅರಬರು ಬಡ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಳ್ಳುವ ಸಂಪ್ರದಾಯ) ಕೆಲವು ವಾರಗಳ ಹಿಂದೆ ತಲೆ ಎತ್ತತೊಡಗಿದೆ. ಪದ್ಧತಿಗೆ ವಿರುದ್ಧವಾಗಿ 'ಬಲಿಪಶು' ವಿರೋಧಿಸಿದಾಗ ಮದುವೆ ಮಾಡಿಸಿದವರ



ಮೇಲೆ ಮೊಕದ್ದಮೆ ದಾಖಲಾಯಿತು. ಕೋಝಿಕ್ಕೋಡಿನಲ್ಲಿ ಸಭೆ ಸೇರಿದ ಧಾರ್ಮಿಕ ವಿದ್ವಾಂಸರೂ, ಸಾಮಾಜಿಕ ಮುಖಂಡರೂ ಅಂತಹ ತೊಂದರೆಗಳನ್ನು ಇನ್ನು ಮುಂದೆ ಅರಬರಿಗಾಗಲಿ, ಚಿಕ್ಕಪ್ರಾಯದ ಹೆಣ್ಣುಮಕ್ಕಳನ್ನು ವಿವಾಹವಾಗುವವರಿಗಾಗಲಿ ಉಂಟುಮಾಡಬಾರದೆಂಬ ನಿರ್ಧಾರ ತೆಗೆದುಕೊಂಡಿದ್ದಾರೆ. ಅವರು ಬಲಿಪಶುಗಳ ಪರವಲ್ಲ; ಬೇಟೆಗಾರನ ಪರವಾಗಿದ್ದಾರೆ!

ಈ ವಿಷಯಕ್ಕೆ ಪುರಾವೆ-ಮದುವೆಯಲ್ಲಾಗಲಿ (ನಿಕಾಹ್), ಸ್ವಲ್ಪ ದಿನಗಳ ಬಳಿಕ ನಡೆದ ವಿಚ್ಛೇದನದಲ್ಲಾಗಲಿ (ತಲಾಖ್) ಧಾರ್ಮಿಕ ನಿಯಮಗಳೊಂದನ್ನೂ ಪಾಲಿಸಿರಲಿಲ್ಲ, 'ಹೆಣ್ಣಿನ ಅನುಮತಿ ಇಲ್ಲದೆ ಹೇಗೆ ವಿವಾಹ ನೆರವೇರಿತು? ಎರಡು ಕುಟುಂಬಗಳಲ್ಲಿರುವ ವ್ಯಕ್ತಿಗಳನ್ನೊಳಗೊಂಡ ಸಮಿತಿಯ ಮಧ್ಯಸ್ಥಿಕೆ ಇಲ್ಲದೆ ಪ್ರಾರಂಭವಾದ ನಡವಳಿಕೆಗಳನ್ನೇನನ್ನೂ ಪಾಲಿಸದೆ ಹೇಗೆ 'ತಲಾಖ್' ಕೊಡಲಾಯಿತು? ಪುರುಷರ ಹಿತಾಸಕ್ತಿಗೆ ವಿರುದ್ಧವಾಗಬಹುದೆಂಬ ಕಾರಣಕ್ಕಾಗಿ ಇಂತಹ ಧರ್ಮ ವಿರುದ್ಧ ವಿಷಯಗಳೇನನ್ನೂ ಕೋಝಿಕ್ಕೋಡಿನಲ್ಲಿ ಸೇರಿದ ಸಭೆ ಚಿಂತನೆ ನಡೆಸಲೇ ಇಲ್ಲ?

ಸಂಘಟನೆಗಳ ಈ ಒಗ್ಗಟ್ಟು ಮಹಿಳಾ ವಿರುದ್ಧ ಮಾತ್ರವಾಗಿತ್ತು ಎಂಬುದಕ್ಕೆ ನಾನು ಬೇರೆ ಪುರಾವೆಯನ್ನೂ ನೀಡುವೆ.

1. ಯಾರ ಅಗತ್ಯಕ್ಕಾಗಿ, ಯಾರ ಹಿತಾಸಕ್ತಿಯನ್ನು ರಕ್ಷಿಸಲಿಕ್ಕಾಗಿ ಈ ಸಭೆ ನಡೆಸಲಾಯಿತು? ಇಲ್ಲಿನ ಯಾವುದಾದರೊಂದು ಮಹಿಳಾ ಸಂಘಟನೆ, "ನಮಗೆ 18 ವರ್ಷ ಪೂರ್ತಿಯಾಗುವ ಮೊದಲು ಮದುವೆಯಾಗಲು ಅವಕಾಶ ದೊರೆಯುವಂತೆ ಮಾಡಬೇಕು" ಎಂದು ಯಾರಾದರೊಬ್ಬ ಧರ್ಮಗುರುಗಳೊಡನೆ ಬೇಡಿಕೆ ಇಟ್ಟಿದ್ದರೇ? ಇಲ್ಲ, ಹಾಗಾದರೆ ಈ ಅಗತ್ಯ ಯಾರದಾಗಿತ್ತು, ಪುರುಷರದು ಮಾತ್ರವಾಗಿತ್ತು,

2. ಕೇಂದ್ರ ಸರ್ಕಾರದ ಆ ನಿಯಮ ಪುರುಷರ ವಿವಾಹ ಪ್ರಾಯಕ್ಕೂ 21 ವರ್ಷ ಎಂದು ಮಿತಿ ವಿಧಿಸಿದೆ. ಈ ನ್ಯಾಯದಂತೆ ಅದೂ ಕೂಡಾ ಧರ್ಮದ ನಿಯಮಕ್ಕೆ ವಿರುದ್ಧವೇ ಆಗಿದೆಯಲ್ಲವೇ? ಅದರ ವಿರುದ್ಧ ಏನಾದರೂ ಆಲೋಚನೆಯ ಪ್ರಸ್ತಾಪವಾದದ್ದಿದೆಯೇ? ಇರಲಿಲ್ಲ! ಅದರಿಂದ ಪುರುಷರಿಗೆ ಎಂತಹ ತೊಂದರೆಯೂ ಇರುವುದಿಲ್ಲವೆಂಬುದೇ ಕಾರಣವಾಗಿದೆ.

3. ಧಾರ್ಮಿಕ ನಿಯಮದಲ್ಲಿ ಹೆಣ್ಣುಮಕ್ಕಳು ಮೈನೆರೆದ ಬಳಿಕ ಮದುವೆ ಮಾಡಬಹುದು ಎಂದಿದೆಯೇ ಹೊರತು ಮಾಡಿಸಬೇಕು ಎಂದಿಲ್ಲ. ಮಾಡಿಸಬಹುದು ಎಂಬ ಅನುಮತಿ ಮಾಡಿಸಬೇಕು ಎಂಬ ನಿರ್ಬಂಧವಾಗಿ ವ್ಯಾಖ್ಯಾನಿಸಿದ್ದು ಯಾರಿಗಾಗಿ? ಹೆಣ್ಣಿಗಾಗಿಯಲ್ಲ; ಗಂಡಿಗಾಗಿ.

4. ಧಾರ್ಮಿಕ ನಿಯಮದಲ್ಲಿ ವಿವಾಹ ಪ್ರಾಯ ಇಷ್ಟೆಂದು ಹೇಳಿಲ್ಲ, ಅದು ಇಷ್ಟೆಂದು ನಿರ್ಧರಿಸಬೇಕೆಂದೂ ಹೇಳಿಲ್ಲ, ಹಾಗಾಗಿ ಅದು ಹೇಗೆ ಧರ್ಮ ವಿರುದ್ಧವಾಗುತ್ತದೆ? ಪಾಕಿಸ್ತಾನ ಒಳಗೊಂಡಂತೆ ಎಷ್ಟೋ ಮುಸ್ಲಿಂ ರಾ... ಹೆಣ್ಣು ಮತ್ತು ಗಂಡುಮಕ್ಕಳ ವಿವಾಹಕ್ಕೆ ಪ್ರಾಯದ... ಇಟ್ಟಿವೆ. ಅಲ್ಲೆಲ್ಲೂ ಇಲ್ಲದ ಎಂತಹ ಧರ್ಮ ವಿ... ಇಲ್ಲಿನ ಪ್ರಾಯಮಿತಿಗಿದೆ?

5. ಮೈನೆರೆಯುವ ಮೊದಲೇ ಹೆಣ್ಣುಮಕ್ಕಳ ... ಮಾಡಬೇಕೆಂದು ಒಂದು ನಿಯಮ ಬಂದರೆ ಅದು ... ವಿರುದ್ಧವಾಗುತ್ತದೆ. ಭಾಗ್ಯದಿಂದ ಇಂಡಿಯಾದಲ್ಲಿ ... ನಿಯಮ ಬಂದಿಲ್ಲ; ಬರುವಂತೆ ಕಾಣುವುದೂ ...

ಇಂತಹ ವಿಷಯಗಳಲ್ಲಿ ಪೋಷಕರಿಗೆ ಉಂ... ತೊಂದರೆಗಳು ಸಾರ್ವಜನಿಕವಾಗಿವೆ. ಅಲ್ಲಿ ... ಧರ್ಮದವರಿಗೆ ಮಾತ್ರವಾಗಿ ಸಮಸ್ಯೆಗಳೇನೂ ... ಆದರಿಂದಾಗಿಯೇ ಅವರಿಗೆ ಸಾಮಾಜಿಕವಾಗಿ ಪ... ಕಂಡು ಹಿಡಿಯಬೇಕಾಗಿಲ್ಲ,

ಇಂಡಿಯಾದ ಪ್ರಜಾಪ್ರಭುತ್ವ ಮತ್ತು ಇಸ್ಲಾಂ ಧ... ನಿಯಮಸಂಹಿತೆ ಮಹಿಳೆಗೆ ಏಕಪ್ರಕಾರವಾಗಿ, ... ವಿವಾಹದಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕ... ನೀಡಿದೆ. ಮಹಿಳೆ ಪೋಷಕರ ಇಷ್ಟಾನುಸಾರ ನಡೆದು... ಒಂದು ಉತ್ಪನ್ನ ಎಂದು ತಿಳಿದುಕೊಳ್ಳುವುದು ಪ್ರಜಾ... ವಿರುದ್ಧವೂ, ಹಾಗೆಯೇ ಇಸ್ಲಾಂ ನಿಯಮ ವಿರು... ಆಗಿದೆ. 'ಮಗಳನ್ನು' ಕೊಡುವುದು ಎಂಬ ನಮ್ಮ ... ಶೈಲಿಯೇ ವಿವಾಹದಲ್ಲಿ ಸ್ತ್ರೀ ಕರ್ತೃ ಸ್ಥಾನ... ಕರ್ಮಸ್ಥಾನದಲ್ಲಿ ಎಂಬುದನ್ನು ಸೂಚಿಸುತ್ತದೆ.

ಓರ್ವ ಹೆಣ್ಣುಮಗಳು ಪ್ರವಾದಿಗಳ ಸಭೆಗೆ ... ತನಗೆ ತಿಳಿಯದೆ ತನ್ನ ಅನುಮತಿ ಇಲ್ಲದೆ ತನ್... ತನ್ನ ನಿಕಾಹ್ ಮಾಡಿದ್ದಾರೆ ಎಂದು ದೂರು ನೀ...

"ನಿನಗೆ ಪ್ರಾಯ ಪೂರ್ತಿ (ಮೈನೆರೆಯು... ಆಗಿದೆಯೇ?" ಪ್ರವಾದಿ ವಿಚಾರಿಸಿದರು.

"ಆಗಿದೆ."

"ನಿನ್ನೊಡನೆ ಕೇಳದೆ ನಿನ್ನ ನಿಕಾಹ್ ಮಾಡಿ...

"ಹೌದು."

"ಸರಿ. ನಿನಗೆ ಇಷ್ಟವಿಲ್ಲವಾದರೆ ವಿವಾಹವನ್... ರದ್ದುಪಡಿಸಬಹುದು. ಹೆಣ್ಣುಮಕ್ಕಳ ಅನುಮತಿ ... ನಿಕಾಹ್‌ಗೆ ಮಾನ್ಯತೆ ಇಲ್ಲ."

"ಪ್ರವಾದಿಗಳೇ, ಪತಿ ನನಗಿಷ್ಟವಾಗಿದ್ದಾರೆ. ... ತೃಪ್ತಳಾಗಿದ್ದೇನೆ. ಇಂತಹ ವಿಷಯಗಳಲ್ಲಿ ಸ್ವಂತ ತೀ... ಕೈಗೊಳ್ಳಲು ಮಹಿಳೆಯರಿಗೆ ಅಧಿಕಾರವಿದೆಯೇ ... ತಮ್ಮ ಬಾಯಿಯಿಂದಲೇ ಕೇಳಲು ನಾನು ಈ... ಬಂದು ತಮ್ಮೊಡನೆ ಕೇಳಲು ಕಾರಣವಾಗಿದೆ."

"ಖಂಡಿತವಾಗಿ ಮಹಿಳೆಯರಿಗೆ ಅ... ಅವಕಾಶವಿದೆ."

ಬಲ್ಲುವಾದರೂ, ಕ್ರಮೇಣ ದೇಶದ ಆರ್ಥಿಕ ಟುಗಳು ಅಲ್ಪಸಂಖ್ಯೆಯ ಬಂಡವಾಳಶಾಹಿ ಗಳ ತೆಕ್ಕೆಗೆ ಸೇರಿ, ಬಹುಸಂಖ್ಯಾತ ಮಧ್ಯಮ ವರು ಮತ್ತು ಮುಖ್ಯವಾಗಿ ಬಡವರು ಈ ಗಳ ಬಾಯಿಗೆ ಸಿಕ್ಕಿಬಿದ್ದು ನರಳಬೇಕಾದ ಪರಿಸ್ಥಿತಿ ಸಂಭಾವ್ಯ.

ರತಕ್ಕೆ ಅಮೆರಿಕಾದ ಮಾದರಿ ಸಲ್ಲದು. ಚೀನಾದ ದುರವಸ್ಥೆಯನ್ನು ಇಂದು ಜಗತ್ತು ಕಾಣುತ್ತಿದೆ ಅನುಭವಿಸುತ್ತ ಕೊರಗುತ್ತಿದೆ ಕೂಡ. ಭಾರತವು ಆದ ಪರಂಪರಾಗತ ಮಾದರಿಯನ್ನು ಕೊಂಡು ಮುಂದುವರಿಯಬೇಕು. ಸಣ್ಣ ರೈತರಿಗೆ ತ್ತು ರಸಗೊಬ್ಬರ ಕಂಪನಿಗಳ ಶೋಷಣೆಯಿಂದ ಅಧಿಕಾರಶಾಹಿ ಮತ್ತು ಬಂಡವಾಳಶಾಹಿಗಳ ಯಿಂದ ಬಿಡುಗಡೆ, ಕೃಷಿ ಭೂಮಿ ಮೇಲಿನ ಕ್ಷಣೆ, ಸಾವಯವ ಕೃಷಿಗೆ ಪ್ರೋತ್ಸಾಹ, ಬೆಂಬಲ ಗಳು, ಮಧ್ಯವರ್ತಿಗಳು ಮತ್ತು ಸಾಲ ನೀಡುವ ವ್ಯಕ್ತಿಗಳ ಶೋಷಣೆಯಿಂದ ಮುಕ್ತಿ, ಉತ್ತಮ ರ ಮಾರುಕಟ್ಟೆ ವ್ಯವಸ್ಥೆ ಬೆಳೆ ನಷ್ಟ ಪರಿಹಾರ ದ ಗಟ್ಟಿ ಯೋಜನೆಗಳು; ವಿವಿಧ ಕಾರ್ಮಿಕರಿಗೆ, ಕರ್ಮಿಗಳಿಗೆ ಹಾಗೂ ಸಣ್ಣ ಉದ್ದಿಮೆದಾರರಿಗೆ ಯ ಸಮಸ್ಯಾ ಪರಿಹಾರದ ಮತ್ತು ನೆರವಿನ ಗಳು, ಇಂಥ ಕ್ರಮಗಳಿಂದು ಭಾರತದ ಅಗತ್ಯ. , ನೆಲಜಲವನ್ನೆಲ್ಲ ಖಾಸಗಿ ಬಂಡವಾಳಶಾಹಿಗಳ ಹುಗಳಿಗೆ ಧಾರೆಯೆರೆಯುತ್ತ, ರೈತರಿಗೆ- ರಿಗೆ 'ಡಿಜಿಟಲ್ ಆಗಿರಿ' ಎಂದು ಸತೊಡಗಿದರೆ, ಭಾರತವು ಮುಂದೊಂದು ದಿನ, ಲವೇ ಮಂದಿಯು ಬಡ ಬಹುಸಂಖ್ಯಾತರನ್ನು ಗುಲಾಮಗಿರಿಗೀಡುಮಾಡಿ ಮೆರೆಯುವ ಅಶಾಂತ ಗಿ ಮಾರ್ಪಟ್ಟರೆ ಆಶ್ಚರ್ಯವಿಲ್ಲ.

■ ಎಚ್. ಆನಂದರಾಮ ಶಾಸ್ತ್ರೀ

ಲ್ಯವಿವಾಹದ ಬಲಿಪಶುಗಳಿಗೆ ಇಂಡಿಯಾದಲ್ಲಿ ಈ 2006 ರಲ್ಲಿ ಬಾಲ್ಯವಿವಾಹ ದೊಡನೆಯೇ ದೊರೆಯಿತು. ಅದರ ಅನುಸಾರ ಯ (ಮೈನರ್)ದಲ್ಲಿ ಪೋಷಕರು ನಡೆಸಿದ ವಿವಾಹ ದವರು (ಮೇಜರ್ 18 ವರ್ಷದ) ಆದ ಬಳಿಕ ಸಲು ನ್ಯಾಯಾಲಯದ ಮೊರೆ ಹೋಗಬಹುದು. ದ ನಿಯಮ ಮತ್ತು ನ್ಯಾಯನೀತಿಗಳ ಮುಂದೆ ದೊರೆಯಬೇಕೆಂದು ಇಚ್ಛಿಸುವವರು ನಿಯಮ ಎಲ್ಲರೂ ಜವಾಬ್ದಾರರೆಂಬ ತಿಳಿವಳಿಕೆ ಬೇಕು.

ಳದ ಮುಸ್ಲಿಂ ಮಹಿಳೆಯರು ಎದುರಿಸಬೇಕಾದ ಸಮಸ್ಯೆ ವರದಕ್ಷಿಣೆಯೇ ಹೊರತು ಬಾಲ್ಯವಿವಾಹಕ್ಕೆ ದ ಅನುಮತಿ ಇಲ್ಲದಿರುವುದಲ್ಲ. 'ಅರಬಿ ಕಲ್ಯಾಣ' ಮೈಸೂರ್ ಕಲ್ಯಾಣ'ದ ಮೂಲ ಕಾರಣ ವರದಕ್ಷಿಣೆ ಹಣವಿಲ್ಲದಿರುವುದಾಗಿದೆ. ಬಡ ಕುಟುಂಬಗಳಲ್ಲಿ ಇಂತಹ ವಿವಾಹಗಳಾಗುತ್ತದೆ. ವರದಕ್ಷಿಣೆ ಕವೆಂದು ಮೌಲವಿಗಳು ಧಾರ್ಮಿಕ ಭಾಷಣ ದಿಂದಲೋ ಸರ್ಕಾರ ಕ್ರಿಮಿನಲ್ ಅಪರಾಧ ನಿಯಮ ರೂಪಿಸಿದ್ದರಿಂದಲೋ ಅದು ಕಮ್ಮಿ , ಅದರ ಬಲಿಪಶುಗಳಾಗಿ ತಲಾಖ್ ಪೀಡಿತ ರೂ, ಅವಿವಾಹಿತರೂ ನಿರಂತರ ಪೀಡನೆಗೆ ಒಳಗಾ ವಿರ, ಸಾವಿರ ಮಹಿಳೆಯರಿದ್ದಾರೆ. ವರದಕ್ಷಿಣೆ ವ ಮದುವೆಯಲ್ಲಿ ಪಾಲ್ಗೊಳ್ಳುವುದಿಲ್ಲವೆಂದೋ, ಮದುವೆಗಳನ್ನು ಮಸೀದಿ ಕಮಿಟಿ ನೆರವೇರಿಸಿ ದಿಲ್ಲವೆಂದೋ, ಅಂತಹವರಿಗೆ ವಿವಾಹ ನೀಡುವುದಿಲ್ಲವೆಂದೊ, ಎಲ್ಲಾ ಸಂಘಟನೆಗಳೂ ಹೃದಯವಂತಿಕೆಯಿಂದ ತೀರ್ಮಾನ ಕೈಗೊಂಡರೆ ಪರಿಹಾರವಾಗುತ್ತಿತ್ತು, ವರದಕ್ಷಿಣೆಯ ಮೊತ್ತಕ್ಕನು ಮಸೀದಿ ಸಮಿತಿಗಳೂ ವಿವಾಹ ಸಮಾರಂಭವನ್ನು ಸುವವರೂ ಹಣ ಬೇಡವೆಂದರೆ ಮಾತ್ರ ಒಂದು ತೀರ್ಮಾನ ಕೈಗೊಳ್ಳಲು ಸಾಧ್ಯ. ಹಾಗೆ ರಿಸಿದರೆ ಆದೊಂದು ನಷ್ಟದ ವ್ಯಾಪಾರ ವಾ?

ಲ್ಲಿ ಮುಸ್ಲಿಮರ ಹಿಂದುಳಿದಿರುವಿಕೆಗೆ ಹಲವು ಧಾರ್ಮಿಕ ಗುರುಗಳು ಮಹಿಳೆಯರ ಮೇಲೆ ದಿಂದ ಹೇರುವ ವಿವೇಚನಾರಹಿತ ಗಳು ಅವುಗಳಲ್ಲಿ ಒಂದು ಕಾರಣವಾಗಿದೆ. , ಕಲೆ, ಶಾಸ್ತ್ರ ರಾಜಕೀಯ ಮುಂತಾದ ಹಿಳೆಯರು ಮುಂದುವರಿದ ಸಮಾಜಗಳಲ್ಲಿ ದ ಅಭಿವೃದ್ಧಿ ಸಾಧ್ಯ. ಸಮಾಜಕ್ಕೆ ಮುಖ್ಯವಾದ ವರು ತಾಯಿ ಮತ್ತು ಹೆಂಡತಿಯಾಗಿದ್ದಾರೆ.

■ ಎಂ.ಎಸ್. ಕಾರಶ್ಯೇರಿ
ಮಾತೃಭೂಮಿ 23, ಸೆಪ್ಟೆಂಬರ್ 2013
ಅನು, ಸಾರಾ ಅಬೂಬಕ್ಕರ್

# ಶ್ರೀ ರಾಮಸೇನೆಯನ್ನು ಮತ್ತು ಜಗದೀಶ ಕಾರಂತನನ್ನು ವಿಚಾರಣೆಗೆ ಒಳಪಡಿಸಬೇಕು

ಸಂಶೋಧಕ ಡಾ. ಎಂ. ಎಂ. ಕಲ್ಬುರ್ಗಿಯವರ ಅಮಾನುಷ ಹತ್ಯೆಯನ್ನು ವಿರೋಧಿಸಿ ಹತ್ಯೆ ಮಾಡಿದ ಹಂತಕರನ್ನು ಮತ್ತು ಹತ್ಯೆಯ ಹಿಂದಿರುವ ಶಕ್ತಿಗಳನ್ನು ಬಂಧಿಸಲು ಒತ್ತಾಯಿಸಿ ಹೋರಾಟ ಮಾಡುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದಿರುವ ಡಾ. ಎಂ. ಎಂ. ಕಲ್ಬುರ್ಗಿ ಹತ್ಯಾ ವಿರೋಧಿ ಹೋರಾಟ ವೇದಿಕೆಯು ಧಾರವಾಡದಲ್ಲಿ ಸೆ. 14ರಂದು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿತು. ಪ್ರತಿಭಟನೆಯಲ್ಲಿ ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಚಿಂತಕರು, ಸಾಹಿತಿಗಳು, ಕಲಾವಿದರು, ಪ್ರಗತಿಪರ ಸಂಘಟನೆಗಳ ನಾಯಕರು, ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿಭಟನಾ ಸಮಾವೇಶದ ನಂತರ ಹಂತಕರನ್ನು ಶೀಘ್ರವಾಗಿ ಬಂಧಿಸಲು ಸರ್ಕಾರದ ಮೇಲೆ ಒತ್ತಡ ಹಾಕಲೆಂದು ಎಂಟು ಹಕ್ಕೊತ್ತಾಯಗಳನ್ನುಳ್ಳ ಮನವಿಯನ್ನು ಸಲ್ಲಿಸಲಾಯಿತು. ಮನವಿ ಸಲ್ಲಿಸುವ ಮುನ್ನ ಮನವಿಗೆ ಸಹಿ ಹಾಕಿದವರೆಲ್ಲ ಉಪಸ್ಥಿತರಿದ್ದ ಬಹಿರಂಗ ಸಭೆಯಲ್ಲಿ ಮನವಿಯನ್ನು ಇಡಿಯಾಗಿ ಓದಲಾಯಿತು. ಮನವಿಯಲ್ಲಿದ್ದ ಹಕ್ಕೊತ್ತಾಯಗಳ ಬಗ್ಗೆ ಯಾರಿಂದಲೂ ತಕರಾರು ವ್ಯಕ್ತವಾಗದೆ ಇದ್ದಾಗ ಅಲ್ಲಿದ್ದವರ ಮೌಖಿಕ ಒಪ್ಪಿಗೆಯನ್ನು ಸ್ವೀಕೃತವೆಂದೇ ತಿಳಿದು ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಅವರಿಗೆ ಅಪರ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು. ಸರ್ಕಾರದ ಮೇಲೆ ಒತ್ತಡ ಹಾಕಲು ಮನವಿಯಲ್ಲಿ ಹೇಳಲಾಗಿರುವ ಹಕ್ಕೊತ್ತಾಯಗಳಿಗೆ ನಾವು ಈಗಲೂ ಬದ್ಧರಾಗಿದ್ದೇವೆ.

ನಾವು ಸಲ್ಲಿಸಿರುವ ಹಕ್ಕೊತ್ತಾಯಗಳಲ್ಲಿ ಎರಡನೆಯ ಹಕ್ಕೊತ್ತಾಯ ಹೀಗಿದೆ: 'ಈ ಕೊಲೆಯ ಹಿಂದೆ ಮತೀಯ ಹಿಂಸೆ ಮತ್ತು ಹುಸಿ ಧಾರ್ಮಿಕ ಶಕ್ತಿಗಳು ಇರುವ ಅನುಮಾನಗಳು ದಟ್ಟವಾಗಿವೆ. ಶ್ರೀರಾಮ ಸೇನೆ, ಮತೀಯ ಉಗ್ರ ಹಿಂದೂ ಸಂಘಟನೆಗಳು, ಮತೀಯ ಶಕ್ತಿಗಳನ್ನು ವಿಚಾರಣೆಗೆ ಒಳಪಡಿಸಬೇಕು. ಹಿಂದೆ ಕೊಲ್ಲುವ, ಕಡಿಯುವ, ಬಹಿರಂಗವಾಗಿ ಕೊಲ್ಲಲಿರುವವರ ಪಟ್ಟಿ ಪ್ರಕಟಿಸಿದ ಮತ್ತು ರಾಜ್ಯದಲ್ಲಿ ಶಸ್ತ್ರಾಸ್ತ್ರ ತರಬೇತಿ ನೀಡಿರುವ ಸುಳುಹು ಇರುವ ವ್ಯಕ್ತಿಗಳನ್ನು, ಸಂಘಟನೆಗಳನ್ನು ತೀವ್ರತರದ ವಿಚಾರಣೆಗೆ ಒಳಪಡಿಸಬೇಕು. ಈ ಶಕ್ತಿಗಳು ರಾಜ್ಯದಲ್ಲಿ ವಿಚಾರವಾದವನ್ನು ನಾಶ ಮಾಡುವ ವಿಶಾಲ ಕ್ಯಾನ್ವಾಸ್ ಹೊಂದಿರುವಂತಿದೆ. ಸರ್ಕಾರ ಈ ವಿಷಯದಲ್ಲಿ ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು.'

ನಾವು ಸಲ್ಲಿಸಿರುವ ಮನವಿಯ ಹಕ್ಕೊತ್ತಾಯಗಳಲ್ಲಿ ಶ್ರೀರಾಮ ಸೇನೆಯನ್ನೊಳಗೊಂಡು ಮತೀಯ ಸಂಘಟನೆಗಳನ್ನು ವಿಚಾರಣೆಗೆ ಒಳಪಡಿಸಬೇಕು ಎಂದು ಹೇಳಿದ್ದಕ್ಕೆ ಆ ಸಂಘಟನೆಗಳ ಬಗ್ಗೆ ಹುಟ್ಟಿಕೊಂಡಿರುವ ಅನುಮಾನಗಳೇ ಕಾರಣವಾಗಿವೆ. ವಿಚಾರಣೆ ಮಾಡಿದ ಮಾತ್ರಕ್ಕೆ ಯಾರೂ ಅಪರಾಧಿಗಳಾಗುವುದಿಲ್ಲ. ಆದರೆ ಮತೀಯ ಸಾಮರಸ್ಯ ಕದಡುವ, ಹಲ್ಲೆ ಮಾಡುವ ಪ್ರಕರಣಗಳಲ್ಲಿ ಇದೇ ಸಂಘಟನೆಯ ಕಾರ್ಯಕರ್ತರ ಪಾತ್ರವಿರುವುದನ್ನು ಬೇರೆಬೇರೆ ಕಡೆ ಪೊಲೀಸರ ಎಫ್‌ಐಆರ್‌ಗಳಲ್ಲಿ ಕಂಡುಬಂದಿದ್ದರ ಅನುಮಾನ ಶ್ರೀರಾಮಸೇನೆಯನ್ನು ವಿಚಾರಣೆಗೊಳಪಡಿಸಬೇಕು ಎಂದು ಹೇಳಿದ್ದಕ್ಕೆ ಕಾರಣವಾಗಿದೆ. ಡಾ. ಕಲ್ಬುರ್ಗಿ ಅವರ ಹತ್ಯೆಯಾದ ದಿನವೇ ಆ ಹತ್ಯೆಯನ್ನು ಸಮರ್ಥಿಸಿ, ಸಂಭ್ರಮಿಸಿ ಬಂಟ್ವಾಳದ ಭುವಿತ್ ಶೆಟ್ಟಿ, ಭಟ್ಕಳದ ಶಶಿಕಾಂತ್ ನಾಯ್ಕ್ ಇವರು ಸಾಮಾಜಿಕ ಅಂತರ್ಜಾಲಗಳಾದ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿ, ಫೇಸ್‌ಬುಕ್‌ನಲ್ಲಿ ಸ್ಟೇಟಸ್ ಹಾಕಿ ತಮ್ಮ ಮನಸ್ಥಿತಿಯನ್ನು ಬಹಿರಂಗವಾಗಿ ವ್ಯಕ್ತ ಮಾಡಿದ್ದಾರೆ. ಪೊಲೀಸ್ ವಿಚಾರಣೆಯಲ್ಲಿ ಅವರೆಲ್ಲ ಶ್ರೀರಾಮ ಸೇನೆಯ ಕಾರ್ಯಕರ್ತರೆಂದು ತಿಳಿದುಬಂದಿದೆ. ಕಲ್ಬುರ್ಗಿಯವರ ಹತ್ಯೆಯನ್ನು ಸಿಹಿ ಹಂಚುವ, ಪಟಾಕಿ ಸಿಡಿಸುವ, 'ಜೀವಮಾನದಲ್ಲಿ ಕುಂಕುಮವನ್ನೇ ಇಡದ ಹಿಂದೂ ವಿರೋಧಿ ಕಲ್ಬುರ್ಗಿ ಹಣೆಗೆ ಗುಂಡಿಟ್ಟು ಕುಂಕುಮವಿಟ್ಟಿದ್ದೇವೆ. ಈಗಾಗಲೇ ಮೂವರ ಸರದಿ ಮುಗಿಯಿತು, ಮುಂದಿನ ಗುರಿ ಕೆ. ಎಸ್. ಭಗವಾನ್' ಎಂದು ವಿಕೃತ ಮನಸ್ಸಿನ ಹೇಳಿಕೆ ಕೊಡುವುದರ ಮೂಲಕ ಹತ್ಯೆಯನ್ನು ಸಮರ್ಥಿಸಿ ಮತ್ತೊಂದು ಹತ್ಯೆಗೆ ಪ್ರಚೋದನೆ ನೀಡಿರುವ ಹೇಳಿಕೆಗಳು ಸಾಮಾಜಿಕ ಅಂತರ್ಜಾಲ ತಾಣಗಳಲ್ಲಿ ಹರಿದಾಡಿದವು. ಈ ಹಿನ್ನೆಲೆಯಲ್ಲಿ ಅಂತಹ ಹೇಳಿಕೆಯನ್ನು ಕೊಟ್ಟಿರುವ ಸಂಘಟನೆಗಳ ಕಾರ್ಯಕರ್ತರನ್ನು, ಸಂಘಟನೆಯನ್ನು ವಿಚಾರಣೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದೇವೆ. ಹಾಗೆ ಹೇಳಿಕೆ ನೀಡಿದವರ ಬಂಧನದ ಕ್ರಮದ ನಂತರವೂ ಕಲ್ಬುರ್ಗಿ



ನಂತರ ಭಗವಾನ್ ಎಂದು ತೋರಿಸುವ ಹತ್ಯಾ ಪ್ರಚೋದನೆಯ ಚಿತ್ರಗಳು ಜೈ ಶ್ರೀ ರಾಂ ಎಂಬ ಅನಾಮಧೇಯ ಅಕೌಂಟಿನಿಂದ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಅನುಮಾನಗಳಿಗೆ ಕಾರಣವಾಗುವಂತಹ ವರ್ತನೆ ತೋರುವ ಸಂಘಟನೆಗಳನ್ನು ವಿಚಾರಣೆ ಮಾಡಬೇಕು ಎಂದು ಹೇಳುವುದರಲ್ಲಿ ತಪ್ಪೇನಿದೆ?

ತಮ್ಮ ಸಂಘಟನೆಯ ಕಾರ್ಯಕರ್ತರ ಹತ್ಯಾ ಪ್ರಚೋದನಕಾರಿ ಹೇಳಿಕೆ ಮತ್ತು ಸಮರ್ಥನೆಯನ್ನು, ಅನಾಗರಿಕ ವರ್ತನೆಯನ್ನು ಖಂಡಿಸಿ ಕಾರ್ಯಕರ್ತರಿಗೆ ಬುದ್ಧಿ ಹೇಳಬೇಕಾದ ಪ್ರಮೋದ್ ಮುತಾಲಿಕ್ ಅವರು ಅದನ್ನು ಮರೆತುಬಿಟ್ಟಂತಿದೆ. 'ವಿಚಾರಣೆ ನಡೆದರೆ ನಡೆಯಲಿ, ನಮ್ಮ ಪಾತ್ರವೇ ಅದರಲ್ಲಿ ಇಲ್ಲ ಎಂದಾದ ಮೇಲೆ ಸತ್ಯ ಹೊರಬರುತ್ತದೆ' ಎಂದು ಹೇಳುವುದನ್ನು ಬಿಟ್ಟು ವಿಚಾರಣೆ ಮಾಡಬೇಕೆಂದು ಮನವಿ ಪತ್ರಕ್ಕೆ ಸಹಿ ಹಾಕಿದ ಚಿಂತಕರ, ಸಾಹಿತಿಗಳ, ವಿಚಾರವಾದಿಗಳಿಗೆ ನೋಟಿಸ್ ಕಳಿಸುವ ಪ್ರಕ್ರಿಯೆಗೆ ಮುಂದಾಗಿರುವುದು ಅವರ ಮನಸ್ಥಿತಿ ಮತ್ತು ವರ್ತನೆಗೆ ಹಿಡಿದ ಕನ್ನಡಿಯಾಗಿದೆ.

ಶ್ರೀರಾಮ ಸೇನೆ ಸಂಘಟನೆಯ ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷ ಪತ್ರಿಕಾಗೋಷ್ಠಿ ನಡೆಸಿ, 'ಶ್ರೀರಾಮ ಸೇನೆಯನ್ನು ವಿಚಾರಣೆ ಮಾಡಬೇಕೆಂದು ಹೇಳಿದ ಸಾಹಿತಿಗಳು ತಮ್ಮ ಹೇಳಿಕೆ ಹಿಂಪಡೆಯಬೇಕು; ಇಲ್ಲವಾದಲ್ಲಿ ನಾಡಿನ ಹೆಸರಾಂತ ಕವಿ ಚೆನ್ನವೀರ ಕಣವಿ, ಗಿರಡ್ಡಿ ಗೋವಿಂದರಾಜ್ ಅವರ ಮನೆಗಳನ್ನು ಧ್ವಂಸ ಮಾಡುತ್ತೇವೆ; ನಮಗೆ ನ್ಯಾಯಾಂಗದಲ್ಲಿ ನಂಬಿಕೆಯಿಲ್ಲ, ನಾವೇ ಕ್ರಮಗಳನ್ನು ಕೈಗೊಳ್ಳುತ್ತೇವೆ; ಶಸ್ತ್ರಾಸ್ತ್ರ ತರಬೇತಿಯನ್ನು ಮುಂದುವರೆಸುತ್ತೇವೆ' ಎನ್ನುವ ಹೇಳಿಕೆ ನೀಡಿದ್ದು ಶ್ರೀರಾಮ ಸೇನೆ ಸಂಘಟನೆಯ ವಿಧ್ವಂಸಕ ರೂಪವನ್ನು ಪ್ರತಿನಿಧಿಸುತ್ತದೆ. ಮನೆ ಧ್ವಂಸ ಮಾಡುವ ಬೆದರಿಕೆಯು ಸಾಮೂಹಿಕ ಹತ್ಯೆಯ ಬೆದರಿಕೆಯೂ ಆಗುತ್ತದೆ. ನ್ಯಾಯಾಂಗದಲ್ಲಿ ನಂಬಿಕೆಯಿಲ್ಲ ಎನ್ನುವುದು ಪ್ರಜಾಪ್ರಭುತ್ವ ವಿರೋಧಿಯೂ ಆಗುತ್ತದೆ. ಶಸ್ತ್ರಾಸ್ತ್ರ ತರಬೇತಿ ಮುಂದುವರೆಸುವುದು ಹಿಂಸೆಯ ಪ್ರಚೋದನೆ ಆಗುತ್ತದೆ. ಇಂತಹ ಕಾರ್ಯಕರ್ತರನ್ನು ತಯಾರು ಮಾಡಿರುವ ಸಂಘಟನೆಯನ್ನು ಈ ಹತ್ಯೆಯ ಪ್ರಕರಣದಲ್ಲಿ ತೀವ್ರವಾಗಿ ವಿಚಾರಣೆಗೆ ಒಳಪಡಿಸಬೇಕೆಂದು ಈಗಲೂ ಒತ್ತಾಯಿಸುತ್ತೇವೆ.

ನೆರೆಯ ಗೋವಾ ರಾಜ್ಯದಲ್ಲಿ ನಿಷೇಧಿಸಲ್ಪಟ್ಟಿರುವ, ಆ ನಿಷೇಧಕ್ಕೆ ಸುಪ್ರೀಂಕೋರ್ಟಿನ ಒಪ್ಪಿಗೆ ಮುದ್ರೆಯೂ ಬಿದ್ದಿರುವ ಶ್ರೀರಾಮ ಸೇನೆ ಸಂಘಟನೆಯು ಕರ್ನಾಟಕದಲ್ಲಿಯೂ ದುಷ್ಕೃತ್ಯಗಳಿಗೆ ಹೆಸರಾದ ಚರಿತ್ರೆ ಹೊಂದಿದೆ ಎನ್ನುವುದನ್ನು ಪೊಲೀಸ್ ವರದಿಗಳು ದೃಢಪಡಿಸುತ್ತ ಬಂದಿವೆ. ಮಂಗಳೂರಿನಲ್ಲಿ ನಡೆದ ಪಬ್ ದಾಳಿ ಅದಕ್ಕೆ ಒಂದು ಉದಾಹರಣೆ. ಈ ಪಬ್ ದಾಳಿಯಲ್ಲಿದ್ದ ಪ್ರಸಾದ್ ಅತ್ತಾವರನನ್ನು ಕಲ್ಬುರ್ಗಿಯವರ ಹತ್ಯಾ ವಿಚಾರವಾಗಿ ಟ್ವೀಟ್ ಮಾಡಿದ ಹಿನ್ನೆಲೆಯಲ್ಲಿ ಪೊಲೀಸರು ವಶಕ್ಕೆ ತೆಗೆದುಕೊಂಡು ವಿಚಾರಣೆ ಮಾಡಿದ್ದಾರೆ. ಈತ ಶ್ರೀರಾಮ ಸೇನೆ ಸಂಘಟನೆಯವನು ಎಂಬುದನ್ನು ಪೊಲೀಸ್ ವರದಿಯೇ ದೃಢಪಡಿಸಿದೆ. ಮಂಗಳೂರಿನಲ್ಲಿ ಅನೈತಿಕ ಪೊಲೀಸ್‌ಗಿರಿ ಮಾಡುತ್ತ ಮತೀಯ ಸಾಮರಸ್ಯ ಕದಡಿ ಭಯ ಹುಟ್ಟಿಸುವವರ ವಿಚಾರಣೆ ನಡೆಯಬೇಕಿದೆ. ಇದಲ್ಲದೆ ಹುಬ್ಬಳ್ಳಿಯಲ್ಲಿ ನಡೆದ ನ್ಯಾಯಾಲಯದ ಮೇಲಿನ ಬಾಂಬ್ ದಾಳಿ, ಬಿಜಾಪುರದ ಸಿಂದಗಿಯಲ್ಲಿ ಹಾರಿಸಿದ ಪಾಕಿಸ್ತಾನ ಧ್ವಜದ ಪ್ರಕರಣ, ಅಥಣಿಯಲ್ಲಿ ನಡೆದ ಆಸಿಡ್ ದಾಳಿಯ ಪ್ರಕರಣ, ಐದು ಕೊಲೆಗಳ ಪ್ರಕರಣದಲ್ಲಿ ಶ್ರೀರಾಮ ಸೇನೆ ಕಾರ್ಯಕರ್ತರ ಪಾತ್ರವಿರುವುದನ್ನು ಪೊಲೀಸ್ ವರದಿಗಳು ದೃಢಪಡಿಸಿವೆ. ಇಂಥ ದುಷ್ಕೃತ್ಯ ಎಸಗುವ ಕಾರ್ಯಕರ್ತರಿರುವ ಶ್ರೀರಾಮ ಸೇನೆ ಮೇಲೆ ಅನುಮಾನಗಳು ಹುಟ್ಟಿಕೊಳ್ಳುವುದು ಸಹಜವೇ. ಈ ಕಾರಣಕ್ಕಾಗಿಯೇ ಆ ಸಂಘಟನೆಯನ್ನು ವಿಚಾರಣೆಗೊಳಪಡಿಸಬೇಕು.

ಮಹಾರಾಷ್ಟ್ರದಲ್ಲಿ ನಡೆದ ಪನ್ಸಾರೆ ಹತ್ಯೆ ಪ್ರಕರಣದಲ್ಲಿ ಬಂಧಿತವಾಗಿರುವ ವ್ಯಕ್ತಿ ಸನಾತನ ಸಂಸ್ಥೆಗೆ ಸೇರಿದವನಾಗಿದ್ದು ಆ ಸಂಸ್ಥೆಯ ಬೇರುಗಳು ಕರ್ನಾಟಕದಲ್ಲಿ ಹರಡಿಕೊಂಡಿದ್ದು ಹುಬ್ಬಳ್ಳಿ ಧಾರವಾಡದಲ್ಲೂ ಇವೆ. ಈ ಬಗ್ಗೆ ಪೊಲೀಸರು ವಿಚಾರಣೆ ನಡೆಸಬೇಕು ಮತ್ತು ಈ ಸನಾತನ ಸಂಸ್ಥೆಗೂ, ಶ್ರೀರಾಮ ಸೇನೆಗೂ ಇರುವ ಸಂಬಂಧದ ಬಗ್ಗೆಯೂ ವಿಚಾರಣೆ ನಡೆಸಿ ಸತ್ಯವನ್ನು ಬಹಿರಂಗಪಡಿಸುವ ಅಗತ್ಯವಿದೆ.

ಡಾ. ಎಂ. ಎಂ. ಕಲ್ಬುರ್ಗಿಯವರು ಮೂರ್ತಿ ಪೂಜೆಯನ್ನು ವಿರೋಧ ಮಾಡಿದ್ದೇ ಅವರ ಹತ್ಯೆಗೆ ಪ್ರಚೋದನೆ ನೀಡಿದೆ. ಬಿಸಿರಕ್ತದ ತರುಣರು ಅವರನ್ನು ಹತ್ಯೆ ಮಾಡಿರಬಹುದು ಎಂದು ಹೇಳಿರುವ ಹಿಂದೂ ಜಾಗರಣ ವೇದಿಕೆಯ ಜಗದೀಶ ಕಾರಂತ ಪರೋಕ್ಷವಾಗಿ ಈ ಹತ್ಯೆಯನ್ನು ಮತಾಂಧ ಯುವಕರು ಮಾಡಿದ್ದಾರೆಂದು ಒಪ್ಪಿಕೊಂಡಂತಾಗಿದೆ. ಕಲ್ಬುರ್ಗಿ ಮತ್ತು ಭಗವಾನ್ ಒಳಗೊಂಡಂತೆ ವಿಚಾರವಾದಿಗಳನ್ನು ಹಿಂಸಿಸಬೇಕಾದ ವಿಧಾನಗಳ ಬಗ್ಗೆ ಈತ ಆಡಿದ ಮಾತುಗಳು ಜೀವವಿರೋಧಿಯಾಗಿವೆ. ಈ ಜಗದೀಶ ಕಾರಂತನನ್ನು ತಕ್ಷಣ ಬಂಧಿಸಿ ವಿಚಾರಣೆಗೊಳಪಡಿಸಿದಲ್ಲಿ ಹತ್ಯೆಯ ಸಂಚಿನ ವಿವರಗಳು ಪತ್ತೆಯಾಗುವ ಸಾಧ್ಯತೆಗಳಿವೆ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ನಾವೆಲ್ಲ ಒತ್ತಾಯಿಸುತ್ತಿದ್ದೇವೆ.

■ ಡಾ. ಬಾಳಣ್ಣ ಶೀಗಿಹಳ್ಳಿ, ಬಸವಪ್ರಭು ಹೊಸಕೇರಿ, ಶಂಕರ ಹಲಗತ್ತಿ, ಬಸವರಾಜ ಸೂಳಿಭಾವಿ, ಡಾ. ರಾಜೇಂದ್ರ ಪೋದ್ದಾರ, ಡಾ. ಎಂ.ಡಿ.ವಕ್ಕುಂದ, ಲಕ್ಷ್ಮಣ ಬಕ್ಕಾಯಿ, ಬಿ. ಮಾರುತಿ, ಬಿ. ಐ. ಈಳಿಗೇರ್, ಡಾ. ವಿನಯಾ, ವಿಠ್ಠಲ ಕೊಪ್ಪದ್, ಡಾ. ಬಿ. ಜೆ. ಬಿರಾದಾರ ಮತ್ತು ಲಂಕೇಶ್ ಬಳಗ

# ಅಸಂಗತ ವಿಜ್ಞಾನ ಲೋಕದ ಇಗ್-ನೊಬೆಲ್ ಸಂಗತಿಗಳ

ಅನುರಣನ




ಡಾ. ಟಿ.ಎಸ್. ಚನ್ನೇಶ್
channeshts@gmail.com

ವಿಜ್ಞಾನವು ಜಗತ್ತಿನ ವಿಜ್ಞಾನ ಲೋಕದಲ್ಲಿ ಪ್ರತೀ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಸಂಭ್ರಮದ ಕಾಲ. ಅಕ್ಟೋಬರ್‌ನಲ್ಲಿ ನೊಬೆಲ್ ಬಹುಮಾನಗಳ ಕುರಿತು ಮೊದಲ ಘೋಷಣೆಗಳಾದರೆ, ಡಿಸೆಂಬರ್‌ನಲ್ಲಿ ಬಹುಮಾನಗಳನ್ನು ಆ ವರ್ಷ ಪಡೆದ ಆಯಾ ವಿಜ್ಞಾನಿಗಳಿಗೆ ವೈಭವಯುತವಾದ ಸಮಾರಂಭದಲ್ಲಿ ಕೊಡಲಾಗುತ್ತದೆ. ಅದೊಂದು ವಿಜ್ಞಾನದ ದೊಡ್ಡ ಹಬ್ಬ. ವಿಜ್ಞಾನದ ಸಂಶೋಧನೆಗಳು ಎಲ್ಲ ರೀತಿಯಲ್ಲಿ ಇರುವುದುಂಟು. ನೊಬೆಲ್ ಬಹುಮಾನಕ್ಕೆ ಯೋಗ್ಯವಾದವು ಮನುಕುಲಕ್ಕೆ ಆದ, ಆಗುವ ಒಳಿತು ಮತ್ತು ಉಪಯೋಗಗಳ ಬಗೆಗೆ ಒರೆಹಚ್ಚಿ ನೋಡಿದವು. ಆದರೂ ಕೆಲವೊಂದು ವೈಜ್ಞಾನಿಕ ಸಂಶೋಧನೆಗಳು ಮೊದಲು ತಮಾಷೆಯಾಗಿಯೂ ನಂತರ ಯೋಚನೆಗೆ ಹಚ್ಚುವ ಅನೇಕ ಸಂಗತಿಗಳನ್ನು ಒಳಗೊಂಡಿರಲು ಸಾಧ್ಯವಿದೆ. ಹೀಗೆ ಇಂತಹ ಮೊದಲ ನೋಟಕ್ಕೆ ಬಹು ದೊಡ್ಡ ತಮಾಷೆಯಾಗಿ, ಅರೇ ಹೌದಾ ಇಂತಹದ್ದೆಲ್ಲಾ ಮಾಡಿ ವಿಜ್ಞಾನದಲ್ಲಿ ಸೈ ಎನಿಸಿಕೊಳ್ಳುತ್ತಾರೆಯೇ ಎನಿಸಿದರೂ, ನಂತರ ಅರೇ ಯಾಕಿರಬಾರದು? ಹೀಗೂ ಉಂಟಲ್ಲ! ಅನ್ನಿಸಿ ಒಂದಷ್ಟು ಆ ಕುರಿತು ಹೊಸ ಆಲೋಚನೆಗಳನ್ನು ಸೃಜಿಸುವ ಸಂಶೋಧನೆಗಳು ವಿಜ್ಞಾನ ಲೋಕದಲ್ಲಿ ನಡೆಯುತ್ತವೆ. ನಮಗೆ ಬಹಳ ಸಹಜವಾಗಿ ವಿಜ್ಞಾನವೆಂದರೆ ಅದೊಂದು ಗಂಭೀರವಾದ, ತುಂಬಾ ತೀಕ್ಷ್ಣವಾದ ಆಲೋಚನೆಗೆ ಹಚ್ಚುವ ಸಂಗತಿ ಮಾತ್ರವೇ ಅನ್ನಿಸಿರಬಹುದು. ಆದರೆ ಹಾಗೇನಿಲ್ಲ, ವಿಜ್ಞಾನಿಗಳೂ ಮನುಷ್ಯರೇ ಅಲ್ಲವೇ? ಅವರ ಆಲೋಚನೆ, ವರ್ತನೆಯಲ್ಲೂ ತಮಾಷೆಗಳಿದ್ದಿರಬಹುದು. ಅವನ್ನು ಸಂಶೋಧನೆಗೆ ಒಳಪಡಿಸಿ ಕೆಲವು ವಿಚಿತ್ರವಾದ ಸಂಗತಿಗಳನ್ನೂ ಹಂಚಿಕೊಂಡಿರಬಹುದು. ಅವನ್ನೆಲ್ಲಾ ಗುರುತಿಸಿ ಅವಕ್ಕೂ ವಿಶೇಷ ಬಹುಮಾನಗಳನ್ನು ಕೊಡುವದೇ ಇಗ್-ನೊಬೆಲ್.

ಇಗ್-ನೊಬೆಲ್ ಮೇಲುನೋಟಕ್ಕೆ ಅಯ್ಯೋ ಈ ಬಹುಮಾನ ಬಂತೇ? ಎಂಥ ಅವಮಾನ ಆಯ್ತೋ ಎನ್ನಿಸಬೇಕಿಲ್ಲ. ಇಗ್-ನೊಬೆಲ್ ಸಂಗತಿಗಳು ಮೊದಲು ಒಂದು ತಮಾಷೆಯ ಸಂಗತಿಯನ್ನು ಹೇಳುತ್ತಲೇ, ನಂತರ ಒಂದಷ್ಟು ಯೋಚನೆಗೆ ಹಚ್ಚುವ ಸಂಶೋಧನೆಗಳನ್ನು ಜಾಗತಿಕವಾಗಿ ಒರೆಹಚ್ಚಿಯೇ ನೋಡಿ ಕೊಟ್ಟ ಬಹುಮಾನ. ನೊಬೆಲ್ ಹಾಗೂ ಇಗ್-ನೊಬೆಲ್ ಎರಡೂ ಬಹುಮಾನಗಳನ್ನು ಗೌರವಿಸುವವರಿದ್ದಾರೆ, ಎರಡನ್ನೂ ಪಡೆದ ವಿಜ್ಞಾನಿಯೂ ಇದ್ದಾರೆ. ಅಸಂಗತ ಜೀವನದ ಭಾಗವೇ ಅಲ್ಲವೇ? ವಿಜ್ಞಾನದ ಶೋಧಗಳೂ ಇದಕ್ಕೆ ಹೊರತಲ್ಲ ಎನ್ನುವುದಕ್ಕಾಗಿಯೇ ಇಗ್-ನೊಬೆಲ್ ಹುಟ್ಟಿದೆ. ಇದೊಂದು ತಮಾಷೆ ಮಾಡುವ, ವಿಜ್ಞಾನಿಗಳ ಶೋಧವನ್ನು ಗೇಲಿ ಮಾಡುವ ಸಂಗತಿಯಾಗಿದೆ ನಿಜ. ಆದರೂ ಇದೊಂದು ವಿಜ್ಞಾನದ ಸೃಜನಶೀಲ ತಮಾಷೆಯನ್ನು ಒಳಗೊಂಡಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಸಮಾಧಾನ ಏನೆಂದರೆ ನೊಬೆಲ್‌ನಲ್ಲಿ ಹೆಚ್ಚು ಪಾತ್ರವನ್ನು ಪಡೆಯದ ಭಾರತೀಯರು ಇಗ್-ನೊಬೆಲ್‌ನಲ್ಲಿ ಸಾಕಷ್ಟು ಹೆಸರು ಮಾಡಿ ಇಗ್-ನೊಬೆಲ್ ಭಾರತೀಯರಾಗಿದ್ದಾರೆ. ಸಾಕಷ್ಟು ಸಂಖ್ಯೆಯಲ್ಲಿ ಇಗ್-ನೊಬೆಲ್ ಪಡೆದವರಲ್ಲಿ ನಮ್ಮವರ ಪಾಲೂ ಇದೆ ಎಂಬುದು ಮಾತ್ರ ಸ್ವಲ್ಪ ಕಷ್ಟಪಟ್ಟು ಜೀರ್ಣಿಸಿಕೊಳ್ಳಬೇಕಾದ ಸಂಗತಿ. ಅಷ್ಟರಮಟ್ಟಿಗೆ ವಿಜ್ಞಾನದ ಸಂಶೋಧನೆಯನ್ನು ಸೃಜನಶೀಲತೆಯಲ್ಲಿ ವಿಕಸಿಸಿದ ಸಂಗತಿ ಎಂತಾದರೆ ಅದೂ ಒಂದು ಬಗೆಯ ಸಮಾಧಾನವೇ!

## ಇಗ್-ನೊಬೆಲ್ ಮತ್ತು ನೊಬೆಲ್

ಇಗ್-ನೊಬೆಲ್ ಸಾಮಾನ್ಯವಾಗಿ ವಿಚಿತ್ರವಾದ ಸಂಗತಿಗಳ ಸಂಶೋಧನೆಗಳನ್ನು ಜಗತ್ತಿಗೆ ಸಾರುತ್ತವೆ. ಅಂದರೆ ಇಗ್-ನೊಬೆಲ್ ಪಡೆದ ಸಂಶೋಧಕರು ನಗೆಪಾಟಲಿಗೆ ಈಡಾಗುತ್ತಾರೆ ಅಂತಿದ್ದರೆ, ಇಲ್ಲೊಂದು ವಿಚಿತ್ರವಿದೆ. ಇಗ್-ನೊಬೆಲ್ ಪುರಸ್ಕಾರವನ್ನು ನೊಬೆಲ್ ಪುರಸ್ಕೃತರಿಂದಲೇ ನೀಡಲಾಗುತ್ತದೆ. ಇಗ್-ನೊಬೆಲ್ ಪಡೆದವರೂ ನೊಬೆಲ್ ಪಡೆದಿದ್ದಾರೆ. ಜತೆಗೆ ಇಗ್-ನೊಬೆಲ್ ಜತೆಗೆ ನಿರಂತರವಾಗಿ ಸಂಬಂಧವಿದ್ದ ಹಾಗೂ ಅದರ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದ ವಿಜ್ಞಾನಿಗೂ ನೊಬೆಲ್ ಪಾರಿತೋಷಕ ಬಂದಿದೆ. ರಾಯ್ ಗ್ಲಾಬರ್ ಎಂಬ ವಿಜ್ಞಾನಿಯು ನಿರಂತರವಾಗಿ ಇಗ್-ನೊಬೆಲ್ ಬಹುಮಾನ ಕೊಡುವ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಸಾಲದಕ್ಕೆ ಆ ಸಮಾರಂಭದಲ್ಲಿ ಪ್ರೇಕ್ಷಕರು ಎಸೆಯುವ ಕಾಗದದ ಏರೋಪ್ಲೇನ್‌ಗಳನ್ನು ಗುಡಿಸುವ ಕೆಲಸದಲ್ಲಿ ನಿರತರಾಗಿರುತ್ತಿದ್ದರು. ಪ್ರತೀ ಸಮಾರಂಭದಲ್ಲೂ ಸ್ಟೇಜಿನ ಮೇಲೆ ಪೊರಕೆ ಹಿಡಿದು ಗುಡಿಸುತ್ತಿದ್ದ ರಾಯ್ ಗ್ಲಾಬರ್ 2005ರ ಸಮಾರಂಭದಲ್ಲಿ ಭಾಗವಹಿಸಲಿಲ್ಲ, ಏಕೆಂದರೆ ಆಗ ಅವರು ತಮ್ಮ ನೊಬೆಲ್ ಬಹುಮಾನ ಪಡೆಯಲು ಸ್ಟಾಕ್‌ಹೋಂ ಕಡೆಗೆ ಪಯಣಿಸುತ್ತಿದ್ದರು ಮತ್ತೂ ಅಚ್ಚರಿಯ ಸಂಗತಿ ಎಂದರೆ ಆಂಡ್ರೆ ಗೈಮ್ ಎಂಬ ವಿಜ್ಞಾನಿಯೂ ನೊಬೆಲ್ ಹಾಗೂ ಇಗ್-ನೊಬೆಲ್ ಎರಡೂ ಬಹುಮಾನಗಳನ್ನು ವೈಯಕ್ತಿಕವಾಗಿ ಪಡೆದ ಏಕೈಕ ವ್ಯಕ್ತಿಯಾಗಿದ್ದಾರೆ. 2000ದಲ್ಲಿ ಜೀವಂತ ಕಪ್ಪೆಯನ್ನು ಕಾಂತದಿಂದ ಮೇಲುತ್ತುವ ಕುರಿತ ಶೋಧಕ್ಕೆ ಇಗ್-ನೊಬೆಲ್ ಪಡೆದ ಆಂಡ್ರೆ ಗೈಮ್ ಎರಡೂ ಬಹುಮಾನಗಳಿಗೆ ಭಾಜನರಾದವರು. ಆಂಡ್ರೆ ಗೈಮ್ ಅವರಿಗೆ 2010ರ ಭೌತಶಾಸ್ತ್ರದ ನೊಬೆಲ್ ಪಾರಿತೋಷಕವನ್ನು ನೊವೊಸೆಲೊವ್ ಅವರ ಜತೆ ಗ್ರಾಫೀನ್ ಕುರಿತ ಸಂಶೋಧನೆಗೆ ಹಂಚಿಕೊಂಡರು. ನೊಬೆಲ್ ಹಾಗೂ ಇಗ್-ನೊಬೆಲ್ ಎರಡೂ ಬಹುಮಾನಗಳ ಬಗ್ಗೆ



ಇಗ್-ನೊಬೆಲ್ ಪ್ರದರ್ಶಿಸುತ್ತಿರುವ ಮರ್ಕ್ ಅಬ್ರಹಂ

ಪ್ರತಿಕ್ರಿಯಿಸುತ್ತಾ ಆಂಡ್ರೆ ಗೈಮ್ ಹೀಗೆಂದಿದ್ದಾರೆ: "ನಿಜ ಹೇಳಬೇಕೆಂದರೆ ನನಗೆ ಎರಡೂ ಬಹುಮಾನಗಳು ಒಂದೇ. ಜನಕ್ಕೆ ನಾನು ತಮಾಷೆ ಮಾಡಬಲ್ಲೆ ಎಂಬುದನ್ನೂ ತೋರಿಸಿದೆ." ಗ್ರಾಫೀನ್ ಕುರಿತ ಅವರ ಶೋಧವು ಮನುಕುಲವನ್ನು ಪ್ಲಾಸ್ಟಿಕ್ ಬದಲಿಸಿದಂತೆ ಮುಂದೊಂದು ದಿನ ಹೊಸ ಆಯಾಮವನ್ನು ತೆರೆಯಲಿದೆ ಎಂದೇ ವಿಶ್ಲೇಷಿಸಲಾಗಿದೆ.

## ಇಗ್-ನೊಬೆಲ್ ಬಹುಮಾನದ ಆರಂಭ

ವಿಜ್ಞಾನದಲ್ಲಿ ಕೆಲವೊಮ್ಮೆ ನಂಬಲು ಅಸಾಧ್ಯವಾದ ಸಂಶೋಧನೆಗಳು ನಡೆಯುತ್ತವೆ. ಹೀಗೂ ಉಂಟಾ ಅನ್ನಿಸುವ ಸಂಗತಿಗಳವು. ಅಂತಹುದಕ್ಕೂ ಒಂದು ವಿಶೇಷ ವಿಜ್ಞಾನದ ಪತ್ರಿಕೆಯೇ ಇದೆ. ಅದನ್ನು ನಂಬಲು ಅಸಾಧ್ಯವಾದ ಸಂಶೋಧನೆಯ ವಾರ್ಷಿಕ ಪತ್ರಿಕೆಯೂ ಇದೆ.

'ಅನ್ನುಯಲ್ಸ್ ಆಫ್ ಇಂಪ್ರಾಬಬಲ್ ರೀಸರ್ಚ್' ಎಂದೇ ಅದರ ಹೆಸರು. ಈ ಪತ್ರಿಕೆಯ ಸಂಪಾದಕ ಹಾಗೂ ಸಹ ಆಯೋಜಕರಾದ ಮರ್ಕ್ ಅಬ್ರಹಂ ಎಂಬಾತ 1991ರಲ್ಲಿ ಇಗ್-ನೊಬೆಲ್ ಬಹುಮಾನಗಳನ್ನು ಆರಂಭಿಸಿದ. ಆರಂಭದ ಸಂದರ್ಭದಲ್ಲಿ ಮತ್ತೆ ಅವನ್ನು ಮಾಡಲಾಗದು ಎನ್ನುವಂತಹ ಶೋಧಗಳನ್ನು ಹೆಕ್ಕಿ ಅವಕ್ಕೆ ಬಹುಮಾನಿಸಲಾಗುತ್ತಿತ್ತು, ಅಂದರೆ ಒಂದು ರೀತಿಯಲ್ಲಿ ವಿಜ್ಞಾನದ ಮೂಲ ತತ್ವಕ್ಕೆ ಭಿನ್ನವಾದ ಸಂಗತಿ. ವಿಜ್ಞಾನವು ಪುನರಾವರ್ತಿಸುವುದನ್ನು, ಮತ್ತೆ ಮತ್ತೆ ಅದನ್ನೇ ಮಾಡುವುದನ್ನು ಒಪ್ಪಿಕೊಂಡ ವಿಚಾರ. ಆದರೆ ಇಲ್ಲಿ ಒರೆಹಚ್ಚುವುದು ವಿಜ್ಞಾನದಲ್ಲೆ ಮತ್ತೆ ಮತ್ತೆ ಮಾಡಲಾಗದ ಸಂಶೋಧನೆಗಳನ್ನು ಅವುಗಳ ಫಲಿತ ಸಮೇತ ಜಗತ್ತಿಗೆ ಸಾರುವುದು. ಮೊದಲು ಅದಕ್ಕೆಂದೇ ವಿಚಿತ್ರವಾದ ವಿಜ್ಞಾನ ಪತ್ರಿಕೆಯೂ ಇತ್ತು ಅದು ಪುನಃ ಪಡೆಯಲಾಗದ ಫಲಿತಗಳ ವೈಜ್ಞಾನಿಕ ಪತ್ರಿಕೆಯೆಂದೇ ಹೆಸರಾಗಿತ್ತು, ಆ ಪತ್ರಿಕೆಯಲ್ಲಿಯೇ ಕೆಲಸ ನಿರ್ವಹಿಸುತ್ತಿದ್ದ ಮರ್ಕ್ ಅಬ್ರಹಂ ಹೊರಬಂದು ತನ್ನ ಗೆಳೆಯರೊಂದಿಗೆ ಅನ್ನುಯಲ್ಸ್ ಆಫ್ ಇಂಪ್ರಾಬಬಲ್ ರೀಸರ್ಚ್ ಪತ್ರಿಕೆಯನ್ನು ಆರಂಭಿಸಿದ. ಈತನೇ 1991ರಿಂದ ಆರಂಭಿಸಿದ ಇಗ್-ನೊಬೆಲ್ ಬಹುಮಾನ ಕೊಡುವ ಸಂಪ್ರದಾಯ ಇನ್ನೂ ಮುಂದುವರೆದಿದೆ. ಅಂದಿನಿಂದ ಇಂದಿನವರೆಗೂ ಆತನೇ ಆ ಸಮಾರಂಭದ ಮುಖ್ಯ ನಿರೂಪಕನಾಗಿಯೂ ಕಾಣಿಸಿಕೊಳ್ಳುತ್ತಿರುತ್ತಾನೆ.

ಮೊದಲು ಆರಂಭವಾದಾಗ ಸಂದರ್ಭ ಹೊರತುಪಡಿಸಿದರೆ ಮಿಕ್ಕೆಲ್ಲಾ ಸಂದರ್ಭಗಳಲ್ಲೂ ವೈಜ್ಞಾನಿಕ ಸಂಶೋಧನೆಗಳನ್ನೇ ಆಧರಿಸಿ ಬಹುಮಾನಿಸಲಾಗಿದೆ. ಮೊದಲ ವರ್ಷ ಮಾತ್ರ ಮೂರು ಮಂದಿ ವಿಜ್ಞಾನಿಗಳು ಅಚಾನಕ್‌ಆಗಿ ತಮ್ಮ ಸುಳ್ಳು ಆವಿಷ್ಕಾರಗಳನ್ನು ಪ್ರಚುರಪಡಿಸಿ ಬಹುಮಾನ ಪಡೆದಿದ್ದರು. ಆದರೆ ಅದರ ನಂತರ ವಿಜ್ಞಾನದ ಶೋಧಗಳೇ ಆಗಿರುವುದನ್ನು ಖಾತ್ರಿಪಡಿಸಿಕೊಂಡು ನೀಡಲಾಗುತ್ತಿದೆ. ಆದರೂ ಒಂದೆರಡು ಸಂಗತಿಗಳ ಬಗೆಗೆ ತಕರಾರುಗಳು ಉಂಟು. ಅವೆಂದರೆ ಹೋಮಿಯೋಪತಿ ಕುರಿತ ಸಂಶೋಧನೆಗೆ ಬಹುಮಾನ ಕೊಟ್ಟದ್ದು ಅಲ್ಲದೆ, ಜೀವವಿಕಾಸ ಬಗೆಗೆ ವಿಭಿನ್ನ ನಿಲುವು ಉಳ್ಳ ಕೊಲಾರೆಡೊ ರಾಜ್ಯದ ಶಿಕ್ಷಣ ಮಂಡಳಿಗೆ ವಿಜ್ಞಾನ ಶಿಕ್ಷಣಕ್ಕಾಗಿ ಬಹುಮಾನ ಕೊಟ್ಟದ್ದೂ ಸೇರಿದೆ. ಇಂತಹ ಒಂದೆರಡು ಘಟನೆಗಳ ಹೊರತುಪಡಿಸಿದರೆ ಇಗ್-ನೊಬೆಲ್ ಕೂಡ ವಿಜ್ಞಾನದ ಸಂಶೋಧನೆಗಳನ್ನು ಆಧರಿಸಿಯೇ ಬಹುಮಾನಗಳನ್ನು ಕೊಡುತ್ತಾ ಬಂದಿದೆ. ಇಗ್-ನೊಬೆಲ್ ಪಡೆದ ಸಂಶೋಧನೆಗಳೂ ವಿಚಿತ್ರವಾದ ಮಹತ್ವದ ವಿಚಾರಗಳನ್ನು ಒಳಗೊಂಡ ಬಗ್ಗೆ ಮಾಹಿತಿಗಳಿವೆ. ತಣ್ಣಗೆ ತಮಾಷೆ ಮಾಡಿದರೂ ಶೋಧಗಳು ಚಿಂತನೆಗೆ ಹಚ್ಚುವ ಅನೇಕ ಉದಾಹರಣೆಗಳಿವೆ. ಒಮ್ಮೆ ಒಂದು ಬಹುಮಾನಿತ ಶೋಧದಿಂದ ಹೊರಹೊಮ್ಮಿದ ಸಂಗತಿಯಿಂದ ಕೃಷ್ಣ ರಂಧ್ರ (ಬ್ಲಾಕ್ ಹೋಲ್)ಗಳು ನರಕಕ್ಕೆ ಸಮೀಕರಿಸಿ ಅಲ್ಲಿ ನರಕಕ್ಕೆ ಅಗತ್ಯವಾದ ಎಲ್ಲಾ ತಾಂತ್ರಿಕ ಅವಶ್ಯಕತೆಗಳಲ್ಲಿರುವ ಮಾತುಗಳ ಪ್ರಚುರಪಡಿಸಿದ ಸಂಶೋಧನೆಯೂ ಇಗ್-ನೊಬೆಲ್ ಪಟ್ಟಿಯಲ್ಲಿದೆ. ಅದು ಸಾಲದೆಂಬಂತೆ ನೆಲಕ್ಕೆ ಬಿದ್ದ ತಿನ್ನುವ ವಸ್ತುವನ್ನು ಐದೇ ಸೆಕೆಂಡುಗಳಲ್ಲಿ ಎತ್ತಿ ತಿಂದರೆ ಹಾನಿಕಾರಕವಲ್ಲ ಎಂದು ಸಂಶೋಧಿಸಿ "ಐದು ಸೆಕೆಂಡುಗಳ ನಿಯಮ" ಸಾರಿದ ಸಂಗತಿಯೂ ಇಗ್-ನೊಬೆಲ್ ಬಹುಮಾನಿತವೇ. ಎಷ್ಟೆಲ್ಲಾ ವಿಚಿತ್ರಗಳೇ ಆದರೂ ಅವೂ ಕೂಡ ವಿಜ್ಞಾನಲೋಕದ ಶೋಧಗಳೇ ಎಂಬುದು ಮಾತ್ರ ಗಮನಾರ್ಹವಾದ ವಿಚಾರ.

## ಇಗ್-ನೊಬೆಲ್ ಸಮಾರಂಭದ ತಮಾಷೆಗಳು

ಇಗ್-ನೊಬೆಲ್ ಪಡೆಯುವುದೆಂದರೆ ತಮ್ಮ ಅಸಂಗತ ಸಂಶೋಧನೆಯ ಹಾಸ್ಯಾಸ್ಪದ ಸಂದರ್ಭವನ್ನು ಜಗತ್ತಿನೊಂದಿಗೆ ಹಂಚಿಕೊಂಡಂತೆ. ಹಾಗೆಯೇ ಇಗ್-ನೊಬೆಲ್ ಬಹುಮಾನ ಕೊಡುವ ಸಮಾರಂಭವೂ ಬಹು ದೊಡ್ಡ ಹಾಸ್ಯಾಸ್ಪದ ನಿರೂಪಣೆಯೆ! ಈ ಸಮಾರಂಭ ಪ್ರತಿ ವರ್ಷವೂ ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆಯುತ್ತಿತ್ತು, ಇದೀಗ ಹಾರ್ವರ್ಡ್ ವಿಶ್ವವಿದ್ಯಾಲಯದ ಸ್ಯಾಂಡರ್ಸ್ ಹಾಲ್‌ನಲ್ಲಿ ನಡೆಯುತ್ತದೆ. ಎಲ್ಲಾ ಸಮಾರಂಭಗಳಲ್ಲೂ ಸಂಪೂರ್ಣ ತಮಾಷೆಯ ಸನ್ನಿವೇಶಗಳನ್ನು ಒಳಗೊಂಡಂತೆ ಆಯೋಜಿಸಿರುತ್ತಾರೆ. ಆದಕ್ಕೆಂದೆ ಏನೋ ಬಹುಮಾನ ಪಡೆದವರೆಲ್ಲರೂ ಭಾಗವಹಿಸುವುದಿಲ್ಲ, ಕೆಲವರು ಮಾತ್ರವೇ ಬಂದು ಬಹುಮಾನ ಪಡೆಯುತ್ತಾರೆ. ಬಹುಮಾನ ಎಂದರೇನು 10 ಟ್ರಿಲಿಯನ್ ಡಾಲರ್‌ಗಳು. ಅಮೆರಿಕಾ ಡಾಲರ್ ಅಲ್ಲ! ಜಿಂಬಾಬ್ವೆ ಡಾಲರ್! ಅದರ ಮೊತ್ತ ಕಾಸಿನ ಲೆಕ್ಕದಲ್ಲಿದ್ದಂತೆ. 600 ಡಾಲರ್‌ಗೆ 100 ರೂಪಾಯಿಗಳು ಮಾತ್ರ! ಅದು ಬಿಡಿ, ಅದಕ್ಕೆಂದೇ ಜಿಂಬಾಬ್ವೆ ಡಾಲರ್ ನೋಟೊಂದನ್ನು ಮುದ್ರಿಸಿ ಕೊಡಲಾಗುತ್ತದೆ. ಅದನ್ನು ನಿಜವಾದ ನೊಬೆಲ್ ಪಾರಿತೋಷಕ ಪಡೆದವರಿಂದ ಕೊಡಿಸಲಾಗುತ್ತದೆ. ಅದರ ಮೆಡಲ್ ಕೂಡ ತಮಾಷೆಯೇ. ಈ ವರ್ಷ 2014ರ ಥೀಮ್ ಆಹಾರ. ಅದಕ್ಕಾಗಿ ಅದರ ಮೆಡಲ್ ಒಂದು ತಟ್ಟೆಯಲ್ಲಿ ಚಮಚ ಮತ್ತು ಫೋರ್ಕ್ ಅಂಟಿಸಿ ರೂಪಿಸಲಾಗಿತ್ತು. ಅದನ್ನೂ ನೊ ವಿಜ್ಞಾನಿಯಿಂದಲೇ ಇಗ್-ನೊಬೆಲ್ ವಿ ಕೊಡಲಾಗಿತ್ತು. ಮೆಡಲ್ ಸ್ವೀಕರಿಸಿದ ಇಗ್-ನೊಬೆಲ್ ಭಾಷಣಕ್ಕಾಗಿ ಪ್ರಶಸ್ತಿ ವಿಜೇತರನ್ನು ಕರೆಯಲಾಗುತ್ತದೆ. ಅವರಿಗೆ ಕೇವಲ 60 ಸೆಕೆ ಅವಕಾಶವನ್ನು ಮಾತ್ರ ಕೊಟ್ಟಿರುತ್ತಾರೆ. ಇದಕ್ಕಿಂತ ಸೆಕೆಂಡು ಹೆಚ್ಚು ಮಾತಾಡಿದರೂ ನಿಲ್ಲಿಸಲು ರೆಡಿಯಾಗಿರುತ್ತದೆ. ಪ್ರತೀ ವರ್ಷ ಭಾಷಣ ನಿಲ್ಲಿ ಪುಟ್ಟ ಮಕ್ಕಳನ್ನು ಕರೆ ತಂದಿರುತ್ತಾರೆ. ಆ ಸಮಯ ಮೀರಿದ ಕೂಡಲೇ ವೇದಿಕೆಗೆ "ದಯವಿಟ್ಟು ನಿಲ್ಲಿಸಿ, ನನಗೆ ಬೋರಾಗಿದೆ", "ದ ನಿಲ್ಲಿಸಿ, ನನಗೆ ಬೋರಾಗಿದೆ" ಎನ್ನುತ್ತಾ ನಿಲ್ಲಿಸುವವರೆಗೂ ಕೂಗುತ್ತಲೇ ಇರುತ್ತದೆ. ನಿಲ್ಲಿಸದಿದ್ದರೆ ಜೋರಾಗಿ ಅಳುವುದಕ್ಕೆ ಆರಂಭಿ ಹಿಡಿದು ನಿಲ್ಲಿಸಲೂ ತಯಾರು. ಭಾಷಣಕಾರರೂ ಅಲ್ಲೇನೂ ತಮ್ಮ ಸಂಶೋಧನೆಯ ವಿಸ್ತಾರ ವರ ಕೊಡುವುದಿಲ್ಲ. ಅದನ್ನೂ ತಮಾಷೆಯಾಗಿ ಅಥವ ಸಂಬಂಧಿಸಿದಂತೆ ತಮಾಷೆಯ ಮಾತುಗಳನ್ನೇ ಆ

ಸಾಮಾನ್ಯವಾಗಿ ನೊಬೆಲ್ ಕೊಡಮಾಡುವ ಪ್ರಕಾರಗಳಲ್ಲೂ ಇಲ್ಲಿ ಬಹುಮಾನ ಕೊಡಲಾ ಅದಕ್ಕಿಂತಲು ಹೆಚ್ಚೆ ಎಂಬಂತೆ ಇನ್ನೂ ಕೆಲವು ಮಾ ಗಳನ್ನು ಮಾಡಿಕೊಂಡು ವಿವಿಧ ವಿಜ್ಞಾನ ಶಾ ಕೊಡಲಾಗುತ್ತದೆ. ಉದಾಹರಣೆಗೆ ಇಂಜಿನಿಯರಿಂಗ್ ಶಿಕ್ಷಣ ಹೀಗೆ ಕೆಲವೊಂದು ಮಾರ್ಪಾಡು ಮಾಡಿ ಪ್ರತಿ ವರ್ಷ ಸುಮಾರು ಹತ್ತು ಇಗ್-ನೊ ಬಹುಮಾನಗಳನ್ನು ನೀಡುತ್ತಾರೆ. ಅದೂ ನೊಬೆಲ್‌ಗಿಂತ ಒಂದು ತಿಂಗಳು ಮೊದಲೇ! ಸೆಪ್ಟಂಬ ಕೊಡಲಾಗುತ್ತದೆ. ಪ್ರತಿ ಬಹುಮಾನದ ನಂತರವೂ ಮಧ್ಯೆ ಕೆಲವೊಂದು ತಮಾಷೆಯ ವೈಜ್ಞಾನಿಕ ಸ ಪ್ರಾತ್ಯಕ್ಷಿಕೆಗಳಿರುತ್ತವೆ. ಇವನ್ನು ಖ್ಯಾತ ವಿಜ್ಞ ನಿರೂಪಿಸುತ್ತಾರೆ. ವೇದಿಕೆಯೂ ಖ್ಯಾತ ವಿಜ್ಞಾನಿಗ ತುಂಬಿರುತ್ತದೆ. ಎಲ್ಲವು ಅಸ್ತವ್ಯಸ್ತವಾದ ಅಸಂಗ ತುಂಬಿರುತ್ತವೆ. 2014ರ ವೇದಿಕೆಯಲ್ಲಿ ಭಾಷಣ ಓದುವ ಅಥವಾ ನಿರೂಪಿಸುವ ಮೇಜಿಗೆ ಟಾರ್ಚ್ ನಿಲ್ಲಲು ತ್ರಿಡಿ ಪ್ರಿಂಟರ್ ಕಂಡುಹಿಡಿದವರಲ್ಲಿ ವಿಜ್ಞಾನಿಯೂ ಬಂದಿದ್ದರು.

## ಭಾರತೀಯ ಇಗ್-ನೊಬೆಲಿಗ

ಈ ಹಿಂದೆ ಅನೇಕ ಭಾರತೀಯರು ಇಗ್-ನೊ ಬಹುಮಾನವನ್ನು ಪಡೆದಿದ್ದಾರೆ. 2002ರಲ್ಲಿ ಗಣಿತ ಬಹುಮಾನ ಪಡೆದ ಕೇರಳದ ಶ್ರೀಕುಮಾರ್ ದೇಶಿ ಆನೆಗಳ ಮೈಯ ಮೇಲ್ಮೈಯನ್ನು ಅಳೆ ಸಫಲರಾಗಿದ್ದರು. ಸರಾಸರಿ 1880ರಿಂದ 5500 ತೂಗುವ ಆನೆಗಳನ್ನು ಅವರು ಆಯ್ದು ಈ ಮೆರೆದಿದ್ದರು. ಇದರಲ್ಲಿಯೂ ವಿಜ್ಞಾನ ಏನು ಇಡೀ ಮೈಯನ್ನೆಲ್ಲಾ ಜ್ಯಾಮಿತಿಯ ವಿವಿಧ ಆಕಾ ಅನುಸಂಧಾನಿಸಿ ಜಯ ಸಾಧಿಸಿದ್ದರು. ಚಿತ್ತರಂಜನ ಶ್ರೀಹರಿಯವರು ಕೆಲವರ ಮೂಗು ತಿಕ್ಕುವ ಮಾನಸಿಕತೆಯ ಕುರಿತು ಸಂಶೋಧನೆ ಮಾಡಿದ್ದಕ್ಕೆ ಬಹುಮಾನ ನೀಡಲಾಗಿತ್ತು. 1993ರಲ್ಲಿ ಬಹುಮ ರವಿಬಾತ್ರ ಅವರಿಗೆ ಜಗತ್ತಿನ ಆರ್ಥಿಕ ದಿವಾಳಿತನ ತಮ್ಮ ಪುಸ್ತಕಗಳನ್ನು ಒಂಟಿಯಾಗಿ ಮಾರಾಟ ಕಾರ್ಯಕ್ಕೆ ಅರ್ಥಶಾಸ್ತ್ರದಲ್ಲಿ ನೀಡಲಾಗಿತ್ತು. ಅವ ಪುಸ್ತಕಗಳು ನ್ಯೂಯಾರ್ಕ್ ಟೈಮ್ಸ್ ಪಟ್ಟಿ ಮಾಡಿ ಸೆಲ್ಲರ್ಸ್‌ಗಳಲ್ಲಿವೆ. ರಮೇಶ್ ಬಾಲಸುಬ್ರಮ 2004ರ ಭೌತಶಾಸ್ತ್ರದಲ್ಲಿ ದೇಹ ಮತ್ತು ಚಲನಾತ್ಮಕ ಸಂಬಂಧಗಳ ಕುರಿತ ಶೋಧಕ್ಕೆ ನೀಡ ಗೌರಿ ನಂದಾ ಅವರು ಓಡಿಹೋಗಿ ತಪ್ಪಿಸಿ ಅಲಾರಾಂ ಕಂಡುಹಿಡಿದದ್ದಕ್ಕೆ 2005ರ ಅ ವಿಭಾಗದಲ್ಲಿ ನೀಡಲಾಗಿತ್ತು, ಅದೊಂದು ಬಗೆ ಹಾಗೂ ಗಡಿಯಾರ ಕೂಡ ಎಂದಿದ್ದರು. ಗೌರಿ ಮತ್ತೂ ಹಲವಾರು ಭಾರತೀಯರು ಇಗ್- ಪಡೆದಿದ್ದಾರೆ.

ಇಗ್-ನೊಬೆಲ್ ಒಟ್ಟನಲ್ಲಿ ವಿಜ್ಞಾನ ಅಸಂಗತಗಳ ಸಂಶೋಧನೆಯನ್ನೂ ಜಗತ್ತಿಗೆ ದೊ ಪ್ರಚುರಪಡಿಸುವ ಸಂಗತಿಯಾಗಿದೆ. ನಕು ಆಲೋಚಿಸಲು ವಿಜ್ಞಾನವೂ ಹಲವು ಅವಕಾಶಗ ಅಂತೂ ಇಗ್-ನೊಬೆಲ್‌ನಿಂದಾಗಿ ವಿಜ್ಞಾನದ ಮ ಜಗತ್ತೂ ಸಮುದಾಯವನ್ನು ತಲುಪಿದೆ. ನ ಬಂದವರಷ್ಟೇ ಪ್ರಚಾರಕ್ಕೆ ಬಂದವರಲ್ಲ, ಇಗ್- ಕೂಡ ವಿಜ್ಞಾನವನ್ನು ಸುದ್ದಿಯಲ್ಲಿಡುತ್ತದೆ.

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

# ಬುದ್ಧ ಬಾಲಕನ ಉದಯ

2005 ಮತ್ತು 2007ರ ಅವಧಿ. ನೇಪಾಳದಲ್ಲಿ ಐತಿಹ್ಯ ಹರಡುತ್ತಾ ಬಂದಿತ್ತು. ಅದೇನೆಂದರೆ, ಹುಡುಗ ಎಷ್ಟೋ ತಿಂಗಳುಗಳಿಂದ ಏನೂ ತಿನ್ನದೇ ಕುಡಿಯದೇ ಧ್ಯಾನದಲ್ಲಿ ಕುಳಿತಿದ್ದಾನೆ. ಅವನು ಮಾಡುವುದಿಲ್ಲ, ಬರಿದೇ ಮರದ ಕೆಳಗೆ ಕಲ್ಲಿನಂತೆ ಕೊಳ್ಳುತ್ತಾನೆ. ಅದೊಂದು ಪವಾಡವೇ ಅಥವಾ ಗೆ ಮೀರಿದ ಶಕ್ತಿಯನ್ನು ಹೊಂದಿರುವಂತಹ ಯೇ? ಧ್ಯಾನದಿಂದ ಸಾಧಿಸಿರುವಂತಹ ಶಕ್ತಿಯೇ? ಸಾಮಾನ್ಯ ಮನುಷ್ಯರಿಗೆ ಮೂರರಿಂದ ನಾಲ್ಕು ವರೆಗೆ ನೀರು ಆಹಾರಗಳನ್ನು ಬಿಟ್ಟು ಇರಲು ಗುತ್ತದೆ. ಆದರೆ ಹತ್ತು ತಿಂಗಳುಗಳ ಕಾಲ ಅವನು ಂದರೆ? ಅದು ಖಂಡಿತವಾಗಿಯೂ ಒಂದು ಅಲೌಕಿಕ ಆಧ್ಯಾತ್ಮಿಕ ಸಾಧನೆಯೇ ಆಗಿರುತ್ತದೆ ಎಂಬುದು ಮಾನ್ಯರ ಧೋರಣೆ.

ಂ ಬಹಾದ್ದೂರ್ ಭೋಮ್‌ಜಾನ್ ಎಂಬ ನೇಪಾಳದ ಬಾಲಕನೂ ಇದೇ ರೀತಿಯಲ್ಲಿ ಮರದ ಕೆಳಗೆ ಕೊಂಡ. ತಾನು ಇದೇ ರೀತಿ ಆರು ವರ್ಷಗಳ ಇರುತ್ತೇನೆಂದು ತಿಳಿಸಿದ. ಸಾವಿರಾರು ಜನರು ರಂಭಿಸಿದರು. ಅವನು ಮರದ ಟೊಳ್ಳು ಭಾಗದಲ್ಲಿ ಕುಳಿತಿದ್ದು, ಅಲ್ಲಿಂದ ಅದೃಶ್ಯವಾಗಿಬಿಟ್ಟನಂತೆ. ನಂತರ ಹೂಗಳ ಮಧ್ಯೆ ಕಾಣಿಸಿಕೊಂಡನಂತೆ. ಏಕೆ ಮತ್ತು ದು ಕೇಳಿದರೆ, ಅವನು ಧ್ಯಾನ ಮಾಡುತ್ತಾ ಕೊಳ್ಳುವುದನ್ನು ಅನೇಕಾನೇಕ ಜನರು ನೋಡುತ್ತಾ ರಿಂದ ಶಾಂತಿಯು ಇಲ್ಲವಾಗಿ ಅಲ್ಲಿಂದ ವಾಗಿದ್ದನಂತೆ. ಆ ಬುದ್ಧನಿಗೆ ಶಾಂತಿಯೆಂಬುದು ಿನ ವಸ್ತುವಲ್ಲ, ತನ್ನೊಳಗಿನ ಸ್ಥಿತಿ ಎಂಬುದೂ ದೇ ಹೋಗಿದ್ದು ವಿಪರ್ಯಾಸ.

ರಲಿ, ಸಾಮಾನ್ಯ ಜನರಷ್ಟೇ ಬುದ್ಧ ಬಾಲಕನ ದರ್ಶನಕ್ಕೆ ದ್ದರೆ ಅದು ಒಂದು ಬೇರೆ ಕಥೆಯೇ ಆಗುತ್ತಿತ್ತು. ಸಾಮಾನ್ಯರ ಜನರು ನೀಡುವ ಖ್ಯಾತಿಯನ್ನು ಕೊಂಡು ಸಿನಿಮಾ ತಯಾರಕರು, ಡಾಕ್ಯುಮೆಂಟರಿ ವವರು, ಡಿಸ್ಕವರಿ ಚಾನೆಲ್‌ನಂತಹ ಅಂತಾರಾಷ್ಟ್ರೀಯ ವಾಹಿನಿಗಳು ಬರಲು ಪ್ರಾರಂಭಿಸಿದಾಗ ವಾಗಿಯೇ ಹೆಚ್ಚಿನ ಪ್ರಚಾರ ಈ ಬುದ್ಧ ಬಾಲಕನಿಗೆ

ಹದಲ್ಲಿ ಪ್ರೋಟೀನ್ ಅಂಶವು ಕ್ಷೀಣಿಸತೊಡಗಿದರೆ ಾಸದ ಪರಿಣಾಮ ಕಾಣತೊಡಗುತ್ತದೆ. ೀನ್‌ನನ್ನು ಒದಗಿಸುವಂತಹ ಆಹಾರವನ್ನಾಗಲಿ, ಡ್ರೇಶನ್ ಆಗದಿರುವಂತೆ ನೋಡಿಕೊಳ್ಳುವ ಮಗಳಾಗಲಿ ಇಲ್ಲದೇ ಹೋದಾಗ ಮನುಷ್ಯ ಯಾವ ಲ್ಲಿ ಇರಲು ಸಾಧ್ಯ? ಅದನ್ನು ಕಂಡುಕೊಳ್ಳಲು ಟೆಗಳ ನೇರವಾದ ಅವಧಿಯಲ್ಲಿ ಕ್ಯಾಮರಾವನ್ನಿಟ್ಟು ಹದ್ದೂರ್ ಕುಳಿತಿರುವುದನ್ನು ಚಿತ್ರೀಕರಿಸಲಾಯಿತು. ತ್ರೀಕರಣದಿಂದ ಅವರು ಯಾವುದೇ ಪೈಪುಗಳು ನೀರಿನ ಮತ್ತು ಆಹಾರದ ಸರಬರಾಜು ತ್ತಿಲ್ಲವೆಂದು ಖಚಿತಪಡಿಸಿಕೊಂಡರು. ಮೇ 16, ರಂದು ಅವನು ವಿಶ್ವವಿಖ್ಯಾತನಾದ. ಡಿಸ್ಕವರಿ ಕೊನೆಗೆ ಹೇಳಿದ್ದೇನೆಂದರೆ "ವಿಜ್ಞಾನಕ್ಕೆ ಇದೊಂದು " ಎಂದು.

ದೇ ಬುದ್ಧ ಬಾಲಕ ಬಾರಾ ಜಿಲ್ಲೆಯ ಹಲ್ಖೋರಿಯಾ ಪ್ರದೇಶದಲ್ಲಿ ಅಪಾರ ಜನಸಂಖ್ಯೆಯನ್ನು ಉದ್ದೇಶಿಸಿ ಸ್ಟ್ 2007ರಲ್ಲಿ ಮಾತಾಡಿದ.


ಾಳದ ಐದನೆಯ ತರಗತಿಯ ಪಾಠದಲ್ಲಿಯೂ ಡುಗ ಪ್ರವೇಶ ಪಡೆದ.

## ೀಡಿಯಾಗಳು ಹುಟ್ಟಿಸಿದ ಬುದ್ಧ


ಾಳದ ಹಿಮಲ್ಬಬರ್ ಪತ್ರಿಕೆಯ ಪ್ರಕಾರ ಈ ಬಹದ್ದೂರ್ ಬೋಮ್ಜಾನ್ ಯಾರೆಂದರೆ, ಅವನು ಬುದ್ಧನ ಅವತಾರ. ಅನೇಕ ತಿಂಗಳುಗಳ ಕಾಲ ನೀರು ಆಹಾರವಿಲ್ಲದೇ ಧ್ಯಾನ ಮಾಡಿದ. ಅವನು ಾಡುವಾಗ ಎರಡು ಪವಿತ್ರವಾದ ನಾಗಸರ್ಪಗಳು ರಕ್ಷೆ ಮಾಡಿದವು. ಅವನು ತನ್ನ ಧ್ಯಾನಕ್ಕೆ ಕೊಳ್ಳುವ ಮುನ್ನ ಲುಂಬಿನಿ, ಪೋಖರ ಮತ್ತು ನಂತರ ಕ್ಷೇತ್ರಗಳನ್ನು ಸಂದರ್ಶಿಸಿದ್ದ.

ಕ್ಕೆ ಅವನು ಬುದ್ಧನ ಅವತಾರವಾಗಿಬಿಟ್ಟನೇ? ಒಂದು ಅವತಾರ ಬೇಕಾಗಿತ್ತೇ?

ಲಿ, ನೇಪಾಳದ ಅಧ್ಯಯನಶೀಲ ಮತ್ತು ಬಹಳ ವಾಗಿರುವಂತಹ ಸುಗ್ರ ಲಾಮ ಎಂಬ ಬೌದ್ಧ ಈ ಬುದ್ಧ ಬಾಲಕನ ಬಗ್ಗೆ ಕೇಳಿದಾಗ ಹೇಳಿದ್ದೇನೆಂದರೆ, "ಗೌತಮ ಬುದ್ಧನೇ ಹೇಳುವಂತೆ ಯಾರಾದರೂ ಬುದ್ಧರಾಗಬಹುದು." ಅಷ್ಟೆಯೇ ಹೊರತು, ಗೌತಮ ಬುದ್ಧನು ಮತ್ತೆ ಮತ್ತೊಂದು ಜನ್ಮವನ್ನೆತ್ತಿ ಈ ಹುಡುಗನಾಗಿ ಬರಲು ಸಾಧ್ಯವಿಲ್ಲ. ಏಕೆಂದರೆ ಬೌದ್ಧರ ನಂಬುಗೆಯ ಪ್ರಕಾರವೇ ನಿರ್ವಾಣವನ್ನು ಹೊಂದಿರುವ ಬುದ್ಧನಿಗೆ ಇನ್ನೊಂದು ಭೌತಿಕ ಜನ್ಮವು ಇರುವುದಿಲ್ಲ. ಹಾಗಾಗಿ ಬುದ್ಧ ಬಾಲಕನಾದ ರಾಮ್ ಬೋಮ್ಜಾನ್ ಮತ್ತೊಬ್ಬ ಬುದ್ಧನಾಗಬಹುದೇ ಹೊರತು, ಗೌತಮ ಬುದ್ಧನ ಅವತಾರವಾಗಲಿ ಅಥವಾ ಬುದ್ಧನ ಪುನರ್ಜನ್ಮವಾಗಲಿ ಆಗುವುದಿಲ್ಲ. ಆದರೆ ಹಾಗೆಂದೇ ಅವನ ಬೆಂಬಲಿಗರು, ಅವನ ಹಿಂಬಾಲಕರು ಅಥವಾ ಅನುಯಾಯಿಗಳು ಗಟ್ಟಿಯಾಗಿ ಸಾಧಿಸುತ್ತಿದ್ದರು. ಅಷ್ಟೇ ಏಕೆ, ಡಿಸ್ಕವರಿ ಚಾನೆಲ್‌ನವರು ಅವನನ್ನು ಚಿತ್ರೀಕರಣ ಮಾಡುವಾಗ ಸನಿಹಕ್ಕೆ ಹೋಗಲು ಬಿಟ್ಟಿರಲಿಲ್ಲ. ಜೊತೆಗೆ ಸುಮಾರು 3–4 ಮೀಟರುಗಳ ಅಂತರದಿಂದ ಚಿತ್ರೀಕರಿಸಬೇಕಾಗಿತ್ತು. ಅದೇನೇ ಇರಲಿ, ಕುಗ್ರಾಮವಾಗಿದ್ದ ಆ ಊರು ಅಭಿವೃದ್ಧಿ ಹೊಂದಿತು. ಸಣ್ಣದಾರಿ ಮಾತ್ರವೇ ಇದ್ದ ಆ ಗ್ರಾಮಕ್ಕೆ ಹೆದ್ದಾರಿ ಮೂಡಿತು. ಅವನ ಬಗ್ಗೆ ಪುಸ್ತಕಗಳು, ಚಿತ್ರಗಳು, ಡಿವಿಡಿ ಮತ್ತು ಸಿಡಿಗಳು ಮಾರಾಟವಾಗತೊಡಗಿದವು. ಹೂವು, ಅಗರ್‌ಬತ್ತಿ ಇತ್ಯಾದಿಗಳನ್ನು ಮಾರುವ ಬಡಕುಟುಂಬಗಳು ಒಂದಿಷ್ಟು ಕಾಸುಗಳನ್ನು ಕಾಣತೊಡಗಿದವು. ಅಂತೆಯೇ ಅಲ್ಲಿನ ಸುತ್ತಮುತ್ತಲಿನ ಜನರು ಈ ಹುಡುಗನ ಬಗ್ಗೆ ಸಾಕಷ್ಟು ಮಾತಾಡತೊಡಗಿದ್ದರು. ಅವನು ಧ್ಯಾನ ಮಾಡುವಾಗ ಅವನ







ತಲೆಯ ಹಿಂದೆ ಬೆಳಕು ಬರುತ್ತಿದ್ದುದ್ದನ್ನು ಕಂಡರೆಂದೂ, ಹಣೆಯ ಮೇಲೆ ದಿವ್ಯ ಪ್ರಕಾಶ ಹೊರಹೊಮ್ಮಿದ್ದನ್ನು ಕಂಡೆವೆಂದೂ ಹೇಳುತ್ತಾ ಬಂದವರ ಶ್ರದ್ಧಾ ನಂಬುಗೆಗಳನ್ನು ಬಲಪಡಿಸುತ್ತಾರೆ. ಒಟ್ಟಾರೆ ಬೌದ್ಧ ತತ್ವ ಸಿದ್ಧಾಂತಗಳ ತಲೆಯ ಮೇಲೆಯೇ ಕೈಯಿಟ್ಟುಬಿಟ್ಟ ಈ "ಬುದ್ಧ ಬಾಯ್."

ರಾಜಕಾರಣಿಗಳು ಮತ್ತು ಸಣ್ಣಪುಟ್ಟ ಹೂಡಿಕೆದಾರರು ಹಾಗೂ ಬಂಡವಾಳದಾರರಿಗೆ ಇದು ಬೇಕು. ಹೀಗಾಗಬೇಕು. ಅವರು ಬುದ್ಧ ಬಾಲಕನಂತವರನ್ನು, ಇಂತಹ ಒಮ್ಮೆಂದೊಮ್ಮೆಲೇ ಉದ್ಭವಿಸುವ ಅಥವಾ ಚಾಲ್ತಿಗೆ ಬರುವ ಅಧ್ಯಾತ್ಮ ಅಥವಾ ಧಾರ್ಮಿಕ ಪುರುಷರನ್ನು ವಿಜೃಂಭಿಸುತ್ತಾರೆ. ವ್ಯಾಪಾರದಲ್ಲಿ ಹಣವನ್ನು ಹೂಡುವ ಬಂಡವಾಳದಾರರಿಗೂ ಮತ್ತು ರಾಜಕಾರಣಿಗಳಿಗೂ ಮೂಢ ಮತ್ತು ಮುಗ್ಧ ಮಂದಿಗಳ ಸಮೂಹ ಹೆಚ್ಚಾಗುತ್ತಾ ಹೋಗಬೇಕು. ಇಂತಹ ಅಪಾರ ಸಂಖ್ಯೆಯ ಮುಗ್ಧರ ನಡುವೆ ನಿಂತು ತಾನೂ ಇದಕ್ಕೆ ಭಕ್ತಿಯನ್ನು ತೋರುವೆ ಎನ್ನುವ ರಾಜಕಾರಣಿಯನ್ನು ಸ್ವೀಕರಿಸುವ ಮಂದಿ ಇದ್ದಾರೆಂದು ಅವರಿಗೆ ಗೊತ್ತು. ಹಾಗೆಯೇ ಇಂತಹ ಜನರೇ ತಾವು ಹಣ ಹೂಡಿ ಮಾಡುವಂತಹ ಸ್ಟಿಕ್ಕರ್, ಫೋಟೋ, ವಿಗ್ರಹ, ಉಂಗುರ, ಡಾಲರ್, ಸಿಡಿ ಇತ್ಯಾದಿಗಳನ್ನು ಕೊಳ್ಳುವವರು ಎಂದು ವ್ಯಾಪಾರಸ್ಥರಿಗೆ ಗೊತ್ತು. ಹಾಗಾಗಿ ಅವರಿಗೆ ಜನ ಸೇರಿದರಷ್ಟಾಯಿತು. ಅವರ ಪ್ರಗತಿಯಾಗಲಿ, ಅವರು ಪ್ರಜ್ಞಾವಂತರಾಗುವುದಾಗಲಿ ಯಾಕೆ ಬೇಕು? ಅವರು ಪ್ರಜ್ಞಾವಂತರಾದರೆ ಈ ರಾಜಕಾರಣಿಯ ಅಧಿಕಾರದ ಗತಿ ಏನಾಗಬೇಕು? ಈ ಫೋಟೋ, ಸ್ಟಿಕ್ಕರ್, ಡಾಲರ್, ಶುಭ ಉಂಟುಮಾಡುವ ಬಟ್ಟೆಯ ತುಂಡುಗಳನ್ನು, ಬಣ್ಣಬಣ್ಣದ ದಾರಗಳನ್ನು ಯಾರು ಕೊಳ್ಳಬೇಕು?

ಇರಲಿ, ಬೋಮ್ಜಾನ್ ಪ್ರಕರಣದಲ್ಲಿ ಅನುಮಾನಕ್ಕೆ ಆಸ್ಪದವಾಗುವಂತೆ, ಈ ಘಟನೆಯ ನಂತರ ರಾಮ್ ಬಹದ್ದೂರ್ ಬೋಮ್ಜಾನ್ ಸೋದರರಾದ ಗಣಗಜೀತ್, ಶ್ಯಾಮ್ ಮತ್ತು ಬಾಬು ಹಾಗೂ ಮನಮಾಯ ಎಂಬ ಸೋದರಿ, ಅವರಿಗೆ ಸಾಕಷ್ಟು ಕೃಷಿ ಜಮೀನಿದ್ದರೂ ಕೂಡ ಮಲೇಷಿಯಾಗೆ ಉದ್ಯೋಗಕ್ಕಾಗಿ ಹೊರಟು ಹೋದರು.

## ಅಪ್ರಬುದ್ಧ ಬುದ್ಧ ಬಾಲಕ

ಈ ಬುದ್ಧ ಬಾಲಕ ಹಲ್ಖೋರಿಯಾ ಅರಣ್ಯ ಪ್ರದೇಶವನ್ನು ಬಿಟ್ಟು ನಂತರ ಸಿಂಧೂಲಿಯ ಕಮಲಮೈ ನಗರಕ್ಕೆ ಹೋದನಂತೆ. ಮತ್ತೆ ಹಲ್ಖೋರಿಯಾಗೆ ಹಿಂದಿರುಗಲು ನಿರ್ಧರಿಸಿದನಂತೆ. ಆದರೆ ಅವನು ಹಿಂದಕ್ಕೆ ಬರುವ ಮುನ್ನವೇ ನೇಪಾಳದ ಪೊಲೀಸರು ಕಾಡಿನಲ್ಲಿದ್ದ ಅವನ ಎರಡು ಮನೆಗಳನ್ನು ನಾಶಗೊಳಿಸಿದರಂತೆ. ಈಗ ಅವನು ಸರ್ಲಹಿ ಜಿಲ್ಲೆಯ ಪತ್ಥರ್ ಘಟ್‌ನಲ್ಲಿ ವಾಸಿಸುತ್ತಿದ್ದಾನಂತೆ.

ಇಷ್ಟು ಸದ್ಯದ ಲೌಕಿಕ ಸಮಾಚಾರ ಈ ಬುದ್ಧ ಬಾಲಕನ ಬಗ್ಗೆ. ಈ ಹುಡುಗನ ತಾಯಿಯ ಹೆಸರೂ ಮಾಯಾದೇವಿಯೇ ಆಗಿದೆ. ಅವನು 1990 ಏಪ್ರಿಲ್ 9ರಂದು, ರತನ್‌ಪುರದಲ್ಲಿ ಹುಟ್ಟಿದ. ಅವನು ತಮಾಂಗ್ ಸಮುದಾಯಕ್ಕೆ ಸೇರಿದವನು. 2005ನಲ್ಲಿ ಈತನ ಬಗ್ಗೆ ಡಿಸ್ಕವರಿ ಛಾನೆಲ್ 45 ನಿಮಿಷಗಳ ಡಾಕ್ಯುಂಮೆಂಟರಿ ಮಾಡಿದ ಮೇಲಂತೂ ಈತನ ಹಳ್ಳಿಗೆ ಸಾಮಾನ್ಯ ಜನರು, ಧಾರ್ಮಿಕಾಸಕ್ತರು, ಅಧ್ಯಯನಶೀಲರು ಮತ್ತು ಸಂಶೋಧಕರು ಬರತೊಡಗಿ ಹೆಚ್ಚು ಜನಪ್ರಿಯನಾಗತೊಡಗಿದ್ದ. ಅವನ ತಂದೆತಾಯಿಗಳು ಆಗ ಅವನ ಹುಟ್ಟು ಮತ್ತು ಬಾಲ್ಯಕ್ಕೆ ವಿಶೇಷವಾದ ದೈವಿಕ ಲೇಪನ ಮಾಡಿ, ಆಧ್ಯಾತ್ಮದ ಕಳೆ ಕಟ್ಟಿ ಹೇಳತೊಡಗಿದರು.

ಬಾಮ್ಜಾನ್ ಕಥೆ ಇಷ್ಟೊಂದು ಕಳೆಗಟ್ಟಲು ನಿಬ್ಬಣಕಥಾದ ಜಾತಕ ಕತೆಯ ಹೋಲಿಕೆಯನ್ನು ನೀಡಲು ಪ್ರಾರಂಭಿಸಿದ್ದರು. ಹಾಗಾಗಿಯೇ ಅವನ ಭಕ್ತರು ಗೌತಮ ಬುದ್ಧನೇ ಪುನರಾವತಾರ ಎತ್ತಿದ ಕಥೆಯನ್ನು ಹೇಳತೊಡಗಿದ್ದು. ಆದರೆ ಬಾಮ್ಜಾನ್ ಸ್ವತಃ (ಯಾವ ಬೌದ್ಧ ಬಿಕ್ಕುಗಳು ಅವನಿಗೆ ಬುದ್ಧಿವಾದ ಹೇಳಿದರೋ) ನವಂಬರ್ 8ರಂದು 2005ರಲ್ಲಿ ಹೇಳಿದ: "ನನ್ನ ಬುದ್ಧನೆಂದು ಕರೆಯಬೇಡಿ. ನನಗೆ ಬುದ್ಧನ ಚೈತನ್ಯವಿಲ್ಲ. ನಾನು 'ರಿನ್ಪೋಚೆ'ಯ ಹಂತದಲ್ಲಿದ್ದೇನೆ. ರಿನ್ಪೋಚೆಯೆಂದರೆ ಟಿಬೆಟ್ಟಿನ ಬೌದ್ಧ ಆಚಾರ್ಯ ಅಥವಾ ಸಾಧಕರ ಪದವಿಯಲ್ಲಿ ಅಮೂಲ್ಯ ರತ್ನ ಅಥವಾ ಆಭರಣ ಎಂದರ್ಥ. ಹಾಗೆಯೇ ಬುದ್ಧನಾಗಲು ತನಗೆ ಇನ್ನೂ ಆರು ವರ್ಷಗಳ ಕಾಲದ ಧ್ಯಾನವು ಅಗತ್ಯವಿದೆ."

## ಮೈತ್ರೇಯ ಬೋಧಿಸತ್ವ

ಬಾಮ್ಜಾನ್‌ನ ಅನುಯಾಯಿಗಳ ವಾದದಂತೆ ಈ ಬುದ್ಧ ಬಾಲಕನೂ ಬೋಧಿಸತ್ವನಂತೆ. ಗೌತಮ ಬುದ್ಧನೇ ಹೇಳಿರುವಂತೆ ಅವನ ಹಿಂದೆ ಅಗಣಿತ ಬುದ್ಧಗಳ ಪರಂಪರೆಯೇ ಇದ್ದು, ಅವನ ನಂತರವೂ ಅಸಂಖ್ಯಾತ ಬುದ್ಧರು ಬರುವರು ಎಂಬ ಮಾತನ್ನು ಉಲ್ಲೇಖಿಸುತ್ತಾ ಬಾಮ್ಜಾನ್ ಕೂಡ ಒಬ್ಬ ಬುದ್ಧ ಎನ್ನುತ್ತಾರೆ. ಇದಕ್ಕೆ ಇನ್ನೂ ಒಂದು ಮಾತು ಸೇರಿಸಿ, "ಇವನು ಮೈತ್ರೇಯ ಬೋಧಿಸತ್ವ" ಎಂದೂ ಹೇಳಿದರು.

ನೇಪಾಲ್ ಬುದ್ಧಿಸ್ಟ್ ಕೌನ್ಸಿಲ್‌ನ ಅಧ್ಯಕ್ಷರಾಗಿದ್ದ ಮಹಿಶ್ವೋರ್ ರಾಜ್ ಬಜ್ರಾಚಾರ್ಯ ನೇರವಾಗಿ ಹೇಳಿದರು, "ಈತ ಬುದ್ಧನೆಂದು ನಾವು ಒಪ್ಪಲಾರೆವು. ಏಕೆಂದರೆ ಬುದ್ಧನ ಗುಣಗಳು ಎನ್ನಬಹುದಾದುವು ಇವನಲ್ಲಿ ಏನೂ ಇಲ್ಲ" ಎಂದು.

ಅವನು ಆಗಾಗ್ಗೆ ಕಾಣೆಯಾಗಿಬಿಡುತ್ತಿದ್ದ, ಎಲ್ಲೋ ಸುಮಾರು ಎರಡು ಮೂರು ಮೈಲುಗಳ ಅಂತರದಲ್ಲಿ ಮತ್ತೆ ಕಾಣುತ್ತಿದ್ದ. ಅವನ ಅನುಯಾಯಿಗಳು ಕೇಳಿದರೆ, ನಾನು ಧ್ಯಾನ ಮಾಡುತ್ತಿದ್ದ ಜಾಗದಲ್ಲಿ ಶಾಂತಿ ಸಿಗುತ್ತಿರಲಿಲ್ಲ ಎಂದು ಉತ್ತರಿಸುತ್ತಿದ್ದನಂತೆ. ಹಾಗೆಯೇ ಕೆಲವು ಬಾರಿ ಬರಿಯ ಗಿಡಮೂಲಿಕೆಗಳನ್ನು ತಿಂದುಕೊಂಡು ಕಾಡಿನಲ್ಲಿ ಖಡ್ಗಧಾರಿಯಾಗಿ ಓಡಾಡುತ್ತಿದ್ದನಂತೆ. ಖಡ್ಗಧಾರಣೆ ಏಕೆಂದು ಕೇಳಿದರೆ, ಆತ್ಮರಕ್ಷಣೆಗೆ ಎಂಬ ಉತ್ತರ ಬರುತ್ತಿತ್ತಂತೆ.

ಮಾರ್ಚ್, 26ರಂದು 2007ರಲ್ಲಿ ತಾನು ಹಳ್ಳದಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳುವುದಾಗಿ ಘೋಷಿಸಿದನಂತೆ. ಅದರಂತೆ ಅವನು ಕುಳಿತುಕೊಳ್ಳುವ ಹಳ್ಳವನ್ನು ಪರಿಶೀಲಿಸಿದಾಗ ಅದು ಕುಳಿತುಕೊಳ್ಳಲು ಬೇಕಾದಂತೆ ಟೈಲ್ಸ್‌ಗಳನ್ನು ಹಾಕಿ ಚೊಕ್ಕಟವಾಗಿ ಕಟ್ಟಿರುವುದು ಕಂಡುಬಂದಿತ್ತು. ಅದು ಅವನ ಆದೇಶದ ಮೇರೆಗೇ ಎಂದೂ ತಿಳಿದುಬಂತು.

ಬುದ್ಧನೆಂಬ ಧ್ಯಾನಿಗೆ ಮರದ ಪೊಟರೆಯೇಕೆ, ಹಳ್ಳವೇಕೆ, ಕಾಡೇಕೆ, ಜೊತೆಗೆ ಆತ್ಮರಕ್ಷಣೆಗೆ ಖಡ್ಗವೇಕೆ? ಈ ಯಾವ ಪ್ರಶ್ನೆಗಳಿಗೂ ಬುದ್ಧ ಬಾಲಕನಿಂದ ಸರಿಯಾದ ಉತ್ತರಗಳು ಸಿಗಲಿಲ್ಲ.

ಅವನ ಸುತ್ತ ನಡೆದಂತಹ ಹೊರಗಿನ ವಿದ್ಯಮಾನಗಳನ್ನು ಗಮನಿಸಿದರೆ, ಆ ಹುಡುಗನಿಗೆ ಏನೂ ಅಧ್ಯಯನವೂ ಇರಲಿಲ್ಲ, ತನ್ನದೇ ಆದಂತಹ ಒಳನೋಟಗಳೂ ಇರಲಿಲ್ಲ, ಅದೇ ರೀತಿಯಲ್ಲಿ ಯಾವುದೇ ಆಧ್ಯಾತ್ಮಿಕತೆಯ ಅನುಭವವೂ ಇರಲಿಲ್ಲ, ಜೊತೆಗೆ ವಿಶೇಷ ವೈಚಾರಿಕ ಗಟ್ಟಿ ಚಿಂತನೆಯಾಗಲಿ ಏನೂ ಇರಲಿಲ್ಲ ಎಂದು ಅವನ ಭಾಷಣದಿಂದ ತಿಳಿದುಬಂತು. ನಮೋ ಬುದ್ಧ ತಪೋಬನ್ ಕಮಿಟಿಯವರು ಬಾಮ್ಜಾನ್‌ನ ಬೆಂಬಲಕ್ಕೆ ನಿಂತವರಾಗಿದ್ದರು. ಅವರು 02 ಆಗಸ್ಟ್ 2007ರಲ್ಲಿ ಏರ್ಪಡಿಸಿದ್ದ ಬೃಹತ್ ಸಭೆಯನ್ನು ಉದ್ದೇಶಿಸಿ ಬುದ್ಧ ಬಾಲಕ ಹೇಳಿದ್ದೇನೆಂದರೆ "ಈ ದೇಶದ ರಕ್ಷಣೆಗೆ ಬೇಕಾಗಿರುವುದು ಅಧ್ಯಾತ್ಮದ ಮಾರ್ಗ." ಅಷ್ಟೇ ಅವನ ಭಾಷಣದ ಸಾರಾಂಶವಾಗಿತ್ತು.

ಅದಾದನಂತರ ಬಾಮ್ಜಾನ್ ತನ್ನ ಊರಾದ ರತನ್‌ಪುರಿಯಲ್ಲಿ 12 ದಿನಗಳಲ್ಲಿ ಸುಮಾರು 400,000 ಕ್ಕೂ ಹೆಚ್ಚು ಜನರನ್ನು ಆಶೀರ್ವದಿಸಿದ್ದ.

## ಬುದ್ಧ ಬಾಲಕನ ಹಗರಣಗಳು

ಕಾಲ ಕಳೆದಂತೆ ಬಾಮ್ಜಾನ್‌ನ ಈ ಜನಪ್ರಿಯತೆ ಕುಗ್ಗುವಂತಹ ಕೆಲವು ವಿಷಯಗಳು ಚಲಾವಣೆಗೆ ತೊಡಗಿದವು. ಹಲ್ಖೋರಿಯಾ ಅರಣ್ಯ ಪ್ರದೇಶದಲ್ಲಿ ಎರಡು ಅಂತಸ್ತಿನ ಕಟ್ಟಡವನ್ನು ಬುದ್ಧ ಬಾಲಕ ಕಟ್ಟಿಸಿಕೊಂಡ. ಅದೂ ಅರಣ್ಯದ ಸಂರಕ್ಷಿತ ಪ್ರದೇಶದ ನಿಯಮಗಳಿಗೆ ವಿರುದ್ಧವಾಗಿ. ಅರಣ್ಯ ನಾಶದ ದೂರಿಗೆ ಸಿಕ್ಕ ಅವನ ಮನೆಯನ್ನು ಪೋಲಿಸರು ನಾಶಪಡಿಸಿದರು.


ಅವನು ಧ್ಯಾನಕ್ಕೆ ಕುಳಿತಿದ್ದಾಗ ಅವನ ಧ್ಯಾನದ ಕಟ್ಟೆಯನ್ನು ಹತ್ತಿ ಅವನ ಧ್ಯಾನಕ್ಕೆ ಭಂಗ ತಂದರೆಂದು, ಅವನನ್ನು ಅಣಕಿಸಿದರೆಂದು ಅವನ ಹಳ್ಳಿಯ ಕೆಲವರಿಗೆ ತಪರಾಕಿ ಕೊಟ್ಟಿದ್ದ. ಕೋಪಗೊಂಡು ಅವರ ಕಪಾಳಕ್ಕೆ ಮೂರ್ನಾಲ್ಕು ಬಾರಿ ಬಾರಿಸಿದನಂತೆ. ಎಲ್ಲರಲ್ಲೂ ಅನುಕಂಪವುಳ್ಳವನಾಗಿರುವಂತಹ ಬುದ್ಧನು ಹೇಗೆ ಹೊಡೆದ ಎಂದು ಆಗ ಸಾರ್ವಜನಿಕವಲಯದಲ್ಲಿ ಚರ್ಚೆ ಆಯಿತು.

ರಾಮ್ ಬಹದ್ದೂರ್ ಬಾಮ್ಜಾನ್, ಪಾಲ್ದೆನ್ ಡೋರ್ಜೆ ಆದ, ನಂತರ ಮೈತ್ರಿಯ ಗುರು ಮಹಾ ಸಂಬೋಧಿ ಧರ್ಮ ಸಂಘ ಎಂದು ಘನವಾದ ಸ್ಥಾನಕ್ಕೆ ಏರಿಸಲ್ಪಟ್ಟಿದ್ದ. ರಾಜಕಾರಣಿಗಳು, ಪ್ರಭಾವಶಾಲಿ ಬಂಡವಾಳದಾರರು ಸೇರಿದಂತೆ ಅವನ ಉಗ್ರವಾಗಿ ಬೆಂಬಲಿಸುವ ದೊಡ್ಡ ಅನುಯಾಯಿಗಳ ಗುಂಪೇ ರಚಿತವಾಗಿತ್ತು.

ಅಹಿಂಸೆ, ಅನುಕಂಪ ಮತ್ತು ವಿಶ್ವಶಾಂತಿ ಇತ್ಯಾದಿ ದೊಡ್ಡ ದೊಡ್ಡ ಪದಗಳನ್ನು ತಮ್ಮ ವಾಕ್ಯ ಜೋಡಣೆಗಳಲ್ಲಿ ಉಪಯೋಗಿಸುವ ಅವನ ಅನುಯಾಯಿಗಳು ನಟೋರಿಯಸ್ ರೌಡಿಗಳಂತೆ ವರ್ತಿಸುತ್ತಿದ್ದು, ಅದರ ಬಲಿಪಶುಗಳು ತಮ್ಮ ದುರಂತದ ಅನುಭವಗಳನ್ನು ಮೀಡಿಯಾಗಳ ಮುಂದೆ ಹಂಚಿಕೊಂಡರು. ಆದರೆ ದೀರ್ಘಕಾಲದ ರಾಜಕೀಯ ಗೊಂದಲದ ವಿದ್ಯಮಾನಗಳಿಂದಾಗಿ ಅವನ ರಂಪಾಟಗಳು ಹೆಚ್ಚು ಬಯಲಿಗೆ ಬರಲಿಲ್ಲ ಹಾಗೂ ಅದಕ್ಕೆ ಸರ್ಕಾರವೂ ಹೆಚ್ಚು ಗಮನ ಹರಿಸಲಿಲ್ಲ. ಈ ಘಟನೆಗಳನ್ನು ವಿವರಿಸಿ 'ದ ಹಿಮಾಲಯನ್ ಟೈಮ್ಸ್' ಕೇಳಿತ್ತು, "ಈ ಬುದ್ಧ ಬಾಲಕನು ನ್ಯಾಯಕ್ಕಿಂತ ಮೇಲಿನವನೇ" ಎಂದು.

ಬುದ್ಧನಾಗಿಯೋ, ಬಾಬನಾಗಿಯೋ, ಮಾತೆಯಾಗಿಯೋ ತಮ್ಮೊಳಗಿನ ಅಬ್ಬೇಪಾರಿಯೊಬ್ಬ ಮೇಲೆದ್ದು ನಿಂತಾಗ ಅವನನ್ನು ಬುದ್ಧನೆಂದೋ, ದೇವರೆಂದೋ, ದೇವಿಯೆಂದೋ, ಪವಾಡ ಪುರುಷನೆಂದೋ ವಿಜೃಂಭಿಸಿ ಮೆರೆಸುವ ಕಾರಣಗಳು ಹಲವಿರುತ್ತವೆ. ಆದರೆ ಮುಖ್ಯವಾದ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳನ್ನು ಗಮನಿಸಿದರೆ ಹಲವಾರು ಅಂಶಗಳು ಗಮನಕ್ಕೆ ಬರುತ್ತವೆ. ಅವುಗಳನ್ನು ನೋಡೋಣ ಮುಂದಿನ ಸಂಚಿಕೆಗಳಲ್ಲಿ. ■

# ಅಂಚೆಚೀಟಿ ಇಲ್ಲದಿರಬಹುದು, ಆದರೆ ನೆನಪು ಇದೆಯಲ್ಲ...




**ಮಾ**ಜಿ ಪ್ರಧಾನಿಗಳಾದ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿಯವರ ಭಾವಚಿತ್ರ ಇರುವ ಅಂಚೆಚೀಟಿಗಳನ್ನು ಸ್ಥಗಿತಗೊಳಿಸಲು ಕೇಂದ್ರ ಸರಕಾರ ತೀರ್ಮಾನಿಸಿದೆ ಎನ್ನುವ ಸುದ್ದಿಯನ್ನು ಓದಿದಾಗ ಅಚ್ಚರಿಯೇನೂ ಆಗಲಿಲ್ಲ; ಆದರೆ ಬೇಸರವಾಯಿತು.




ಕಾರಣ ಇಷ್ಟೇ: ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಇಬ್ಬರೂ ಈ ದೇಶದ ಪ್ರಧಾನಿಗಳಾಗಿದ್ದವರು ಮತ್ತು ಅವರಿಬ್ಬರೂ ಹಂತಕರಿಂದ ದಾರುಣವಾಗಿ ಹತ್ಯೆಗೀಡಾದವರು. ಅವರು ಜೀವ ಕಳೆದುಕೊಂಡಿದ್ದು ದೇಶಕ್ಕೆ ಸಂಬಂಧಿಸಿದ ನಿರ್ಧಾರದಿಂದಾಗಿಯೇ ಹೊರತು ವೈಯಕ್ತಿಕ ಕಾರಣಕ್ಕೇನೂ ಅಲ್ಲ. ಇಂದಿರಾ ಅವರು ಬ್ಲೂ ಸ್ಟಾರ್ ಕಾರ್ಯಾಚರಣೆಯ ಕಾರಣವಾಗಿ ತಮ್ಮ ಸಿಖ್ ಅಂಗರಕ್ಷಕರ ಗುಂಡಿಗೆ ಬಲಿಯಾದರೆ, ರಾಜೀವರು ಶ್ರೀಲಂಕಾದಲ್ಲಿ ಐಪಿಕೆಎಫ್ ಕಾರ್ಯಾಚರಣೆಗೆ ಪ್ರತಿಯಾಗಿ ಎಲ್‌ಟಿಟಿಇಗಳ ಮಾನವಬಾಂಬ್ ಸ್ಫೋಟದಲ್ಲಿ ಛಿದ್ರಗೊಂಡವರು. ಇಂದಿರಾರಂತೂ ದೇಶವನ್ನು ಸುದೀರ್ಘ ಕಾಲ ಮುನ್ನಡೆಸಿದ ಏಕೈಕ ಮಹಿಳಾ ಪ್ರಧಾನಿ ಮತ್ತು ಬಾಂಗ್ಲಾ ವಿಮೋಚನೆಯ ರೂವಾರಿ ಬೇರೆ.

ಮೋದಿ ಸರಕಾರ ಅನುಸರಿಸುತ್ತಿರುವ ಚಿಲ್ಲರೆ ರಾಜಕಾರಣದ ಭಾಗವಾಗಿ ಇಂತಹ ಮಹನೀಯರ ಹೆಸರನ್ನು ರಸ್ತೆಗಳಿಂದ, ಯೋಜನೆಗಳಿಂದ, ಅಂಚೆ ಚೀಟಿಗಳಿಂದ ತೆಗೆಯಬಹುದು. ಆದರೆ ಅವರ ನೆನಪನ್ನು ಇತಿಹಾಸದಿಂದ ಮತ್ತು ಜನಮನದಿಂದ ತೆಗೆಯಲಾಗದು ಎನ್ನುವುದನ್ನು ಈ ತಿಳಿಗೇಡಿಗಳಿಗೆ ಮನವರಿಕೆ ಮಾಡಿಕೊಡುವವರಾದರೂ ಯಾರು?

*- ಗುಲಾಬಿ ಬಿಳಿಮಲೆ, ಮಂಗಳೂರು*

## ವೇದದ ಪೊಳ್ಳುತನವನ್ನು ಬಯಲಾಗಿಸಿದ ಶಿಕ್ಷಕ

ಕೆಲ ದಿನಗಳ ಹಿಂದೆ ವಾಟ್ಸ್ ಆಪ್ ಹಾಗು ಟಿವಿ ಚಾನೆಲ್‌ಗಳಲ್ಲಿ ಒಂದು ದೃಶ್ಯ ಸುದ್ದಿಯಾಗಿತ್ತು, ಅದು ಶಿಕ್ಷಕನೊಬ್ಬ ಚಿಕ್ಕ ಬಾಲಕನೊಬ್ಬನನ್ನು ನಿರ್ದಾಕ್ಷಿಣ್ಯವಾಗಿ ಥಳಿಸುವ ದೃಶ್ಯ, ಅದೂ ಬಹಿರಂಗವಾಗಿ ಸುತ್ತಲೂ ನೆರೆದಿರುವ ಹಲವಾರು ಜನರ ಮುಂದೆಯೇ ಇದು ರಾಜಾರೋಷದಿಂದ ನಡೆದಿದೆ. ಈಗ ಮೊದಲಿನಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಹೊಡೆಯಬಾರದೆಂಬ ಹೊಸ ನಿಯಮಾವಳಿಗಳಿವೆಯಾದರೂ ಶಿಕ್ಷಾರ್ಹವಾದ ಈ ವಿಚಾರವನ್ನು ಬದಿಗಿಟ್ಟು ನೋಡಿದರೂ ಕೂಡ ಆ ದೃಶ್ಯ ಕರುಳು ಹಿಂಡುವಂತಿದೆ. ಯಾಕೆಂದರೆ ಶಿಕ್ಷೆಗೊಳಗಾಗುತ್ತಿರುವ ಆ ಬಾಲಕನ ಕೈಮುರಿದು ಪಿಒಪಿ ಬ್ಯಾಂಡೇಜ್ ಕಟ್ಟಲಾಗಿದೆ. ಅಂತವನನ್ನು ಎಳೆದಾಡುತ್ತಾ ಕಿವಿ ಹಿಡಿದು ಮೇಲೆತ್ತುತ್ತಾ ಶಿಕ್ಷಕ ಥಳಿಸುತ್ತಿದ್ದಾನೆ. ಇದು ವೇದ ಪಾಠಕ್ಕೆ ಸಂಬಂಧಿಸಿದ ವಿಚಾರದಲ್ಲಿ ಸುಳ್ಯದಲ್ಲಿ ನಡೆದಂತಹ ಘಟನೆ.

ವೈದಿಕರು ತಮ್ಮ ವೇದೋಪನಿಷತ್‌ಗಳೇ ಅಂತಿಮ ಸತ್ಯ ಎಂದು ಎಲ್ಲಾ ಅವೈದಿಕ ವರ್ಗವನ್ನು ನಂಬಿಸುತ್ತಿದ್ದಾರೆ. ದಯವೇ ಇಲ್ಲದ ಧರ್ಮ ಯಾತಕ್ಕೇ? ಅದನ್ನು ಸಾರುವ ಧರ್ಮಶಾಸ್ತ್ರಗಳೂ ಯಾವ ಕಾರಣಕ್ಕೆ? ಕನಿಷ್ಟ ಮಾನವೀಯತೆ ತೋರದ ಇಂತಹ ಶಿಕ್ಷಕರು ಉಪದೇಶಿಸುವ ಈ ವೇದಪಾಠಗಳು ಯಾವ ಪುರುಷಾರ್ಥಕ್ಕಾಗಿ? ಸರಕಾರದ ಹಣಸಹಾಯ ಪಡೆದು ಧಾರ್ಮಿಕ ದತ್ತಿ ಇಲಾಖೆಯ ಮೂಲಕ "ಎಲ್ಲರಿಗೂ" ಉಚಿತ ವೇದಪಾಠ ತರಬೇತಿ ನೀಡುವ ಶಿಬಿರಗಳು ಕೆಲ ದೇಗುಲಗಳಲ್ಲಿ ಆಗಾಗ ನಡೆಯುತ್ತವೆ (ದಿನ ಪತ್ರಿಕೆಯ ಜಾಹೀರಾತಿನಲ್ಲಿ 'ಎಲ್ಲರಿಗೂ' ಉಚಿತ ಪ್ರವೇಶ ಅಂತಿದ್ದರೂ ಜಾಹಿರಾತಿನ ಕೊನೆಯಲ್ಲಿ ಶಿಬಿರಕ್ಕೆ ಬರುವವರಿಗೆ ಬ್ರಹ್ಮೋಪದೇಶ ನಡೆದಿರಬೇಕೆಂಬ ಒಕ್ಕಣೆ ಸೇರಿಸಿ ಪರೋಕ್ಷವಾಗಿ ಶೂದ್ರ ವರ್ಗ ಹಾಗು ಸ್ತ್ರೀಯರಿಗಿದು ನಿಷೇಧವೆಂದು ಜಾಣತನದಿಂದ ಸೂಚಿಸುತ್ತಾರೆ).

ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ ಸಕಲ ವೇದ ಶಾಸ್ತ್ರಗಳೆಂಬ ನೇಣ ಕಟ್ಟಿ ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ ಭ್ರಾಂತಿ ಎಂಬ ತಾಯಿ ಎಂದು ಅಲ್ಲಮ ಪ್ರಭುಗಳಾದಿಯಾಗಿ ಅನೇಕ ಶರಣರು, ಬುದ್ಧನಂತಹ ದಾರ್ಶನಿಕರುಗಳು ಮಾನವೀಯ ಮೌಲ್ಯಗಳಿಲ್ಲದ ಬರೇ ಭ್ರಾಂತಿಯ ಈ ವೇದಗಳನ್ನು ಅಥವ ಅದರ ಅನುಯಾಯಿಗಳನ್ನು ಬಹಳ ಹಿಂದೆಯೇ ಕಡೆಗಣಿಸಿ ನೋಡಿದ ಇತಿಹಾಸವಿದೆ. ಇದನ್ನು ಸುಳ್ಳದ ಈ ಸೋಮಸುಂದರ ಶಾಸ್ತ್ರಿ ಎಂಬ ಶಿಕ್ಷಕ ಇದೀಗ ಎತ್ತಿ



ತೋರಿಸಿದ್ದಾನಷ್ಟೆ. ಈ ಬಗ್ಗೆ ಯಾರೂ ತಕರಾರೆತ್ತದಿದ್ದಾಗ ಸ್ಥಳೀಯ ದಲಿತ ಮುಖಂಡರೊಬ್ಬರು ಆ ಮಹಾ ವೈದಿಕನ ವಿರುದ್ಧ ಪೋಲಿಸ್ ದೂರು ಕೊಟ್ಟಿದ್ದರು.


ಇದೀಗಲಂತೂ ಎಲ್ಲೆಡೆ ಗುರುಕುಲ ಶಿಕ್ಷಣ ಪದ್ಧತಿಯ ಬಗ್ಗೆಯೇ ಹಿಂದೂಗಳ ಸಾಂಸ್ಕೃತಿಕ ಸಭೆ ಸಮಾರಂಭಗಳಲ್ಲಿ ಅತಿಯಾದ ಉತ್ಪ್ರೇಕ್ಷೆಯಿಂದ ಮಾತನ್ನಾಡಲಾಗುತ್ತಿದೆ. ನಮ್ಮ ಈಗಿನ ಶಿಕ್ಷಣ ಪದ್ಧತಿ ಸರಿಯಿಲ್ಲ, ಮೆಕಾಲೆಯ ಶಿಕ್ಷಣ ಪದ್ಧತಿಯಿಂದಲೇ ಈ ನಮ್ಮ ಸಂಸ್ಕೃತಿ ದೇಶ ಎಲ್ಲವೂ ಹಾಳಾಗಿಹೋಗಿದೆ ಎಂದು ಬೊಗಳೆ ಬಿಡುವ ವೈದಿಕ-ಅವೈದಿಕ ಮಹನೀಯರುಗಳು ಎಲ್ಲೆಡೆ ಕಾಣಸಿಗುತ್ತಾರೆ. ಆದರೆ ಈ ಜನಗಳಿಗೆ ಹಿಂದಿನ ಆ ಗುರುಕುಲ ಶಿಕ್ಷಣದಲ್ಲಿ ಕೇವಲ ಬ್ರಾಹ್ಮಣರು ಮತ್ತು ರಾಜವಂಶಸ್ಥರಿಗಷ್ಟೇ ಪ್ರವೇಶವಿತ್ತು; ಬ್ರಾಹ್ಮಣರಿಗೆ ಅಲ್ಲಿ ಕಲಿಸುತ್ತಿದ್ದುದು ದುಡಿದು ಬದುಕುವ ಶಿಕ್ಷಣದ ಬದಲಿಗೆ ಇವೇ ವೇದಶಾಸ್ತ್ರಗಳ ಗೊಡ್ಡು ಕಂಠಪಾಠ ಪ್ರವಚನಗಳಷ್ಟೇ (ದುಡಿಯಲು ಹೇಗೂ ಶೂದ್ರರೆಂದ ಹುಟ್ಟು ಗುಲಾಮರು ಇದ್ದೇ ಇದ್ದಾರಲ್ಲ; ಸೇವೆ ಹಾಗು ದುಡಿಯುವುದು ಅವರ ಪ್ರಾರಬ್ಧ ಕರ್ಮ ನಮ್ಮ ಬದುಕು ವೇದೋಪನಿಷತ್ ಧರ್ಮಶಾಸ್ತ್ರಗಳ ಪಾರಾಯಣ ಹೆಸರಿನ ಜ್ಞಾನ ಸಂಗ್ರಹಣೆಗಷ್ಟೇ ಸೀಮಿತ ಎಂದು ಈ ಗುರುಕುಲಗಳು ಬಹುತೇಕ ಇಂತಹ ಕೂಳುದಂಡಗಳ ಸೃಷ್ಟಿಗಷ್ಟೇ ಸೀಮಿತವಿತ್ತು) ಎಂಬ ಸತ್ಯ ಮರೆಮಾಚಿರುವುದು ನೆನಪಿದ್ದಂತಿಲ್ಲ, ಇದಕ್ಕೆ ಏಕಲವ್ಯ, ಕರ್ಣ, ಸತ್ಯಕಾಮ, ಜಾಬಾಲನಂತಹ ಪೌರಾಣಿಕ ಪುರುಷರಿಂದ ಹಿಡಿದು ಮಹಾಕವಿ ರನ್ನನವರೆಗೆ ವಿದ್ಯೆಯ ಹೆಸರಲ್ಲಿ ಅವಮಾನಿತರಾದ ಅನೇಕಾನೇಕ ಉದಾಹರಣೆಗಳು ಕಾಣಸಿಗುತ್ತವೆ. ಅದಕ್ಕೇ ಶ್ರೀ ನಾರಾಯಣಗುರುಗಳಂತವರು ಹೇಳಿದ್ದು 'ವಿದ್ಯೆಗೆ ಅವಕಾಶ ಮಾಡಿಕೊಟ್ಟ ಬ್ರಿಟಿಷರೇ ನನ್ನ ನಿಜವಾದ ಗುರುಗಳು' ಎಂದು.

*- ಅವಿನಾಶ್ ಎಮ್.ಎಸ್. ನೆಲ್ಲಿಕಾರ್*



## ಇಂತಹ ಕರ್ಮಕ್ಕೆ ಯಾಕೆ ಘರ್ ವಾಪಸಿ ಆಗಬೇಕು?

ಚಲಚಿತ್ರ ಸಂಗೀತಕಾರ ಎ.ಆರ್.ರೆಹಮಾನ್ ಇವರು ಒಂದು ಧಾರ್ಮಿಕ ಇರಾನಿ ಫಿಲ್ಮಿಗೆ ಹಿನ್ನೆಲೆ ಸಂಗೀತ ಒದಗಿಸಿದ್ದಕ್ಕಾಗಿ ಅವರ ವಿರುದ್ಧ ಭಾರತದ ಒಂದು ಮುಸ್ಲಿಂ ಸಂಘಟನೆ




ಫತ್ವಾ ಹೊರಡಿಸಿದೆ ಎಂಬ ಕಾರಣಕ್ಕೆ ರೆಹಮಾನ್ ಇವರು ಘರ್ ವಾಪ್ಸಿ (ಮರಳಿ ಮನೆಗೆ) ಅಡಿಯಲ್ಲಿ ಹಿಂದೂ ಧರ್ಮಕ್ಕೆ ಬರಬೇಕೆಂದು ಸಂಘಪರಿವಾರ ಹೇಳಿಕೆ ಕೊಟ್ಟಿದೆ. ಹಿಂದೂ ಧರ್ಮ ರೆಹ್ಮಾನರ ಹಿರಿಯರ ಮನೆ ಎಂದು ಸಂಘಗಳು ಹೇಳಿಕೆ ಕೊಟ್ಟಿದ್ದಾರೆ ಸರಿ. ಆದರೆ ಯಾರೇ ಆಗಲಿ ತನ್ನ ಹಿರಿಯರ ಮನೆ ಎಂಬ ಅಭಿಮಾನದಲ್ಲಿ ಹಾವು ಚೇಳು ತುಂಬಿದ ಮನೆಗೆ, ಕಿಟಕಿ ಬಾಗಿಲು ಇಲ್ಲದ ಮನೆಗೆ, ಬೆಳಕಿಲ್ಲದ ಮನೆಗೆ, ಚಳಿ ಗಾಳಿ ಮಳೆಯಿಂದ ರಕ್ಷಣೆ ಕೊಡಲಾಗದ ಮನೆಗೆ, ಕುಟುಂಬದೊಳಗೆಯೇ ಮೇಲು ಕೀಳೆಂಬ ತಾರತಮ್ಯ ತೋರುವ ಮನೆಗೆ, ಕೆಟ್ಟ ನೆರೆಹೊರೆಯವರಿರುವ ಮನೆಗೆ ಯಾರಾದರೂ ಮರಳಿ ಹೋಗಿ ವಾಸಿಸುತ್ತಾರೆಯೇ? ಮೂಢನಂಬಿಕೆಗಳ ಗಣಿಯಾದ ಹಿರಿಯರ ಮನೆಗೆ ಮರಳಿ ಹೋಗುವುದು ಬುದ್ಧಿವಂತಿಕೆಯೇ?

ರೆಹ್ಮಾನ್ ಹಿಂದೂ ಧರ್ಮಕ್ಕೆ ಮರಳಿ ಬಂದರೆಂದೇ ಇಟ್ಟುಕೊಳ್ಳಿ, ಆಗ ಅವರನ್ನು ಯಾವ ಹಿಂದೂ ಜಾತಿಗೆ ಸೇರಿಸಿಕೊಳ್ಳುತ್ತೀರಿ? ಅವರನ್ನು ಬ್ರಾಹ್ಮಣರೆಂದು ಪರಿಗಣಿಸುತ್ತೀರಾ? ದೇವಸ್ಥಾನದ ಗರ್ಭ ಗುಡಿಯೊಳಗೆ ಹೋಗಲು ಹಾಗೂ ಎಲ್ಲರನ್ನೂ ಮುಟ್ಟಲು ಬಿಡುತ್ತೀರಾ? ಹತ್ತಾರು ವಿಚಿತ್ರ ರೂಪದ ದೇವರ ಹೆಸರಲ್ಲಿ ನೂರಾರು ದುಬಾರಿ ಪೂಜೆ ಮಾಡಿಸಿ ಹಣ ಕೀಳುವುದಿಲ್ಲ ಎಂದು ಭರವಸೆ ಕೊಡುತ್ತೀರಾ? ಕಾವಿಧಾರಿಗಳು ಅಥವಾ ಢೋಂಗಿ ದೇವಮಾನವರು ಅವರನ್ನು ಮೋಸ ಮಾಡಿ ಹಣ ಸುಲಿಯುವದಿಲ್ಲ ಎಂದು ಖಾತ್ರಿ ಕೊಡಬಲ್ಲಿರಾ? ಅವರಿಗೆ ತಮ್ಮಂದಿರು ತಂಗಿಯರು ಇದ್ದರೆ ಅವರಿಗೆ ನಿಮ್ಮ ಕಡೆಯ ಬ್ರಾಹ್ಮಣ ಅಥವಾ ಯಾವುದಾದರೂ ಮೇಲ್ಜಾತಿ ಹುಡುಗಿಯನ್ನು ಮದುವೆ ಮಾಡಿಕೊಡಲು ತಯಾರಿದ್ದೀರಾ? ರೆಹ್ಮಾನರ ಮಕ್ಕಳು ಬೆಳೆದು ದೊಡ್ಡವರಾದಾಗ ನಿಮ್ಮ ಮೇಲ್ಜಾತಿ ಹುಡುಗಿ/ಹುಡುಗನಿಗೆ ಕೊಟ್ಟು ಮದುವೆ ಮಾಡಲು ತಯಾರಿದ್ದೀರಾ? (ರೆಹ್ಮಾನರ ಅಜ್ಜ ಮೂಲತಃ ಮುದಲಿಯಾರ್ ಜಾತಿಯವರಂತೆ).

ರೆಹ್ಮಾನ್ ಹಿಂದೂ ಧರ್ಮದಲ್ಲಿಯೇ ಇರುತ್ತಿದ್ದಾರೆ ಅವರು ತಮ್ಮ ಪ್ರತಿಭೆಯ ಬಲದಿಂದ ಅಂತರರಾಷ್ಟ್ರೀಯ ಮಟ್ಟಕ್ಕೆ ಏರಲು ಎಂದೂ ಸಾಧ್ಯವಾಗುತ್ತಿರಲೇ ಇಲ್ಲವೇನೋ. ಯಾಕೆಂದರೆ ಕೇವಲ ಮೇಲ್ಜಾತಿಯವರಿಗೆ ಮಾತ್ರ ಪ್ರತಿಭೆ ಮತ್ತು ಬುದ್ಧಿಮತ್ತೆ ಇರುವುದು ಎಂದು ಭಾವಿಸುವ ಹಿಂದೂ ಧರ್ಮದಲ್ಲಿ ರೆಹ್ಮಾನರ ಕೆಳಜಾತಿ ನೋಡಿ ಅವರ ಎದುರಾಳಿ ಜಾತಿಯವರು ಅಥವಾ ಸ್ವಜಾತಿಯ ಮತ್ಸರಿಗಳು ಅವರನ್ನು ಎತ್ತರಕ್ಕೆ ಏರಲು ಬಿಡುತ್ತಿರಲೇ ಇಲ್ಲ. ಎಷ್ಟಾದರೂ ಏಣಿಯಂತೆ ಮೇಲೆ ಹೋಗುವವರ ಕಾಲು ಎಳೆಯುವುದು ಹಿಂದೂಗಳ ಆನುವಂಶಿಕ ಬುದ್ಧಿ ತಾನೇ. ಈ ಎಲ್ಲಾ ಕರ್ಮಕ್ಕೆ ಅವರು ಹಿಂದೂ ಧರ್ಮಕ್ಕೆ ಮರಳಿ ಬರಬೇಕೆ?

*- ಆರ್.ಬಿ. ಶೆಣವ, ಮಂಗಳೂರು*

## ಉಪವಾಸದಲ್ಲಿಡಲು ದೇವರು ಸ್ವಾರ್ಥಿಯೇ?

ಜೈನರ ಪರ್ಯೂಷಣದ ನೆಪದಲ್ಲಿ ಮುಂ
ಬಿಜೆಪಿ ಸರಕಾರ ಮಾಡಿದ ಮಾಂಸ ಮಾರಾಟ ನಿಷ
ವಿರೋಧಿಸಿದ್ದ ಕಾಂಗ್ರೆಸ್ ಸ್ವತಃ ತಾನೇ ಬೆಂಗಳ
ಗಣೇಶ ಚತುರ್ಥಿಯ ನೆಪದಲ್ಲಿ ಮಾಂಸ ಮಾರಾಟ
ಹೇರಿ ಅಚ್ಚರಿ ಮೂಡಿಸಿದೆ. ಕಾಂಗ್ರೆಸ್ಸಿನದು ಎರಡು
ಅದು ಮೃದು ಹಿಂದೂತ್ವ ನೀತಿ ಅನುಸರಿಸುತ್ತಿ
ಆರೋಪಕ್ಕೆ ಈಗ ಪುರಾವೆ ಸಿಕ್ಕಂತಾಯಿತು. ಏನ
ಹಿಂದೂ ಹಬ್ಬಗಳಂದು ಮಾಂಸಾಹಾ
ಮೀನು-ಮಾಂಸ ಸೇವಿಸಬಾರದೆಂಬ ತರ್ಕವಿಹೀನ
ಯಾವಾಗಿನಿಂದ ಯಾರು ಶುರುಮಾಡಿದರು?

ಬ್ರಹ್ಮ ಮತ್ತು ಸರಸ್ವತಿಯ ಹೊರತಾಗಿ ಬೇ
ಹಿಂದೂ ದೇವರುಗಳು ಮಾಂಸಾಹಾರಿಗಳಾಗಿದ್ದರು
ಮೂಲ ಪುರಾಣಗಳಲ್ಲಿಯೇ ನಮೂದಿತವಾಗಿದೆ.
ವಿವೇಕಾನಂದರೇ ಇದನ್ನು ಸಮರ್ಥಿಸಿದ್ದಾರೆ.
ಕಾಲದಿಂದಲೂ ಹಬ್ಬ ಹುಣ್ಣಿಮೆ ಶುಭ ಸಂದ
ಕುಟುಂಬದೊಳಗೆ ಸಂತೋಷ ಹಂಚಿಕೆ
ಮಾಂಸಾಹಾರ ತಯಾರಿಸುವ ಪದ್ಧತಿ ಇತ್ತು.
ಬೃಹದಾರಣ್ಯಕೋಪನಿಷತ್ ಎಂಬ ಆದಿ ಗ್ರಂಥ
ಶ್ರೀಶೈಲ ಮಹಾತ್ಮೆಯಲ್ಲಿ ಉಲ್ಲೇಖಿಸಿರುವಂತೆ
ಬೇಡನ ರೂಪದಲ್ಲಿ ಬಂದಾಗ ಕೃಷ್ಣಾರ್ಜುನರು
ಪ್ರಾಣಿ ಬೇಟೆ ಮತ್ತು ಮಾಂಸ ಭಕ್ಷಣೆಯಲ್ಲಿ ತೊ
ಅಥವಾ ರಾಮ ಲಕ್ಷ್ಮಣ ಸೀತೆಯರು ವನವಾಸದ
ಬೇಟೆಯಾಡಿದ್ದು, ಅಥವಾ ವಾತಾಪಿ-ಇಲ್ವಾಲರು
ಋಷಿ ಮತ್ತು ಶಿಷ್ಯರಿಗೆ ಹಬ್ಬದಂದು ಆಡಿ
ಬೇಯಿಸಿ ಹಾಕಿದ್ದು ಅಥವಾ ರಂತಿದೇವ
ರಾಜ ಹಬ್ಬಗಳಂದು ಬ್ರಾಹ್ಮಣರಿಗಾಗಿ ಹ
ದನಗಳನ್ನು ಕಡಿದು ಅಡುಗೆ ಮಾಡಿಸು
ಇವೆಲ್ಲಾ ಪುರಾಣ ಕಥೆಗಳು ಹಬ್ಬದಂದು
ಹಿಂದೂಗಳು ಮಾಂಸಾಹಾರ ಸೇವಿಸುತ್ತಿದ್ದರು ಎ
ಸಾಕ್ಷಿ. ಹಾಗೆಯೇ ಮಾಂಸಾಹಾರ ಒಳ್ಳೆಯದೆಂದು
ಬ್ರಾಹ್ಮಣದಲ್ಲಿ (11.7.1.3) ಮತ್ತು ಯಜ್ಞದಲ್ಲಿ
ಕರುವಿನ ಮಾಂಸವನ್ನು ತಿನ್ನದ ಯಾಜ್ಞಿಕನು 2
ಪಶುವಾಗಿ ಹುಟ್ಟುತ್ತಾನೆ ಎಂದು ಮನುಸ್ಮೃತಿ (5:3
ಹೇಳಲಾಗಿದೆ. ಎಲ್ಲ ಜೀವಿಗಳನ್ನೂ ತಿನ್ನಲಿಕ್ಕಾಗಿಯೆ
ಸೃಷ್ಟಿಸಿದೆ ಎಂದು ಮನುಸ್ಮೃತಿ (5:39) ಯ
ಹೇಳಲಾಗಿದೆ.

ಆದರೆ ಜೈನ ಧರ್ಮದ ಪ್ರಭಾವದಿಂದ
ನವ-ವೈದಿಕ ಪಂಥದ ಕಬಂಧಬಾಹು ಹಿಂದೂ ಸ
ಮೇಲೆ ಪಸರಿಸಿದಂತೆ ಈ ಪದ್ಧತಿ ಬದಲಾಯಿತು.
ಹಬ್ಬಗಳಂದು ಮಾಂಸಾಹಾರ ಸೇವಿಸಬಾರದು
ಯಾವ ಪುರಾತನ ಹಿಂದೂ ವೇದ ಉಪನಿ
ಹೇಳಲಾಗಿದೆ? ಮೀನು ಮಾಂಸ ಮಾರುವ ತ
ಕುಟುಂಬದವರು ತನ್ನ ಹಬ್ಬದಂದೇ ಆದಾಯ
ಉಪವಾಸ ಬೀಳುವುದು ಯಾವ ದೇವರಿಗೆ ಸಮ್ಮತ
ಸಾಧ್ಯ? ದೇವರು ಅಷ್ಟು ಸ್ವಾರ್ಥಿಯೇ? ಧರ್ಮಶಾಸ್ತ್ರ
ತರ್ಕಶಾಸ್ತ್ರ ಇವೆರಡಕ್ಕೆ ಬದ್ಧ ವೈರ ಎಂಬುದ
ಆದರೆ ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಧರ್ಮ
ತರ್ಕ ಮೇಳೈಸಿ ಸೌಹಾರ್ದತೆ ಮೆರೆಯುವ
ಬೇಕಿದೆ.

*- ರಾಮಕೃಷ್ಣ ಎ. ಕೆ. ಮಂಗ*

## ವಕ್ಫ್ ಮಂಡಳಿಯಲ್ಲಿ ಯುವಕರಿಗೆ ಮೋಸ?

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಿಂದ 45
'ಡಿ' ಹಾಗೂ ಲಿಫ್ಟ್ ಆಪರೇಟರ್ ಹುದ್ದೆಗಳಿಗಾ
ಆಹ್ವಾನಿಸಲಾಗಿತ್ತು, ಈ ಅರ್ಜಿ ಸಲ್ಲಿಸಲು ಇದೀಗ
ದಿನವೂ ಅಂತ್ಯಗೊಂಡಿದೆ. ಈ ಅರ್ಜಿಯನ್ನು ಆ
ಮೂಲಕವೇ ಸಲ್ಲಿಸಬೇಕಾಗಿತ್ತು, ಇದರ ಅರ್ಜಿ
ಜಿಲ್ಲಾ ವಕ್ಫ್ ಕಚೇರಿ ಅಥವಾ ರಾಜ್ಯದ
ಕಚೇರಿಯಿಂದ ಪಡೆದು ಅರ್ಜಿ ಸಲ್ಲಿಸುವಂತೆ
ಲಾಗಿತ್ತು, ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಮಂ
ಲ್ಲಿರುವ ಜಿಲ್ಲಾ ವಕ್ಫ್ ಕಚೇರಿಯಲ್ಲಿ ಅರ್ಜಿ
ಇದ್ದ ಕೊನೆಯ ದಿನಕ್ಕೂ ಮುನ್ನಾ ದಿ
ಶನಿವಾರದವರೆಗೂ (19/09/2015) ಅರ್ಜಿ ಲಭ
ಅಲ್ಲಿನ ಸಿಬ್ಬಂದಿಗಳನ್ನು ವಿಚಾರಿಸಿದರೆ 'ಹುದ್ದೆ ಅ
ಹೊರಡಿಸಿರುವುದು ನಿಜ, ಆದರೆ ಇಲ್ಲಿಗೆ ಅರ್ಜಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹು
ಪ್ರತಿಕ್ರಿಯೆಗಳನ್ನು 9980331427 ನಂ
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿ

...ಎಂದಿಲ್ಲ' ಎನ್ನುವ ಉತ್ತರ ನೀಡಿದ್ದಾರೆ. ಅವುಗಳನ್ನು ...ಗಳೂರಿನ ಮುಖ್ಯ ಕಚೇರಿಯಲ್ಲೇ ಪಡೆಯುವಂತೆ ಬಿಟ್ಟಿ ...ಲಹೆ ನೀಡಿದ್ದಾರೆ. ಇದರಿಂದಾಗಿ ವಕ್ಫ್ ಕಚೇರಿಗಳಲ್ಲಿ ...ರ್ಯ ನಿರ್ವಹಿಸಬೇಕೆಂಬ ಮಹದಾಸೆ ಇಟ್ಟುಕೊಂಡಿದ್ದ ...ಲ್ಲೆಯ ಮುಸ್ಲಿಂ ಉದ್ಯೋಗಾಕಾಂಕ್ಷಿಗಳಿಗೆ ನಿರಾಸೆಯಾಗಿದೆ. ...ಲ್ಲದೇ ಇನ್ನೊಂದು ಕಡೆಯಲ್ಲಿ ರಾಜ್ಯ ವಕ್ಫ್ ಬೋರ್ಡ್‌ನ ...ಧಿಕೃತ ವೆಬ್‌ಸೈಟ್ www.karwakf.org ಕೂಡಾ ...ರೆಯದೆ, ಸೇವೆಯು ಸದ್ಯ ಲಭ್ಯವಿಲ್ಲ ಎನ್ನುವ ಸಂದೇಶವನ್ನು ...ತೋರಿಸುತ್ತಿತ್ತು. ಜಿಲ್ಲಾ ವಕ್ಫ್ ಕಚೇರಿಯಲ್ಲಿ ದೂರವಾಣಿ ...ಖ್ಯೆ ಪಡೆದು ಮುಖ್ಯ ಕಚೇರಿಯನ್ನು ಸಂಪರ್ಕಿಸಲು ...ಯತ್ನಿಸಿದರೆ ದೂರವಾಣಿ ಸಂಖ್ಯೆ ಚಾಲನೆಯಲ್ಲಿಲ್ಲ ಎನ್ನುವ ...ಸಂದೇಶ. ಮೊದಲೇ ಜನರ ನಂಬಿಕೆ ಕಳೆದುಕೊಂಡಿರುವ ...ಕ್ಫ್ ಮಂಡಳಿ ಉದ್ಯೋಗದ ವಿಷಯದಲ್ಲೂ ...ಶಂಕೆಯಗೊಂಡಿದೆಯಾ ಎನ್ನುವ ಸಂಶಯ ಕಾಡುತ್ತಿದೆ.

ನೆರೆಯ ಉಡುಪಿ ಜಿಲ್ಲೆಯ ಜಿಲ್ಲಾ ವಕ್ಫ್ ಕಚೇರಿಯಲ್ಲಿ ...ರ್ಜಿ ಫಾರಂ ಲಭ್ಯವಾಗುತ್ತಿದ್ದರೆ, ಮಂಗಳೂರು ಕಚೇರಿಯಲ್ಲಿ ...ಏಕೆ ಅರ್ಜಿ ಫಾರಂಗಳನ್ನು ಜಿಲ್ಲೆಯ ಮೂಲೆಮೂಲೆಗಳಿಂದ ...ಬರುತ್ತಿದ್ದ ಯುವ ಮುಸ್ಲಿಂ ಉದ್ಯೋಗಾಕಾಂಕ್ಷಿಗಳಿಗೆ ...ನೀಡುತ್ತಿರಲಿಲ್ಲ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಇದರ ...ಂದೆ ಅವ್ಯವಹಾರ ನಡೆದಿರುವ ಸಾಧ್ಯತೆ ಜಾಸ್ತಿ ಇದ್ದು, ...ಬಗ್ಗೆ ರಾಜ್ಯ ವಕ್ಫ್ ಸಚಿವರು ಖುದ್ದು ಪರಿಶೀಲಿಸಿ ...ಕ್ರಮಕೈಗೊಳ್ಳಬೇಕಾಗಿದೆ.

- ಇರ್ಷಾದ್ ಮುಹಮ್ಮದ್, ಕಿನ್ನಿಗೋಳಿ

## ಹತ್ತಿ ಉರಿಯುತ್ತಿರುವ ಗಾಂಧಿ-ಪಟೇಲರ ನಾಡು

ಪಟೇಲ್ ಸಮುದಾಯದ ಹಾರ್ದಿಕ್ ಪಟೇಲ್ (23) ...ಎಂಬ ಪಡ್ಡೆ ಹುಡುಗನೊಬ್ಬ ಪ್ರಧಾನಿ ನರೇಂದ್ರ ಮೋದಿಗೆ ...ಸವಾಲು ಹಾಕಿ 'ಗುಜರಾತ್ ಮಾದರಿ ಅಭಿವೃದ್ಧಿ' ಹಾಗೂ ...'ವೈಬ್ರೆಂಟ್ ಗುಜರಾತ್' ಎಂಬ ಅವರ ಅಭಿವೃದ್ಧಿ ಮಾದರಿ...ಯನ್ನು ಲೇವಡಿ ಮಾಡುತ್ತಿದ್ದಾನೆ. ಆತನಿಗೆ ಅಪಾರ ಜನ ...ಬೆಂಬಲ ದೊರೆತಿದೆ. ಪಟೇಲ್ ಸಮುದಾಯದ ಜನ ...ನಮಗೂ ಮೀಸಲಾತಿ ಸೌಲಭ್ಯ ಬೇಕು ಎಂದು ಪಟ್ಟು ...ಹಿಡಿದಿದ್ದಾರೆ. ಮುಖ್ಯಮಂತ್ರಿ ಆನಂದಿ ಬೆನ್ ನಿದ್ದೆ ...ಕೆಡಿಸಿದ್ದಾರೆ.

...ಹಾಗೆ ಕೇಂದ್ರದ ನರೇಂದ್ರ ಮೋದಿ ಹಾಗೂ ಅಮಿತ್ ...ಷಾ ನಾಗಾಲೋಟದ ಜೋಡಿ ಕುದುರೆಗಳಿಗೆ ಲಗಾಮು ...ಹಾಕಲು ಯತ್ನಿಸುತ್ತಿದ್ದಾರೆ. ಇದರ ಹಿನ್ನೆಲೆ ತುಂಬ ಸಂಕೀರ್ಣ. ...ಸುಮಾರು ಮೂರು ದಶಕದ ಹಿಂದೆ ಯಾವ ಪಟೇಲ್ ...ಸಮುದಾಯ ಮಂಡಲ್ ವರದಿಯನ್ನು ವಿರೋಧಿಸಿತ್ತೋ ...ಅದೇ ಸಮುದಾಯ ಈಗ ನಮಗೂ ಮೀಸಲಾತಿ ಬೇಕು ...ಎಂದು ಗದ್ದಲ ಎಬ್ಬಿಸಿರುವುದು ವಿಪರ್ಯಾಸ. ...ಗಾಂಧಿ-ಪಟೇಲ್ ಜನ್ಮಭೂಮಿಯಲ್ಲಿ ಹಿಂಸಾಚಾರ-ಗಲಭೆ ... ಮೀರುತ್ತಿದ್ದು, ಈಗಾಗಲೇ ಪೊಲೀಸರ ಗೋಲಿಬಾರಿಗೆ ...ಹಲವು ಜೀವಗಳು ಬಲಿಯಾಗಿವೆ. ಪರಿಣಾಮವಾಗಿ ಆಗ ...2002ರ ಕೋಮುಗಲಭೆಯಲ್ಲಿ ಸಾವಿರಾರು ಜನ ...ಅಲ್ಪಸಂಖ್ಯಾತ ಕೋಮಿನ ಜನರು ಬಲಿಯಾದರೂ ...ಬಾಯಿಬಿಡದ ನರೇಂದ್ರ ಮೋದಿ ಮೊಟ್ಟ ಮೊದಲ ಬಾರಿಗೆ ...ಗಾಂಧೀಜಿಯ ಅಹಿಂಸಾ ಮಂತ್ರವನ್ನು ಜಪಿಸಿ ಶಾಂತಸ್ಥಿತಿಗೆ ...ಕರೆಕೊಟ್ಟಿರುತ್ತಾರೆ.


...ಶೇ. 15-16 ರಷ್ಟಿರುವ ಪಟೇಲ್ ಸಮುದಾಯ ...ಆರ್ಥಿಕವಾಗಿ ಕೆಲವರು ಮೇಲ್‌ಸ್ತರದಲ್ಲಿದ್ದರೂ ಬಹುಸಂಖ್ಯಾತ ... ರೈತಾಪಿಗಳೇ ಇದ್ದಾರೆ. ಇತ್ತ ಒಡೆದು ಆಳುವ ...ನೀತಿಯ ವಿಶ್ವಹಿಂದೂ ಪರಿಷತ್ ಮೀಸಲಾತಿ ಸೌಲಭ್ಯ ...ಆರ್ಥಿಕವಾಗಿ ಹಿಂದುಳಿದವರಿಗೆ ಮಾತ್ರ ಎಂದು ಹೇಳುವ ...ಮೂಲಕ ಪಟೇಲ್ ಸಮುದಾಯವನ್ನು ಪರೋಕ್ಷವಾಗಿ ...ಕಟ್ಟಲಾಗುತ್ತಿದೆ ಎಂಬ ಗುಮಾನಿಯೂ ಉಂಟು. ...ಈ ತಂತ್ರಗಾರಿಕೆ ಅನ್ವಯ, ಕೇರಳದ ನಂಬೂದರಿ ...ಬ್ರಾಹ್ಮಣರು ನಮ್ಮನ್ನೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿಸಿ ...ಎಂದು ಮನವಿ ಸಲ್ಲಿಸುತ್ತಿರುವುದು ಕಂಡುಬರುತ್ತದೆ. ಆ ...ವಿಚಾರ ಇರಲಿ.

...ಪ್ರಸ್ತುತ ಸರಕಾರೀ ಉದ್ಯೋಗಗಳೇ ಮಾಯವಾಗಿರು...ವಾಗ ಮೀಸಲಾತಿ ಸೌಲಭ್ಯಕ್ಕಾಗಿ ಇವರು ಹೋರಾಟಕ್ಕಿಳಿ...ದಿತ್ತಿರುವುದರಲ್ಲಿ ಅರ್ಥವಿಲ್ಲ ಎಂಬ ವಾದ ಒಂದೆಡೆ ...ಯಾದರೆ, ಮೀಸಲಾತಿಯನ್ನು ಪಟೇಲ್ ಸಮುದಾಯಕ್ಕೂ ...ನೀಡಿದರೆ ನಿಮ್ಮ ಪಾಲಿಗೆ ಸಂಚಕಾರ ಬರುತ್ತದೆಂದು ...ಇತರ ನಾಯಕರು ಆತಂಕಕ್ಕೀಡಾಗುತ್ತಿದ್ದಾರೆ. ಈ ಎಲ್ಲದರ ...ಪರಿಣಾಮ ಜಾತಿವಿಜಾತಿಗಳ ಹೆಸರಿನಲ್ಲಿ ದೇಶ ಇನ್ನೊಮ್ಮೆ ...ಹೊತ್ತಿಉರಿಯಾಗುವ ಸೂಚನೆ ಪಟೇಲ್ ಗದ್ದಲದಿಂದ ...ಕಂಡುಬರುತ್ತದೆ. ಮುಂದೆ ಇದು ಯಾವ ತಿರುವು ...ಪಡೆದುಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ...ಹಿನ್ನಲ್ಲಿ ದೊಡ್ಡಿಪಾಳ್ಯ ನರಸಿಂಹಮೂರ್ತಿಯವರ ...ಪಟೇಲ್ ಗದ್ದಲ-ಒಳಮರ್ಮವೇನು? ಎಂಬ ಲೇಖನ ...ಹಲವು ಒಳನೋಟಗಳಿಂದ ಕೂಡಿದ ರಾಜಕೀಯ ...ವಿಶ್ಲೇಷಣೆಯಾಗಿದೆ.

- ಪ್ರೊ. ಶಿವರಾಮಯ್ಯ

# 'ಪ್ರೀತಿ ಯಾವಾಗಲೂ ಸಹಜ ಪ್ರಕ್ರಿಯೆ': ರತ್ನಜ

**ನಿರ್ದೇಶಕ ರತ್ನಜ ಮತ್ತೆ ಸ್ಯಾಂಡಲ್‌ವುಡ್‌ಗೆ ವಾಪಸ್ಸಾಗಿದ್ದಾರೆ. ಇವರು 'ನೆನಪಿರಲಿ' ರೀತಿಯ ಹೊಸ ಬಗೆಯ ಸಿನಿಮಾ ಕೊಟ್ಟಿದ್ದವರು. ಈಗ ಮತ್ತೆ ವಿಭಿನ್ನ ಪ್ರೇಮಕತೆಯೊಂದಿಗೆ ಪ್ರೇಕ್ಷಕರಿಗೆ ಮುಖಾಮುಖಿ ಆಗುತ್ತಿದ್ದಾರೆ.**



'ನೆನಪಿರಲಿ' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಹೊಸ ಸಂಚಲನವುಂಟು ಮಾಡಿದವರು ನಿರ್ದೇಶಕ ರತ್ನಜ. ಚೊಚ್ಚಲು ಚಿತ್ರಕ್ಕೆ ಪ್ರತಿಷ್ಠಿತ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದವರು. ಅದೂ ದಾಖಲೆಯ ರೀತಿಯಲ್ಲಿ. ಆನಂತರ 'ಹೊಂಗನಸು', 'ಪ್ರೇಮಿಸಂ' ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದರು. ಈಗ 'ಪ್ರೀತಿಯಲ್ಲಿ ಸಹಜ' ಶೀರ್ಷಿಕೆಯಲ್ಲಿ ಅಪರೂಪದ ಕತೆಯನ್ನು ಸಿನಿಮಾ ಮಾಡಿದ್ದಾರೆ. ಈ ಕುರಿತು ಅವರು ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದಾರೆ.

** 'ಮುಂಗಾರು ಮಳೆ'ಗಿಂತಲೂ 'ನೆನಪಿರಲಿ' ಸಿನಿಮಾ ಕನ್ನಡ ಇಂಡಸ್ಟ್ರಿಯಲ್ಲಿ ಹೊಸ ಮನ್ವಂತರ ಸೃಷ್ಟಿ ಮಾಡಿತು. ಆದರೆ, ದಾಖಲಾಗಿದ್ದು ಮತ್ತೊಂದು ಸಿನಿಮಾ. ಈ ಕುರಿತು ಏನು ಹೇಳುತ್ತೀರಿ?*

ನನ್ನ ಸಿನಿಮಾದ ಬಗ್ಗೆ ನಾನೇ ಹೇಗೆ ಹೇಳಲಿ? ನನ್ನ ಚೊಚ್ಚಲು ಚಿತ್ರ 'ನೆನಪಿರಲಿ' ಬಗ್ಗೆ ಪ್ರೇಕ್ಷಕರು ಮಾತನಾಡಿದ್ದಾರೆ. ಮಾಧ್ಯಮಗಳು ಕೊಂಡಾಡಿವೆ. ಹಲವು ಪ್ರಶಸ್ತಿಗಳನ್ನೂ ಈ ಸಿನಿಮಾ ಪಡೆದಿದೆ. ಹೀಗಾಗಿ 'ನೆನಪಿರಲಿ' ಚಿತ್ರದ ಬಗ್ಗೆ ಹೆಚ್ಚಿಗೇನೂ ಹೇಳುವುದಿಲ್ಲ.

** ಸಿನಿಮಾ 'ರಂಗಕ್ಕೆ ಬಂದಿದ್ದು ಹೇಗೆ?*

ನಾನು ಮೂಲತಃ ಮಂಡ್ಯ ಪಕ್ಕದ ಹನಕೆರೆಯವನು. ಕೃಷಿಕ ಕುಟುಂಬದಲ್ಲಿ ಜನಿಸಿದ ನನಗೆ ಮೊದಲಿನಿಂದಲೂ ಸಿನಿಮಾ ಬಗೆಗೆ ಆಸಕ್ತಿ ಇತ್ತು. ಬಿ.ಇ ಮೆಕಾನಿಕಲ್ ಓದಿದ್ದರೂ, ಸಾಹಿತ್ಯದತ್ತ ಒಲವು ಬೆಳೆಸಿಕೊಂಡಿದ್ದೆ. 1998ರಲ್ಲಿ ಕೆ.ಎ.ಎಸ್ ಪರೀಕ್ಷೆಯಲ್ಲಿ ಪಾಸಾಗಿ, ಇನ್ನೇನು ಅಸಿಸ್ಟೆಂಟ್ ಕಮಿಷನರ್ ತರಬೇತಿಗೆ ಹೋಗಬೇಕೆಂದವನು ಮಾರ್ಗ ಬದಲಿಸಿ ಬೆಂಗಳೂರಿಗೆ ಬಂದೆ. ದಿನೇಶ್ ಬಾಬು ಬಳಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಸಿನಿಮಾ ನಿರ್ದೇಶನ ತರಬೇತಿ ಪಡೆದೆ. ಆನಂತರ ಹಂಸಲೇಖ ಅವರ ಒಡನಾಟ. ಹೀಗೆ ಸಿನಿಮಾ ರಂಗದಲ್ಲಿ ಗುರುತಿಸಿಕೊಂಡೆ.

** ರೀಮೇಕ್ ಸಿನಿಮಾ ಬಗೆಗಿನ ನಿಮ್ಮ ನಿಲುವು ಬದಲಾಗಿದೆಯೆ?*

'ನೆನಪಿರಲಿ', 'ಹೊಂಗನಸು', 'ಪ್ರೇಮಿಸಂ', ಸದ್ಯ 'ಪ್ರೀತಿಯಲ್ಲಿ ಸಹಜ' ಸಿನಿಮಾ ಮಾಡಿರುವೆ. ಎಲ್ಲವೂ ತಮ್ಮದೇ ಆದ ರೀತಿಯಲ್ಲಿ ಪ್ರೇಕ್ಷಕರಿಗೆ ಇಷ್ಟ ಆಗಿವೆ. ಅಂದು ರೀಮೇಕ್ ಸಿನಿಮಾ ಬಗ್ಗೆ ಒಂದು ಮಾತು ಹೇಳಿದ್ದೆ. ಸೋತರೂ ರಿಮೇಕ್ ಮಾಡುವುದಿಲ್ಲ ಎಂದು. ಈ ಹೊತ್ತಿಗೂ ನನ್ನ ಮಾತಿಗೆ ಬದ್ಧವಾಗಿದ್ದೇನೆ. ಯಾವುದೇ ಕಾರಣಕ್ಕೂ ರೀಮೇಕ್ ಸಿನಿಮಾಗಳನ್ನು ಮಾಡುವುದಿಲ್ಲ.

** 'ಪ್ರೀತಿಯಲ್ಲಿ ಸಹಜ' ಸಿನಿಮಾ ಬಗ್ಗೆ ಹೇಳಿ?*

ಪ್ರೀತಿಯ ಭಾವ ತೀವ್ರತೆಯೇ ಈ ಸಿನಿಮಾದ ಜೀವಾಳ. ಪ್ರೀತಿಯನ್ನು ಮತ್ತೊಂದು ರೀತಿಯಲ್ಲಿ ಬಣ್ಣಿಸುತ್ತಿದ್ದೇನೆ. ಅದನ್ನು ಬೇರೆ ರೀತಿಯಲ್ಲಿ ಹೇಳುವುದೇ ಸಿನಿಮಾದ ಉದ್ದೇಶ. ಹೀಗಾಗಿಯೇ ಮೂರು ರಾಜ್ಯಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಚಿತ್ರೀಕರಣ ಮಾಡಿದ್ದೇನೆ.

** ಮೂರು ರಾಜ್ಯಗಳ ಅವಶ್ಯಕತೆ ಏನಿತ್ತು?*

ಕೇರಳ, ಕರ್ನಾಟಕ ಮತ್ತು ತಮಿಳುನಾಡಿನ ಗಡಿ ಪ್ರದೇಶದಲ್ಲಿ ಸಿನಿಮಾ ಶೂಟಿಂಗ್ ಮಾಡಿದ್ದೇನೆ. ಸಿನಿಮಾದ ಕತೆಯು ಮೂರೂ ರಾಜ್ಯಗಳ ಗಡಿಗಳು ಸಂಧಿಸುವ ಸ್ಥಳದಲ್ಲಿ ನಡೆಯುತ್ತದೆ. ಹೀಗಾಗಿಯೇ ಅಂತಹ ಪ್ರದೇಶವನ್ನು ಆಯ್ಕೆ ಮಾಡಿಕೊಂಡೆ. ಅದೊಂದು ಅದ್ಭುತ ಪ್ರಪಂಚ. ಆ ಜಗತ್ತೇ ಹೊಸದು. ಅಲ್ಲೊಂದು ಸೆಟ್ ಹಾಕಿ ಶೂಟ್ ಮಾಡಿದ್ದೇವೆ.

** ಹೊಸ ಕಲಾವಿದರನ್ನೇ ಈವರೆಗೂ ಆಯ್ಕೆ ಮಾಡಿಕೊಂಡಿದ್ದೀರಿ. ಯಾಕೆ?*

ಹೊಸ ಕಲಾವಿದರು ಅಂತೇನೂ ಇಲ್ಲ. ನನ್ನ ಕತೆಗೆ ಬೇಕಾಗುವ ಕಲಾವಿದರನ್ನು ನಾನು ಆಯ್ಕೆ ಮಾಡಿಕೊಳ್ಳುತ್ತೇನೆ. ನನಗೆ ಕತೆ ಮುಖ್ಯ. ಹೀಗಾಗಿಯೇ ಹೊಸ ಕಲಾವಿದರನ್ನೇ ಆಯ್ಕೆ ಮಾಡಿಕೊಂಡೆ. ಆನಂತರ ಆ ಕಲಾವಿದರು ಸ್ಟಾರ್ ನಟರಾಗಿದ್ದಾರೆ. 'ಪ್ರೀತಿಯಲ್ಲಿ ಸಹಜ' ಸಿನಿಮಾದಲ್ಲಿ 'ಪ್ರೇಮಿಸಂ'ನಲ್ಲಿ ಪುಟ್ಟದೊಂದು ಪಾತ್ರ ಮಾಡಿದ್ದ ಸೂರ್ಯ ನಾಯಕ. ಅಕ್ಷಾ ಭಟ್ ನಾಯಕಿ. ಈಕೆ ಕಾಶ್ಮೀರಿ ಮೂಲದ ಹುಡುಗಿ. ಮಾಡೆಲಿಂಗ್ ಕ್ಷೇತ್ರದಲ್ಲೂ ಅಕ್ಷಾ ಹೆಸರು ಮಾಡಿದ್ದಾರೆ. ಇಬ್ಬರೂ ಹೊಸಬರು.

** ನಾಯಕನನ್ನು ಆಯ್ಕೆ ಮಾಡಿದ್ದು ಹೇಗೆ?*

ಸೂರ್ಯ ಈಗಾಗಲೇ ನನ್ನ ಸಿನಿಮಾದಲ್ಲಿ ಪುಟ್ಟ ಪಾತ್ರ ಮಾಡಿದ್ದರು. ಈ ಸಿನಿಮಾದಲ್ಲೂ ಅವರಿಗೆ ಪುಟ್ಟ ಪಾತ್ರ ಕೊಡೋಣ ಅಂತ ಕರೆಯಿಸಿಕೊಂಡೆ. ಆ ಪಾತ್ರವನ್ನು ಮಾಡಲು ಹೇಳಿದೆ. ಅವರ ಪರ್ಫಾರ್ಮೆನ್ಸ್ ಕಂಡು ಅಚ್ಚರಿ ಆಯಿತು. ಹೀಗಾಗಿ ನೀನೇ ನನ್ನ ಸಿನಿಮಾದ ನಾಯಕ ಅಂದೆ. ನಾಯಕಿ ಪಾತ್ರವೂ ಅಷ್ಟೇ... ಫೇಸ್‌ಬುಕ್‌ನಲ್ಲಿ ಅವರ ಫೋಟೋ ನೋಡಿ ಕರೆಯಿಸಿಕೊಂಡೆ. ಆಮೇಲೆ ಪಾತ್ರದ ಬಗ್ಗೆ ವಿವರಿಸಿದೆ. ಅವರು ಈ ಪಾತ್ರವನ್ನು ನಿರ್ವಹಿಸಬಲ್ಲರು ಎಂದು ತಿಳಿದುಕೊಂಡ ನಂತರವೇ ಈ ಜೋಡಿಯನ್ನು ಆಯ್ಕೆ ಮಾಡಿಕೊಂಡಿದ್ದು.

** ಸಿನಿಮಾದ ವಿಶೇಷತೆ ಏನು?*

ಈ ಚಿತ್ರದಲ್ಲಿ ಹಲವು ವಿಶೇಷತೆಗಳಿವೆ. ಅಪರೂಪದ ಕತೆ ಮತ್ತು ಹಾಡುಗಳಿವೆ. ತುಂಬಾ ವರ್ಷಗಳ ನಂತರ ದೇವರಾಜ್ ಇದರಲ್ಲಿ ಅಪರೂಪದ ಪಾತ್ರ ಮಾಡಿದ್ದಾರೆ. ಇವರ ಜತೆ ಸುಹಾಸಿನಿ ಕಾಣಿಸಿಕೊಂಡಿದ್ದಾರೆ. ಈ ಜೋಡಿಯ ಕತೆ ಒಂದು ಕಡೆ ಸಾಗಿದರೆ, ಯುವ ಜೋಡಿಯ ಕತೆ ಮತ್ತೊಂದು ದಿಕ್ಕಿನತ್ತ ಸಾಗುತ್ತದೆ. ಅದೇ ಸಿನಿಮಾದ ತಿರುಳು. ■



# ಚಡ್ಡಿ ಮೀಮಾಂಸೆ



ಚಡ್ಡಿ
ಕೆಲವರಿಗೆ ಅಸ್ಮಿತೆಯ ಭಾಗ
ಇನ್ನು ಕೆಲವರಿಗೆ ಚಡ್ಡಿಯೇ ಅಸ್ಮಿತೆ

ಚಡ್ಡಿ
ಕೆಲವರಿಗೆ ಒಳ ಉಡುಪು
ಇನ್ನು ಕೆಲವರಿಗೆ ಚಡ್ಡಿಯೇ ಉಡುಪು

ಕೆಲವರು ಚಡ್ಡಿ ತೊಟ್ಟದ್ದು ಕಾಣಿಸುವುದಿಲ್ಲ
ಇನ್ನು ಕೆಲವರ ಚಡ್ಡಿ ಇಷ್ಟಿಷ್ಟೇ ಹೊರಗಿಣುಕುತ್ತಾ
ಕಾಲಕಾಲಕ್ಕೆ
ತನ್ನ ಇರವನ್ನು ಆಷ್ಟಿಷ್ಟು ಸಾಬೀತುಪಡಿಸುತ್ತಿರುತ್ತದೆ
ಮತ್ತೆ ಕೆಲವರು ಖುಲ್ಲಂಖುಲ್ಲಾ
ಪ್ಯಾಂಟಿನ ಮೇಲೆಯೇ ಚಡ್ಡಿ ತೊಟ್ಟಿರುತ್ತಾರೆ

ಕೆಲವರು ಚಡ್ಡಿತೊಟ್ಟುಕೊಂಡೇ ಹುಟ್ಟಿದವರು
ಇನ್ನು ಕೆಲವರು ದೊಗ್ಗೆ ಮೊಗ್ಗೆಯಷ್ಟೇ
ಚಡ್ಡಿ ಹಾಕಿದವರು

ತಲೆಗೆ ಟೊಪ್ಪಿಯಾಗಿಯೂ ಅದನ್ನೇ ಹಾಕಿಕೊಂಡವರು

ಕೆಲವರ ಚಡ್ಡಿ
ಶತಮಾನಗಳಷ್ಟು ಹಳೆಯದು
ಒಮ್ಮೆಯೂ ಒಗೆಯದ್ದು
ಗಬ್ಬುನಾತ
ಇನ್ನು ಕೆಲವರದು ತೀರಾ ಹೊಸ ಚಡ್ಡಿ

ಅದರಲ್ಲೂ ಕೆಲವರದು ಸ್ವದೇಶಿ
ಇನ್ನು ಕೆಲವರದ್ದು ವಿದೇಶಿ

ಚಡ್ಡಿಯನ್ನು
ರಾಷ್ಟ್ರೀಯ ಉಡುಪು ಎಂದು ಘೋಷಿಸಬೇಕು
ಎನ್ನುವುದು ಕೆಲವರ ವಾದ
ರಾಷ್ಟ್ರಧ್ವಜವನ್ನಾಗಿಸಿ ಬಾನೆತ್ತರ ಹಾರಿಸಬೇಕು
ಎನ್ನುವುದು ಇನ್ನು ಕೆಲವರ ವಾದ
ಚಡ್ಡಿ ಹಾಕದವರು ಚಡ್ಡಿ ವಿರೋಧಿಗಳು
ಅವರು ದೇಶದ್ರೋಹಿಗಳು
ದೇಶದಲ್ಲಿರಲು ನಾಲಾಯಕ್ಕು
ಪಾಕಿಸ್ತಾನಕ್ಕೆ ಹೋಗಲಿ ಎನ್ನುವುದು
ಮತ್ತೆ ಕೆಲವರ ವಾದ

ಚಡ್ಡಿ ಈ ದೇಶದ ಭೂತ, ವರ್ತಮಾನ ಮತ್ತು ಭವಿಷ್ಯ
ಚಡ್ಡಿ ದೇಶಭಕ್ತಿಯ ಸಂಕೇತ
ಹಾಗಾಗಿ ನಮ್ಮ ಸರಕಾರದ ಹೊಸ ಸ್ಲೋಗನ್ನು -
'ಒಂದೋ ಚಡ್ಡಿ ತೊಡಿ
ಇಲ್ಲಾ ದೇಶ ಬಿಡಿ'

- ಶ್ರೀನಿವಾಸ ಕಾರ್ಕಳ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 07-10-2015 RNI No. KARKA

# ಮಹದಾಯಿಗೆ ಪೂಜಾ ಮಿಡಿತ



ಮಹದಾಯಿ ಯೋಜನೆಯ ಹೋರಾಟಕ್ಕೆ ಇಡೀ ಸಿನಿಮಾರಂಗವೇ ಸಾಥ್ ನೀಡಿತು. ಆದರೆ, ನಾಯಕಿಯರು ಮಾತ್ರ ಕಾಣಿಸಿಕೊಳ್ಳಲೇ ಇಲ್ಲ, ಕೆಲವು ನಟಿಯರು ಪಾರ್ಟಿಯಲ್ಲಿ ಬಿಜಿ ಆಗಿದ್ದರೆ, ಇತರ ನಾಯಕಿಯರು ಟಿವಿ ಮುಂದೆ ಕೂತಿದ್ದರು. ನಾಯಕಿಯರ ಪ್ರತಿನಿಧಿ ಎನ್ನುವಂತೆ ಶ್ರುತಿ ಮತ್ತು ಪೂಜಾ ಗಾಂಧಿ ಭಾಗವಹಿಸಿದ್ದರು. ಹೋರಾಟದಲ್ಲಿ ಭಾಗವಹಿಸಿ, ಬೆಂಗಳೂರಿಗೆ ಬಂದ ಪೂಜಾ ಈ ಕುರಿತು ಕಿರುಚಿತ್ರ ಮಾಡಲು ಮುಂದಾಗಿದ್ದಾರೆ.

ಈ ಕಿರುಚಿತ್ರವು ಮಹದಾಯಿ ಹೋರಾಟದ ರೈತರಿಗೆ ಸ್ಫೂರ್ತಿ ನೀಡಲಿದೆಯಂತೆ. ಅಲ್ಲದೇ ಆ ಭಾಗದ ರೈತರ ಕಷ್ಟಗಳನ್ನು ಚಿತ್ರದಲ್ಲಿ ಸೆರೆ ಹಿಡಿಯುವುದರಿಂದ, ಇದನ್ನು ಮೋದಿ ಸರಕಾರಕ್ಕೂ ಕಳುಹಿಸಿಕೊಡುವ ಉದ್ದೇಶ ಅವರದ್ದು. ಈ ಕಿರುಚಿತ್ರಕ್ಕೆ ಒಂದು ತಿಂಗಳ ಕಾಲ ಶೂಟಿಂಗ್ ನಡೆಯಲಿದೆಯಂತೆ. ನೈಜಕತೆಗಳ ಮೂಲಕ ಸಿನಿಮಾರಂಗದಲ್ಲಿ ಗುರುತಿಸಿಕೊಳ್ಳುತ್ತಿರುವ ಪೂಜಾ ಗಾಂಧಿ, ಈಗ ಎರಡು ಚಿತ್ರಗಳಲ್ಲಿ ನಟಿಸುತ್ತಿದ್ದಾರೆ. ಈ ಕಿರುಚಿತ್ರ ಒಂದಾದರೆ, ಇನ್ನೊಂದು ಸಿನಿಮಾ ಶೋಷಿತ ಹೆಣ್ಣಿನ ಪರ ಧ್ವನಿ ಎತ್ತುವ ಸಿನಿಮಾವಂತೆ

# ನಿರ್ದೇಶನದತ್ತ ನ...

ಮಾಡೆಲಿಂಗ್ ಕ್ಷೇತ್ರದಲ್ಲಿ ಗುರುತಿಸಿಕೊಂಡಿ... ಆನಂತರ ಒಂದೆರಡು ಕನ್ನಡ ಸಿನಿಮಾಗಳಲ್ಲಿ ... ಸಿನಿಮಾಗಳು ಸಿಗದೇ ಅವರು ಬಾಂಬೆಯ ... ಪ್ರಪಂಚದತ್ತ ವಾಲಿದರು. ಈಗ ಮತ್ತೆ ಸ್ಯಾಂ... ಬಂದಿದ್ದಾರೆ. ಅದು ನಿರ್ದೇಶಕಿಯಾಗಿ ಅನ್ನುವು...

ಈ ನಮ್ರತಾ ಸ್ಯಾಂಡಲ್‌ವುಡ್‌ಗೆ ಪರಿಚಿತ ... ಅಲ್ಲ, ಮಾಸ್ಟರ್ ಆನಂದ್ ಜತೆ '5 ಇಡಿಯಟ್... ನಟಿಸಿದ್ದರು. ಆನಂತರ ಅವರು ಸಿನಿಮಾರಂಗದಲ್ಲಿ ಕಾ... ಇಲ್ಲ, ಈಗ 'ಟು ಬಿಎಚ್‌ಕೆ' ಎಂಬ ಸಿನಿಮಾವನ್ನು... ಮಾಡುತ್ತಿದ್ದಾರೆ. ಇದು ರವೀಂದ್ರ ನಿವ... ಮೂಡಿಬರಲಿರುವ ಚಿತ್ರ.

'ರಿಂಗ್‌ರೋಡ್' ಸೇರಿದಂತೆ ಹಲವು ಚಿತ್ರ... ಹೂಡಿರುವ ರವೀಂದ್ರ 'ರಿಂಗ್‌ರೋಡ್' ... ನಿರ್ದೇಶಕಿಯನ್ನೇ ಆಯ್ಕೆ ಮಾಡಿಕೊಂಡಿದ್ದರು. ಈ... ಅದನ್ನು ಮುಂದುವರಿಸಿದ್ದಾರೆ. ಇದು ಎರಡು ... ತಯಾರಾಗುತ್ತಿರುವ ಸಿನಿಮಾ. ಕನ್ನಡ ಮತ್ತು ಹಿಂದಿಯ ಕಲಾವಿದರು ತಾರಾಗಣದಲ್ಲಿ ಇರಲಿದ್ದಾರೆ.



# ಕೆಜಿಎಫ್‌ನಿಂದ ಯಶ್ ದೂರ?


ಯಶ್ ಅವರ ಮುಂದಿನ ಸಿನಿಮಾ 'ಕೆಜಿಎಫ್' ಎಂದು ಹೇಳಲಾಗಿತ್ತು, ಇದು ಐವತ್ತು ಕೋಟಿ ರೂಪಾಯಿಯಲ್ಲಿ ನಿರ್ಮಾಣ ಆಗುತ್ತಿರುವ ಚಿತ್ರ ಎಂದೂ ದೊಡ್ಡ ಸುದ್ದಿ ಮಾಡಿತ್ತು, ಸದ್ಯ ಸಿಕ್ಕಿರುವ ಮಾಹಿತಿಯ ಪ್ರಕಾರ ಯಶ್‌ಗೆ 'ಕೆಜಿಎಫ್' ಚಿತ್ರಕತೆಯಲ್ಲಿ ಇನ್ನೇನೋ ಬದಲಾವಣೆ ಬೇಕಿದೆಯಂತೆ. ಹೀಗಾಗಿಯೇ ಅವರು ಈ ಚಿತ್ರವನ್ನು ಮುಂದಕ್ಕೆ ಹಾಕಿದ್ದಾರೆ. ಈ ಮಧ್ಯೆ ಮಹೇಶ್ ರಾವ್ ನಿರ್ದೇಶನದ ಚಿತ್ರದಲ್ಲಿ ನಟಿಸುವುದಾಗಿ ಹೇಳಿದ್ದಾರೆ.

ಸಿನಿಮಾ ವಿಷಯದಲ್ಲಿ ಯಶ್ ಪರ್‌ಫೆಕ್ಟ್. ಕತೆ, ಚಿತ್ರಕತೆ ಮತ್ತು ತಂತ್ರಜ್ಞರು ಅವರಿಗೆ ಇಷ್ಟವಾಗದೇ ಇದ್ದರೆ ನಟಿಸುವುದಿಲ್ಲ, ಅಲ್ಲದೇ ಚಿತ್ರವು ತಮ್ಮ ಹಿಡಿತಕ್ಕೆ ಸಿಗುವುದಿಲ್ಲ ಅಂತ ಅನ್ನಿಸಿದರೂ ಕ್ಯಾತೆ ತೆಗೆಯುತ್ತಾರೆ.

ಸದ್ಯ ಇವರು 'ಮಾಸ್ಟರ್‌ಪೀಸ್' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಸಿನಿಮಾದ ಬಹುತೇಕ ಚಿತ್ರೀಕರಣ ಮುಗಿದಿದೆ. ಅಕ್ಟೋಬರ್‌ನಿಂದ ಹೊಸ ಸಿನಿಮಾದ ಶೂಟಿಂಗ್. ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ನಿರ್ದೇಶಕ ಮಹೇಶ್ ರಾವ್ ರಿಮೇಕ್ ಚಿತ್ರಗಳ ಮೂಲಕ ಗುರುತಿಸಿಕೊಂಡವರು. ಆದರೆ ಈ ಚಿತ್ರ ಸ್ವಮೇಕ್ ಎನ್ನುವುದು ಸಮಾಧಾನದ ಸಂಗತಿ.



# ನಾನು ಅವನಲ್ಲ ಅವಳು



ಸಂಚಾರಿ ವಿಜಯ್‌ಗೆ ರಾಷ್ಟ್ರ ಪ್ರಶಸ್ತಿ ತಂದು ಕೊಟ್ಟ 'ನಾನು ಅವನಲ್ಲ ಅವಳು' ಸಿನಿಮಾ ಈ ವಾರ ರಾಜ್ಯಾದ್ಯಂತ ಬಿಡುಗಡೆ ಆಗುತ್ತಿದೆ. ಈ ಚಿತ್ರಕ್ಕಾಗಿಯೇ ವಿಜಯ್ ಅತ್ಯುತ್ತಮ ನಟ ರಾಷ್ಟ್ರ ಪ್ರಶಸ್ತಿ ಪಡೆದಿದ್ದಾರೆ.

ರವಿ.ಆರ್. ಗರಣಿ ನಿರ್ಮಾಣದಲ್ಲಿ ಮೂಡಿಬಂದಿರುವ ಚಿತ್ರವನ್ನು ಬಿ.ಎಸ್.ಲಿಂಗದೇವರು ನಿರ್ದೇಶನ ಮಾಡಿದ್ದಾರೆ. ಸಿನಿಮಾದ ಮತ್ತೊಂದು ವಿಶೇಷತೆ ಅಂದರೆ, ಮಂಗಳಮುಖಿಯರಾದ ಸುಮಿತ್ರ ಮತ್ತು ಮಣಿಯಮ್ಮ ಕೂಡ ಚಿತ್ರದಲ್ಲಿ ನಟಿಸಿರುವುದು. ,

ಲಿವಿಂಗ್ ಸ್ಮೈಲ್ ವಿದ್ಯಾ ಬರೆದಿರುವ ಕಥೆಗೆ ನಿರ್ದೇಶಕರೆ ಚಿತ್ರಕಥೆ ಬರೆದಿದ್ದಾರೆ. ಅನೂಪ್ ಸೀಳಿನ್ ಸಂಗೀತ ನಿರ್ದೇಶನದಲ್ಲಿ ಚಿತ್ರ ಮೂಡಿಬಂದಿದೆ. ನಾಗರಾಜ್ ಹಾಗೂ ರಾಜು ಅವರ ಪ್ರಸಾಧನವಿದೆ. ಇವರು ಕೂಡ ಪ್ರಸಾಧನಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ.

# ಬಾಂಬೆಗೆ ಶಿಫ್ಟ್ ಆದ ರಾಗಿಣಿ



ರಾಗಿಣಿ

ಗಾಸಿಪ್ ಮತ್ತು ಕಾಂಟ್ರೊವರ್ಸಿಗಳಿಂದಾಗಿ ಬೇಸತ್ತಿರುವ ರಾಗಿಣಿ ಸ್ವಲ್ಪ ದಿನದ ಮಟ್ಟಿಗೆ ಮುಂಬಯಿಗೆ ಶಿಫ್ಟ್ ಆಗಿದ್ದಾರೆ. ಶೂಟಿಂಗ್‌ನಲ್ಲಿ ಅಪಘಾತ ಆಗಿರುವುದರಿಂದ, ಅದೇ ನೆಪದಲ್ಲಿ ಅವರು ಮುಂಬಯಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ.

ಸಿನಿಮಾ ಇಲ್ಲದೇ ಹೋದರೂ, ಕರ್ನಾಟಕದಲ್ಲೇ ಉಳಿಯುತ್ತೇನೆ ಅಂದವರು ಮುಂಬಯಿಗೆ ಹಾರಲು ಕಾರಣ ಬಿಟ್ಟುಬಿಡದೇ ಅವರನ್ನು ಬೆನ್ನು ಹತ್ತಿರುವ ವಿವಾದಗಳು. 'ನಾಟಕೋಳಿ' ಜಗಳ ಇನ್ನೂ ಮುಗಿದಿಲ್ಲ, ಸುದೀಪ್ ಡೈವೋರ್ಸ್ ವಿಷಯದಲ್ಲೂ ಸುಖಾಸುಮ್ಮನೆ ರಾಗಿಣಿ ಹೆಸರು ಕೇಳಿಬಂದಿದೆ. ಅಲ್ಲದೇ ಅವರ 'ನಾನೇ' ಸಿನಿಮಾ ಕೂಡ ವಿವಾದಕ್ಕೆ ಸಿಲುಕಿದೆ. ಇವೆಲ್ಲದರಿಂದ ತಪ್ಪಿಸಿಕೊಳ್ಳಲು ಒಂದಿಷ್ಟು ದಿನಗಳ ಕಾಲ ಅವರು ಮುಂಬಯಿಯಲ್ಲೇ ನೆಲೆಯೂರಲಿದ್ದಾರೆ. ಶೂಟಿಂಗ್‌ಗೆ ಅಲ್ಲಿಂದಲೇ ಬಂದುಹೋಗುತ್ತಿದ್ದಾರೆ. ಈ ಮಧ್ಯೆ ಮೊನ್ನೆಯಷ್ಟೇ ಅವರಿಗೆ ಮುಂಬಯಿಯ ಸಂಸ್ಥೆಯೊಂದು 'ಪ್ರಾಮಿಸಿಂಗ್ ಸ್ಟಾರ್' ಪ್ರಶಸ್ತಿ ನೀಡಿದೆ. ಅದು ತಮಗೆ ಸಿಕ್ಕಿರುವ ಆಸ್ಕರ್ ಪ್ರಶಸ್ತಿ ಎನ್ನುವಂತೆ ಬೀಗುತ್ತಿದ್ದಾರೆ. ಮಾಧ್ಯಮಗಳ ಜತೆ ಮಾತಾಡುತ್ತಾ, ಅದನ್ನು ಆಸ್ಕರ್ ಪ್ರಶಸ್ತಿಗೂ ಹೋಲಿಸಿ ನಗೆಪಾಟಲಿಗೀಡಾಗಿದ್ದಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764
Fax : 26604536, E-mail :lankesh70@rediffmail.com